ಶ್ರೀ ಎಲ್. ಆರ್. ಶಿವರಾಮೇಗೌಡ.—ವಿರೋಧ ಪಕ್ಷದವರನ್ನು ಒಳಪಡಿಸಿಕೊಂಡು, ವಿರೋಧ ಪಕ್ಷದವರ ಸಹಕಾರ ತೆಗೆದುಕೊಂಡು, ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿರತಕ್ಕ ಪ್ರತೀತ ಇರುವುದರಿಂದ ವಿರೋಧ ಪಕ್ಷದವರು ಇಲ್ಲದೆ ಇಂತಕ್ಕಂಥ ಸಂದರ್ಭದಲ್ಲಿ ಬಿಸಿನೆಸ್ ನಡೆಸುವುದು ಸೂಕ್ತವಲ್ಲವೆಂದು ನನಗನಿಸುತ್ತದೆ. ಅವರನ್ನು ಬಿಟ್ಟು ಮಾಡಿದರೆ ಅವರು ಹೊರಗಡೆ ಹೇಳುತ್ತಾರೆ ಅದಕ್ಕೆ ಅವಕಾಶ ಕೊಡದೆ ಇರುವ ರೀತಿ 10 ನಿಮಿಷಗಳ ಕಾಲ ಸಭೆಯನ್ನು ಮುಂದೂಡಿದರೂ ಚಿಂತೆ ಇಲ್ಲ. ದಯಮಾಡಿ ಈಗಲೇ ಅವರನ್ನು ಕರೆಸಿ ಮಾತನಾಡುವುದು ಒಳ್ಳೆಯದು.

ಉಪಾಧ್ಯಕ್ಷಿಣಿಯವರು.—ಈಗಾಗಲೇ ಹೇಳಿದ್ದೇನೆ. ಅವರನ್ನು ಕರೆಸಿ ಮಾತನಾಡಲಿಕ್ಕೆ ಸ್ಪೀಕರ್ ರವರು ವ್ಯವಸ್ಥೆ ಮಾಡಿದ್ದಾರೆ,

ವಿತ್ತೀಯ ಕಾರ್ಯಕಲಾಪಗಳು

1990-91ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ.

(ಸಣ್ಣ ನೀರಾವರಿ, ನೀರಾವರಿ ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು, ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು) ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು)

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):— ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ತಂದಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರಗಳ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಕ್ಷೇತ್ರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಅನುಗುಣವಾದಂಥ ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸ ಬಯಸುತ್ತೇನೆ.

ಲೋಕೋಪಯೋಗಿ ಇಲಾಖೆ ಅಂದರೆ ಬಹಳ ಪ್ರಾಮುಖ್ಯತೆಯುಳ್ಳ ಇಲಾಖೆ. ಇದು ಬಹಳ ವಿಶಾಲವಾದ ಇಲಾಖೆಯಾಗಿದ್ದು ದೊಡ್ಡ ಪ್ರಮಾಣದಲ್ಲಿ ಇಲ್ಲಿ ಕೆಲಸಕಾರ್ಯಗಳು ಜರುಗುತ್ತಿರುತ್ತವೆ. ಆಯವ್ಯಯದಲ್ಲಿಯೂ ಕೂಡ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಈ ಖಾತೆಗೆ ಹಣವನ್ನು ಮೀಸಲಿಡುತ್ತಾರೆ. ಬೃಹತ್ ಪ್ರಮಾಣದಲ್ಲಿ ಕೆಲಸಕಾರ್ಯಗಳ ಉಸ್ತುವಾರಿಯು ಈ ಇಲಾಖೆಗೆ ಇರುವುದರಿಂದ ಸಾಮಾನ್ಯವಾಗಿ ಸಾರ್ವಜನಿಕರಲ್ಲಿ ಈ ಇಲಾಖೆಯ ಬಗ್ಗೆ ಅಷ್ಟು ಒಳ್ಳೆಯ ಅಭಿಪ್ರಾಯ ಇರದೆ, ಇಲ್ಲಿ ಏನೋ ಅವ್ಯವಹಾರಗಳು ನಡೆಯುತ್ತವೆ ಎಂಬ ಒಂದು ಭಾವನೆ ಹುಟ್ಟಿರುತ್ತದೆ. ದಿವಂಗತ ರಾಜಾಜಿಯವರು ಮದ್ರಾಸ್ ರಾಜ್ಯದಲ್ಲಿ ಅಂದು ಮುಖ್ಯ ಮಂತ್ರಿಯವರಾಗಿದ್ದಾಗ ಒಂದು ಮಾತನ್ನು ಹೇಳಿದ್ದುದನ್ನು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ತಂದು ಕೊಡುತ್ತೇನೆ. ಲೋಕೋಪಯೋಗಿ ಇಲಾಖೆಯು ನನ್ನ ಒಂದನೇ ನಂಬರ್ ಶತೃ ಎಂದು ಅವರು ಹೇಳಿದ್ದರು. ಅಂದರೆ ಅವರು ಇಲಾಖೆಯ ವಿಸ್ತಾರ ಮತ್ತು ಕಾರ್ಯಗಳನ್ನು ಗಮನಿಸಿ ಮತ್ತು ಅಲ್ಲಿ ನಡೆಯಬಹುದಾದ ಲೋಪದೋಷಗಳನ್ನು ಗಮನಿಸಿ ಈ ಮಾತನ್ನು ಹೇಳಿರಬಹುದು. ಅಷ್ಟು ದೊಡ್ಡದಾದ ಈ ಇಲಾಖೆಯಲ್ಲಿ ಅನೇಕ ಹೆಚ್ಚು ಕಡಿಮೆಗಳು ಆಗುತ್ತವೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅವನ್ನು ಹೇಗೆ ಸುಧಾರಣೆ ಮಾಡಿಕೊಂಡು ಹೋಗಬೇಕೆಂಬುದು ಇದರ ಪ್ರಮುಖ ಅರ್ಥ. ಈ ಇಲಾಖೆಯಲ್ಲಿ ದಕ್ಷತೆಯು ಬಹಳಷ್ಟು ಹೆಚ್ಚಿಗೆ ಆಗಬೇಕು. ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಇಂಜಿನಿಯರ್ಸ್ ಆಗಲಿ, ಅಧಿಕಾರಿಗಳೇ ಆಗಲಿ, ಇತರ ಸಿಬ್ಬಂದಿ ವರ್ಗವೇ ಆಗಿರಲಿ ಇವರೆಲ್ಲರೂ ಮಾಡತಕ್ಕಂಥ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ಮನಸ್ಸುಕೊಟ್ಟು ಮಾಡಿದರೆ ಲೋಕೋಪಯೋಗಿ ಇಲಾಖೆಗೆ ಒಳ್ಳೆಯ ಹೆಸರು ಬರುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಅದರ ಮೂಲಕ ಸಾರ್ವಜನಿಕರಿಗೂ ಒಳ್ಳೆಯ ಕೆಲಸ ಕಾರ್ಯಗಳು ಆಗುತ್ತವೆ. ಅಂತೆಯೇ ಅವರು ಮಾಡುವ ಯಾವುದೇ ಕೆಲಸದಲ್ಲಿನ ಗುಣಮಟ್ಟವೂ ಕೂಡ ಉತ್ತಮ ರೀತಿಯದ್ದಾಗಿರಬೇಕು. ಇವೊತ್ತು ನಮ್ಮಲ್ಲಿ ನಡೆಯುವ ಕೆಲಸ ಕಾರ್ಯಗಳ ಗುಣಮಟ್ಟ ಯಾವ ರೀತಿಯಲ್ಲಿ ಇದೆ ಎಂಬುದು ಎಲ್ಲರಿಗೂ ಗೊತ್ತಿರುವಂಥ ವಿಚಾರವೇ ಆಗಿದೆ. ಆದುದರಿಂದ ಗುಣಮಟ್ಟವನ್ನು ಸುಧಾರಿಸಲು ನಾವು ಇವೊತ್ತು ತೀವ್ರತರದಲ್ಲಿ ಮನಸ್ಸು ಮಾಡದೇ ಹೋದರೆ ಈ ಇಲಾಖೆಗೆ ಬಂದಿರತಕ್ಕಂಥ ಅಪಕೀರ್ತಿಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಬಹಳಷ್ಟು ವರ್ಷಗಳ ಹಿಂದೆ ಆಗಿರತಕ್ಕಂಥ ಕಾಮಗಾರಿಗಳಿಗೂ, ಇಂದು ನಡೆಯುತ್ತಿರತಕ್ಕಂಥ ಕಾಮಗಾರಿಗಳಿಗೂ

ಗುಣಮಟ್ಟದ ವಿಚಾರದಲ್ಲಿ ನಾವು ಹೋಲಿಕೆ ಮಾಡುವುದಾದರೆ ಈಗಿನ ಕೆಲಸಗಳ ಗುಣಮಟ್ಟ ಎಷ್ಟು ಕಡಿಮೆ ದರ್ಜೆಯದು ಎಂದು ವೇದ್ಯವಾಗುತ್ತದೆ.

ಆಗಿನ ಇಂಜಿನಿಯರ್ಸ್‌ಗಳ ಬುದ್ಧಿವಂತಿಕೆ ಮತ್ತು ದಕ್ಷತೆಯಿಂದ ಆಗಿನ ದಿವಸಗಳಲ್ಲಿ ಮಾಡಿದ ಕಾಮಗಾರಿಗಳು ಇಂದಿಗೂ ಕೆಡದೆ ಗಟ್ಟಿಮುಟ್ಟಾಗಿರುವುದನ್ನು ನಾವು ನೋಡಬಹುದು ಮತ್ತು ಆ ಕಾಮಗಾರಿಗಳಲ್ಲಿ ಅವರುಗಳ ಪರಿಶ್ರಮ ಮತ್ತು ಶ್ರದ್ಧೆಯನ್ನು ಮನದಟ್ಟು ಮಾಡಿಕೊಳ್ಳಬಹುದು. ಎಷ್ಟೋ ಒಳ್ಳೆಯ ಹೆಸರಾಂತ ಕಾಮಗಾರಿಗಳು ಇಂದಿಗೂ ಆ ಜನರ ದಕ್ಷತೆಯನ್ನು ಎತ್ತಿ ತೋರಿಸುವಂತಿದೆ. ಜಗದ್ವಿಖ್ಯಾತ ಸರ್ ಎಂ. ವಿಶ್ವೇಶ್ವರಯ್ಯನವರು ಎಷ್ಟು ಪ್ರಖ್ಯಾತ ಇಂಜಿನಿಯರ್ ಆಗಿದ್ದರು. ಅವರು ೧೦೧ ವರ್ಷಗಳ ಕಾಲ ಬಾಳಿದ್ದರು. ಅವರು ತಮ್ಮ ಜೀವಿತಾವಧಿಯಲ್ಲಿ ಮಾಡಿದ ಕೆಲಸ ಕಾರ್ಯಗಳು ಎಷ್ಟು? ಅವುಗಳ ಹಿರಿಮೆ ಏನು ಎಂಬುದನ್ನ ಎಲ್ಲರೂ ತಿಳಿದುಕೊಂಡಿದ್ದೇವೆ. ಅವರು ಎಷ್ಟು ಪ್ರತಿಭಾನ್ವಿತರು ಅಂದರೆ ಅವರು ದಿವಂಗತರಾದ ಮೇಲೆ ಅವರ ಮೆದುಳನ್ನು ಪಡೆಯಲು ಅಮೇರಿಕಾ ದೇಶದವರು ಮುಂದಾದರು ಎಂದು ಕೇಳಿ ತಿಳಿದಿದ್ದೇವೆ ಅವರು ಕಟ್ಟಿದ ಕನ್ನಂಬಾಡಿಅಣೆಕಟ್ಟು ಇಂದಿಗೂ ನಮ್ಮೆಲ್ಲರ ಕಣ್ಣು ಮುಂದೆ ಇವೆ ಇಂಥ ಎಷ್ಟು ಉದಾಹರಣೆಗಳು ಇಲ್ಲ? ಅಂತೆಯೇ ದಿವಂಗತ ಕೆಂಗಲ್ ಹನುಮಂತಯ್ಯನವರು ಕಟ್ಟಿಸಿದ ನಮ್ಮ ಈ ವಿಧಾನಸೌಧ ಇವೊತ್ತಿಗೂ ನವನವೀನತೆಯ ಸಾಕಾರವಾಗಿ, ಶೋಭಿಸುತ್ತಿರುವ ಈ ಭವ್ಯ ಕಟ್ಟಡವನ್ನು ನೋಡಿದರೆ ಸೋಜಿಗೆ ಎನ್ನುವಷ್ಟು ಮಟ್ಟದಲ್ಲಿ ಇಂದಿಗೂ ಇದೆ. ಆಗಿನ ನಮ್ಮ ಇಂಜಿನಿಯರ್‌ಗಳು. ಕೆಲಸಗಾರರು, ಅಧಿಕಾರಿಗಳು ಎಲ್ಲಾ ಸೇರಿ ಎಷ್ಟು ದಕ್ಷತೆಯಿಂದ ಈ ಕಟ್ಟಡವನ್ನು ಕಟ್ಟಿದ್ದರು ಎಂಬುದನ್ನು ನಾವು ಊಹಿಸಿಕೊಳ್ಳಬೇಕು. ಇವುಗಳನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲ.

ಆದರೆ ಇವೊತ್ತಿನ ಕಾಮಗಾರಿಗಳನ್ನು ನೋಡಿದರೆ ಬೇಸರವಾಗುತ್ತದೆ. ಅನೇಕ ಕಟ್ಟಡಗಳು ಸೇತುವೆಗಳು, ಅಣೆಕಟ್ಟುಗಳು ಇಂದೂ ಹೆಚ್ಚು ಪ್ರಮಾಣದಲ್ಲಿ ಆಗುತ್ತಿವೆ. ಕಟ್ಟಿದ ಎರಡು ಮೂರು ವರ್ಷಗಳಲ್ಲಿಯೇ ಸೇತುವೆ ಬಿರುಕು ಬಿಡುತ್ತದೆ. ಕಟ್ಟಡಗಳು ಬಿರುಕು ಬಿಡುತ್ತವೆ, ನೀರು ಸೋರುತ್ತದೆ. ಕಟ್ಟಡ ಬಿದ್ದೂ ಹೋಗುವಷ್ಟು ಕೀಳುಮಟ್ಟದ ಕಾಮಗಾರಿ ಇಂದು ನಮ್ಮ ಕಣ್ಣೆದುರು ಇರುವುದನ್ನು ನಾನಾ ರೀತಿಯಲ್ಲಿ ನಾವು ಕಾಣುತ್ತೇವೆ. ಆದುದರಿಂದ ನಾವು ಮಾಡುವಂಥ ಯಾವುದೇ ಕೆಲಸದಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಇದು ರಾಜ್ಯದ ಸರ್ವಜನತೆಯ ಹಣ ಇದರ ಸದುಪಯೋಗವಾಗಬೇಕು. ಈ ಹಣದಿಂದ ಮಾಡಿದಂಥ ಯಾವುದೇ ಕೆಲಸಕಾರ್ಯಗಳು ಬಹಳಷ್ಟು ಕಾಲ ಬಾಳಬೇಕು ಮತ್ತು ಶಾಶ್ವತವಾಗಿ ಉಳಿಯುವಂತಿರಬೇಕು. ಉದಾಹರಣೆಗೆ ನಮ್ಮಲ್ಲಿ ಯಾವಾಗಲೂ ಮಾರ್ಗಗಳಿಗೆ ಡಾಂಬರೀಕರಣವಾಗುತ್ತದೆ. ಹಿಂದೆ ಹೀಗೆ ಡಾಂಬರ್ ಹಾಕಿದರೆ ಅದು ಗಟ್ಟಿಮುಟ್ಟಾಗಿ ನಾಲ್ಕೈದು ವರ್ಷಗಳ ಕಾಲ ಬಾಳುತ್ತಿತ್ತು. ಆದರೆ ಈಗ ಒಂದೇ ವರ್ಷದಲ್ಲಿ ಹಾಳಾಗಿ, ಹೊಂಡ ಬೀಳುವುದು, ಕಿತ್ತು ಹೋಗುವುದು ಸಾಮಾನ್ಯವಾಗಿದೆ. ಮಳೆ ಬಂದಾಗ ಎಷ್ಟು ಕೀಳುಮಟ್ಟದಲ್ಲಿ ನಮ್ಮ ಡಾಂಬರೀಕರಣ ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಹೀಗೆ ಆಗಲು ಕಾರಣ ಏನು ಮತ್ತು ಅದನ್ನು ಹೇಗೆ ನಿವಾರಿಸಬೇಕು ಎಂಬ ಬಗ್ಗೆ ಗಮನ ಹರಿಸಬೇಕು.

ನನ್ನ ಉದ್ದೇಶ ಏನೆಂದರೆ ಈ ಕಾಮಗಾರಿಗಳ ಗುಣಮಟ್ಟ ಹೆಚ್ಚಾಗಬೇಕು. ೩೦–೪೦ ವರ್ಷಗಳ ಹಿಂದಿನ ರಸ್ತೆಗಳು ಮೋರಿಗಳು ಸೇತುವೆಗಳು ಕಟ್ಟಡಗಳು ಇಂದಿಗೂ ಎಷ್ಟೊಂದು ಮಜಬೂತಾಗಿ ಇರುವುದನ್ನು ಕಾಣುತ್ತೇವೆ. ಆದರೆ ಇತ್ತೀಚಿನ ಕಾಮಗಾರಿಗಳು ಹಾಗಿಲ್ಲ. ಆದ್ದರಿಂದ ಅಧಿಕಾರಿಗಳು ಇಂಜಿನಿಯರ್‌ಗಳು ಈ ಬಗ್ಗೆ ಕಳಕಳಿಯಿಂದ ಗುಣಮಟ್ಟ ಕಾಪಾಡುವ ವ್ಯವಸ್ಥೆಗೆ ಮುಂದಾಗಬೇಕು. ಅದೇ ರೀತಿ ಗುತ್ತಿಗೆದಾರರನ್ನು ನೇಮಕ ಮಾಡುವಾಗ ಯೋಗ್ಯರಿಗೆ ಕೊಟ್ಟರೆ ಕೆಲಸ ಒಳ್ಳೆಯದಾಗುತ್ತದೆ. ಈಗ ಹಣ ಮಾಡಬೇಕೆಂಬ ಆಸೆ ಎಲ್ಲರಿಗೂ ಇದೆ. ನಮ್ಮ ನಾಡು ಗಂಧದ ನಾಡು, ಚಿನ್ನದ ನಾಡು, ಬಾಳೆಯ ತೆಂಗಿನ ಸೊಬಗಿನ ನಾಡು ಕನ್ನಡ ನಾಡು ಅರಣ್ಯ ಸಂಪತ್ತಿನ ನಾಡು ಎಂದು ಹೇಳುವಂತೆ ಪರಿಣಾಮಕಾರಿಯಾಗಿಯೇ ಕೆಲಸ ಮಾಡಿದರೆ ಸರಿಯಾಗುತ್ತದೆ. ಹಿಂದಿನ ಸರ್ಕಾರ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೭ ವರ್ಷಗಳ ಅವಧಿಯಲ್ಲಿ ಯಾವುದೇ ಹೆಚ್ಚಿನ ಕೆಲಸವನ್ನೂ ಮಾಡಲಿಲ್ಲ. ಅದು ಬಹಳ ದುಃಖದ ಸಂಗತಿ ಮಳೆಯಾದ ಮೂರ್ನಾಲ್ಕು ದಿನಗಳಲ್ಲೇ ರಸ್ತೆಯೆಲ್ಲ ಕೊಚ್ಚಿಹೋಗುವ ಸ್ಥಿತಿ ಇರುವಾಗ ಏಳೆಂಟು ವರ್ಷಗಳಿಂದ ಯಾವುದೇ ಒಳ್ಳೆಯ ಕೆಲಸ ನಡೆಯಲಿಲ್ಲ. ರಸ್ತೆಗಳಿಗೆ ಡಾಂಬರೀಕರಣ ಮಾಡಲಿಲ್ಲ ಸೇತುವೆಗಳನ್ನು ಮಾಡಲಿಲ್ಲ ಇದು ದುಃಖದ ವಿಚಾರ. ಇವತ್ತು ಸಂತೋಷದ ವಿಚಾರವೇನೆಂದರೆ, ಈಗಿರುವ ಲೋಕೋಪಯೋಗಿ ಸಚಿವರು ಬಹಳ ಕಳಕಳಿಯಿಂದ ಈ ಕೆಲಸಗಳನ್ನೆಲ್ಲ ಮಾಡಬೇಕು ಎಂದು ಮನಸ್ಸು ಮಾಡಿರುವುದನ್ನು ನಾವು ಕಾಣುತ್ತಿದ್ದೇವೆ. ಒಂದು ಸಸಿಯ ಗುಣ ಮೊಳಕೆಯಲ್ಲೇ ಗೊತ್ತಾಗುತ್ತದೆಂದು ಹೇಳುವ ಹಾಗೆ. ಸಚಿವರ ಹತ್ತಿರ ಯಾರಾದರೂ

ಹೋದರೆ ಅವರ ಮಾತನ್ನು ಆಸಕ್ತಿಯಿಂದ ಕೇಳಿ ಮಾಡುತ್ತೇವೆನ್ನುವ ಭರವಸೆ ಸಿಗುತ್ತದೆ, ಅತ್ಯಂತ ತಾಳ್ಮೆಯಿಂದ ಕೇಳಿ ಒಳ್ಳೆಯ ಕೆಲಸ ಮಾಡುವ ಒಬ್ಬ ಲೋಕೋಪಯೋಗಿ ಸಚಿವರು ಸಿಕ್ಕಿದ್ದಾರೆಂಬುದು ನಮಗೆ ಅಭಿಮಾನದ ಸಂಗತಿ. ಏಳೆಂಟು ವರ್ಷಗಳಿಂದ ಏನೂ ಆಗಲಿಲ್ಲ ಒಂದು ಸಣ್ಣ ಉದಾಹರಣೆ ಹೇಳುವುದಾದರೆ, ನನ್ನ ಉಳ್ಳಾಲ ಕ್ಷೇತ್ರದಲ್ಲಿ ಅಳೇಕಳ ಎಂಬಲ್ಲಿ ಒಂದು ಸೇತುವೆ ಆಗಬೇಕೆಂದು ಬಜೆಟ್‌ನಲ್ಲಿ ಅದಕ್ಕೆ ಐದು ವರ್ಷದ ಹಿಂದೆ ಟೋಕನ್ನಾಗಿ ಎಂದು ಒಂದು ಸಾವಿರ ರೂಪಾಯಿಗಳನ್ನು ಇಟ್ಟರು, ಕೆಲಸ ಆಗಲಿಲ್ಲ. ಮುಂದಿನ ವರ್ಷ ಮತ್ತೆ ಟೋಕನ್ನಾಗಿ ಒಂದು ಸಾವಿರ ರೂಪಾಯಿಗಳನ್ನು ಇಟ್ಟರು ಇವತ್ತಿಗೂ ಆ ಕೆಲಸ ಆಗಲಿಲ್ಲ. ಇವತ್ತು ರಸ್ತೆಗಳು, ಮೋರಿಗಳು ಸೇತುವೆಗಳು ಬಹುಕಾಲ ಬಾಳತಕ್ಕಂಥ ವ್ಯವಸ್ಥೆ ಮಾಡುವುದಕ್ಕೆ ಸಚಿವರು ಮನಸ್ಸು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ರಸ್ತೆ ಕೆಲಸ, ಕಟ್ಟಡಗಳ ಕೆಲಸಗಳಂತೂ ಕಳೆದ ಏಳು ವರ್ಷಗಳಿಂದ ಕುಂಠಿತವಾಗಿದೆ ಹೊಸ ಕೆಲಸವನ್ನು ಮೂರು ವರ್ಷದಿಂದ ತೆಗೆದುಕೊಂಡಿಲ್ಲ, ಅದನ್ನು ಸಹ ನೋಡಬೇಕು. ನಾವು ಇದನ್ನೆಲ್ಲ ಹೇಳುವಾಗ ಪ್ರತಿಪಕ್ಷದವರು ಇದ್ದಿದ್ದರೆ ಬಹಳ ಸಂತೋಷವಾಗುತ್ತಿತ್ತು, ಇದನೆಲ್ಲಾ ಕೇಳುವುದು ಬೇಡ ಎಂದು ಅವರು ಹೋಗಿರಬಹುದು. ಕಳೆದ ಏಳು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಯಾವುದೇ ಕೆಲಸ ಆಗಲಿಲ್ಲ. ಆದ್ದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಾಗಿ ಸೇತುವೆ, ರಸ್ತೆ ಕಟ್ಟಡಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಮುಖ್ಯವಾಗಿ, ಕೆಲಸ ಮಾಡುವಾಗ ಕಳಪೆಯಾಗದಂತೆ ಗುತ್ತಿಗೆದಾರರ ಮೇಲೆ ನಿಗಾ ಇಡಬೇಕು, ಒಳ್ಳೆಯವರನ್ನು ನೋಡಿ ಕೆಲಸ ಕೊಡಬೇಕು. ಕಂಟ್ರಾಕ್ಟರ್‌ಗಳಲ್ಲೂ ಪ್ರಾಮಾಣಿಕರು ಕೆಲವರಿರಬಹುದು, ಆದರೆ ಹೆಚ್ಚಿನವರು ಪ್ರಾಮಾಣಿಕರೆಂದು ಹೇಳುವ ಹಾಗಿಲ್ಲ, ರಸ್ತೆಯಲ್ಲಿ ೫೦೦ ಲಾರಿ ಮಣ್ಣು ಹಾಕಬೇಕೆಂದರೆ ೫೦ ಲಾರಿ ಮಣ್ಣು ಉದುರಿಸಿ ಕಣ್ಣಿಗೆ ಮಣ್ಣು ಹಾಕಿದ ಹಾಗೆ ಎಷ್ಟೋ ಕಡೆ ಮಾಡಿರುವುದನ್ನು ನಾವು ನೋಡಿದ್ದೇವೆ. ಇದರಲ್ಲಿ ಅಧಿಕಾರಿಗಳು ಮತ್ತು ಕಂಟ್ರಾಕ್ಟರಗಳಿಬ್ಬರದೂ ತಪ್ಪು. ಆದ್ದರಿಂದ ಪ್ರಾಮಾಣಿಕ ಕಂಟ್ರಾಕ್ಟರ್‌ಗೆ ಕೆಲಸ ಕೊಡುವ ಪರಿಪಾಠ ಮಾಡುವಂತೆ ಸಚಿವರಿಗೆ ಮನವಿ ಮಾಡುತ್ತೇನೆ. ಮೊನ್ನೆ ಪೇಪರ್‌ನಲ್ಲಿ ನೋಡಿದಂತೆ ಮಾನ್ಯ ಸಚಿವರು ಗುಲ್ಬರ್ಗಕ್ಕೆ ಹೋದಾಗ ಅಲ್ಲಿಗೆ ಎ.ಇ.ಇ. ಬರಲಿಲ್ಲವೆಂದು ತಕ್ಷಣ ಅವರನ್ನು ಅಮಾನತ್ ಮಾಡಿದರಂತೆ ಇದು ಬಹಳ ಒಳ್ಳೆಯ ಕೆಲಸ.

ನಮ್ಮ ಇತಿಹಾಸದಲ್ಲಿ ದುಷ್ಟರ ನಿಗ್ರಹ, ಶಿಷ್ಟರ ಪರಿಪಾಲನೆ ಆಗಬೇಕು ಎಂದು ನಾವು ಕೇಳಿದ್ದೇವೆ ದುಷ್ಟರ ಎಲ್ಲಾ ಕೆಲಸಗಳನ್ನು ನಾವು ನೋಡಿಕೊಂಡು ಕುಳಿತುಕೊಳ್ಳುವಂಥಾದ್ದು ಅಲ್ಲ. ಶಿಷ್ಟರ ಪರಿಪಾಲನೆ ಆಗಬೇಕು. ಬಡವರು ಈ ಗ್ರಾಮಾಂತರ ಪ್ರದೇಶದ ರೈತರಿಗೆ ಉಪಕಾರ ಮಾಡುವಂಥ ವ್ಯವಸ್ಥೆಯಾಗಬೇಕು. ಅವರು ಅದನ್ನು ಮಾಡಿ ತೋರಿಸಿದ್ದಾರೆ. ಇನ್ನು ಮುಂದೆಯೂ ಮಾಡುತ್ತಾರೆ. ಅವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದು ಏನೆಂದರೆ, ಯಾರೇ ಆಗಲಿ ತಪ್ಪಿತಸ್ಥರು ಎಂದಾದರೆ ಅವರಿಗೆ ಸರಿಯಾದ ಶಿಕ್ಷೆಯಾಗಬೇಕು ಎಂದು. ಪ್ರಜಾಪ್ರಭುತ್ವ ಎಂದು ಹೇಳಿ ಏನಾದರೂ ಮಾಡುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಏನು ಮಾಡಿದರೂ ಆಗುತ್ತದೆ ಎಂದು ಹೇಳುವಂಥದ್ದೂ ಇಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು. ಅಂತೆಯೇ ಒಳ್ಳೆಯದು ಮಾಡಿದವರಿಗೆ ಒಳ್ಳೆಯದೂ ಆಗಬೇಕು. ಆದುದರಿಂದ ಯಾರಾದರೂ ತಪ್ಪಿತಸ್ಥರು ಅಧಿಕಾರಿಗಳಲ್ಲಿ ಆಗಲಿ ಅಥವಾ ಕಂಟ್ರಾಕ್ಟರಲ್ಲಾಗಲಿ ಆದರೆ ಅವರಿಗೆ ಸರಿಯಾದಂಥ ಶಾಸ್ತಿ ತಾವು ಮಾಡುತ್ತೀರಿ ಎಂದು ಹೇಳತಕ್ಕಂಥ ಒಂದು ಭರವಸೆಯನ್ನು ತಾವು ಈ ಐದು ತಿಂಗಳಿನಲ್ಲಿ ತೋರಿಸಿ ಕೊಟ್ಟಿದ್ದೀರಿ. ಇದನ್ನು ಇನ್ನು ಮುಂದೆ ಕೂಡಾ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ಕನ್ನಡನಾಡು ಚಿನ್ನದ ನಾಡು, ಗಂಧದ ನಾಡು, ಸೊಬಗಿನ ನಾಡು, ಅರಣ್ಯಸಂಪತ್ತಿನ ನಾಡು. ಇಷ್ಟೊಂದು ಒಳ್ಳೆಯ ನಾಡು ಉಳಿಯಬೇಕಾದರೆ ಆ ರೀತಿ ಎಲ್ಲಾ ಮಾಡಬೇಕಾಗುತ್ತದೆ. ಇವತ್ತು ಜಗತ್ತಿನಲ್ಲೆಲ್ಲಾ ಹೇಳುತ್ತಾರೆ. ಕರ್ನಾಟಕದಲ್ಲಿರುವಂಥ ಒಂದು ಸಂಪತ್ತು ಯಾವ ದೇಶದಲ್ಲಿಯೂ ಇಲ್ಲ. ಇಲ್ಲಿಯ ಮಣ್ಣು ಕೂಡಾ ಅತ್ಯಂತ ಶ್ರೇಷ್ಠವಾದುದು ಎಂದು ಅನೇಕರು ಹೇಳುತ್ತಾರೆ. ಅಂತಹ ಸಂಪತ್ತನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ಇದು ಬಹಳ ಇಲಾಖೆಯಾದುದರಿಂದ ತಾವು ಈ ಕಡೆ ಗಮನವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೆಲವೊಮ್ಮೆ ಕೆಲವು ಕೆಲಸಗಳು ಏನಾಗುತ್ತದೆಯೆಂದರೆ, ಎಷ್ಟು ವರ್ಷ ಆದರೂ ಕೂಡಾ ಆ ಕೆಲಸ ಮುಗಿಯುವುದಿಲ್ಲ, ಈ ವರ್ಷ ನೋಡಿದರೂ ಅದೇ ಕೆಲಸ, ಬರುವ ವರ್ಷ ನೋಡಿದರೆ ಅದೇ ಕೆಲಸ ಈ ರೀತಿಯಾಗಿದೆ. ಒಮ್ಮೊಮ್ಮೆ ಕೆಲಸವನ್ನು ಕೊಟ್ಟರೆ ಯಾವುದದ್ಯಾವುದೋ ತಗಾದೆ ಮಾಡಿ ಅದನ್ನು ನಿಲ್ಲಿಸಿ, ಮತ್ತೆ ಎರಡು ವರ್ಷಗಳ ನಂತರ ಆ ಕೆಲಸವನ್ನು ಮಾಡಬೇಕು ಎಂದು ಹೋದಾಗ ದುಪ್ಪಟ್ಟು ಬೆಲೆ ಏರಿಕೆಯಾಗಿ, ಕಬ್ಬಿಣಕ್ಕೆ, ಸಿಮೆಂಟ್‌ಗೆ ಬೆಲೆ ಏರುವಂಥ ಪರಿಸ್ಥಿತಿಯಾಗುತ್ತದೆ. ಸಾಧಾರಣವಾಗಿ ಐದು ಲಕ್ಷಕ್ಕೆ ಆಗತಕ್ಕಂಥ ಒಂದು ಕೆಲಸ

ಮೂರು-ನಾಲ್ಕು-ಐದು ವರ್ಷಗಳು ಕಳೆದಮೇಲೆ ನಲವತ್ತು ಲಕ್ಷ, ಐವತ್ತು ಲಕ್ಷ, ಒಂದು ಕೋಟಿ ರೂಪಾಯಿಗಳಿಗೂ ಹೋಗತಕ್ಕಂಥ ಪರಿಸ್ಥಿತಿಯನ್ನು ಕಾಣಬಹುದು. ಆದುದರಿಂದ ಮಾನ್ಯ ಸಚಿವರು ಇದರ ಕಡೆಗೆ ಗಮನವನ್ನು ಕೊಡಬೇಕು. ಒಂದು ಕೆಲಸವನ್ನು ಹಿಡಿದ ಮೇಲೆ ಅದನ್ನು ಮಾಡಿ ಮುಗಿಸತಕ್ಕಂಥ ವ್ಯವಸ್ಥೆಯಾದರೆ ಈ ಸಿಮೆಂಟ್‌ಗೆ, ಕಬ್ಬಿಣಕ್ಕೆ ಇನ್ನೊಂದಕ್ಕೆ ಮತ್ತೊಂದಕ್ಕೆ, ಕೂಲಿಗೆ ಸಲ್ಲತಕ್ಕಂಥ ಹೆಚ್ಚಿನ ಖರ್ಚು ಉಳಿಯುತಕ್ಕಂಥ ವ್ಯವಸ್ಥೆ ಮಾಡಿದರೆ ಅದು ದೊಡ್ಡ ಮಿತವ್ಯಯ ಆಗುತ್ತದೆ. ಅದೇ ರೀತಿ ಕೆಲಸವನ್ನು ಮಾಡಿ ಮುಗಿಸಬೇಕು. ಒಂದು ಉದಾಹರಣೆ ಹೇಳುತ್ತೇನೆ, ನಮ್ಮ ಶಾಸಕರ ಭವನದ ಒಂದು ಜಾಗದಲ್ಲಿ ಇರುವ ಅಂಡರ್‌ಗ್ರೌಂಡ್ ನೋಡಬೇಕು. ನಾನು ಒಂದೂವರೆ ವರ್ಷದಿಂದ ನೋಡುತ್ತಿದ್ದೇನೆ ಆ ಜಾಗದಲ್ಲಿ ಅಗೆದು ಮಣ್ಣನ್ನು ಆಚೆಗೆ ಹಾಕುವುದು, ಈ ರೀತಿ ನಡೆಯುತ್ತಿದೆ. ಇದನ್ನು ನೋಡಿ ನೋಡಿ ಇದು ಮುಗಿಯುವ ಹಾಗೆ ಇಲ್ಲ. ಎಂದು ಮನಸ್ಸಿಗೆ ಬಹಳ ದುಃಖವಾಗುತ್ತದೆ. ನಾವು ಕಣ್ಣಮುಂದೆ ಇಂಥವುಗಳನ್ನು ನೋಡಬಹುದು. ಆದುದರಿಂದ ಇಂಥ ಹೆಚ್ಚು ಕಾಲಹರಣವಾಗುವುದನ್ನು ತಪ್ಪಿಸಬೇಕು. ನಮ್ಮ ಜಿಲ್ಲೆಯಲ್ಲಿ ನೀರಾವರಿ ಕಡಿಮೆ ಎಂದು ಹೇಳಿದೆ. ಆದರೂ ಕೂಡಾ ನಮ್ಮ ಮಂತ್ರಿಗಳು ನಮ್ಮಲ್ಲಿ ಕಡಲು ಕೊರೆತವನ್ನು ನೋಡಿದ್ದಾರೆ. ನಮ್ಮಲ್ಲಿ ಆಗತಕ್ಕಂಥ ಕಡಲು ಕೊರೆತವನ್ನು ನಿಲ್ಲಿಸತಕ್ಕಂಥ ವ್ಯವಸ್ಥೆಯಾಗಬೇಕು. ಏಕೆಂದರೆ, ಈ ವರ್ಷ ಉಳ್ಳಾಲದಿಂದ ಹಿಡಿದು ಕುಂದಾಪುರದವರೆಗೆ ಕಡಲು ಕೊರೆತ ಬಹಳ ಜಾಸ್ತಿಯಾಯಿತು. ಅದನ್ನು ಅಧಿವೇಶನ ಇರುವಾಗಲೆ ಕಣ್ಣಾರೆ ನೋಡಲಿಕ್ಕೆ ನಮ್ಮ ನೀರಾವರಿ ಮಂತ್ರಿಗಳಾದಂಥ ಶ್ರೀಮಾನ್ ಪುಟ್ಟಸ್ವಾಮಿಗೌಡರು, ಅದೇ ರೀತಿ ಶ್ರೀಮಾನ್ ವೀರಪ್ಪಮೊಯಿಲಿಯವರು ಬಂದು ಉಳ್ಳಾಲದಿಂದ ಕುಂದಾಪುರದವರೆಗೆ ನೋಡಿ ಮನಸ್ಸಿನಲ್ಲಿ ತಿಳಿದುಕೊಂಡಿದ್ದಾರೆ. ನಮಗೆ ನೀರಾವರಿಗಾಗಿ ಯಾವ ಹಣವನ್ನು ಕೊಡುವಂಥದ್ದು ಇಲ್ಲ. ನಮಗೆ ಬರಗಾಲದ ದೃಷ್ಟಿಯಿಂದ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೂ ಇಲ್ಲ. ಆದುದರಿಂದ ಇಂಥ ಒಂದು ಕೆಲಸವನ್ನು ಮಾಡಲಿಕ್ಕೆ ಮನಸ್ಸು ಮಾಡಿದ್ದಾರೆ. ಇದು ನಮಗೆ ಬಹಳ ದೊಡ್ಡ ಉಪಕಾರ. ಮಾಡುವಂಥಾದ್ದು. ಕರಾವಳಿಯಲ್ಲಿ ಕಡಲು ಕೊರೆತವನ್ನು ನಿಲ್ಲಿಸತಕ್ಕಂಥ ಕೆಲಸ ಏನಿದೆ ಅದಕ್ಕೆ ಮಾನ್ಯ ಮಂತ್ರಿಗಳು ಕಟ್ಟುಬದ್ಧನಾಗಿದ್ದೇನೆ ಎಂದು ಹೇಳಿದ್ದಾರೆ. ಕಡಲ ಕೊರೆತವನ್ನು ನೋಡಿ ಅವರಿಗೂ ಕೂಡ ಬಹಳ ದುಃಖವಾಗಿದೆ. ಇಷ್ಟರಲ್ಲಿಯೇ ಬಿಡುಗಡೆಯಾಗುತ್ತದೆ ಎಂದು ಹೇಳಿದ್ದನ್ನು ನಾವು ಕೇಳಿದ್ದೇನೆ. ಈ ಕೆಲಸ ಬೇಗನೆ ಆಗತಕ್ಕಂಥಾದ್ದು ಬಹಳ ಸಂತೋಷದ ವಿಚಾರ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಮ್ಮಲ್ಲಿ ವೆಂಟೆಡ್ ಡ್ಯಾಮ್‌ಗಳನ್ನು ಹೆಚ್ಚು ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆ ಏನೂ ಇಲ್ಲ. ಅಲ್ಲಿ ವೆಂಟೆಡ್ ಡ್ಯಾಮ್‌ಗಳು ಹೆಚ್ಚಾದರೆ ಹೆಚ್ಚು ಉಪಕಾರವಾಗುತ್ತದೆ, ಕೃಷಿ ಮಾಡತಕ್ಕಂಥವರಿಗೂ ಮತ್ತು ಇನ್ನಿತರರಿಗೆ ಕೂಡಾ ಬಹಳ ಉಪಕಾರವಾಗುತ್ತದೆ. ಆದುದರಿಂದ ನಾನು ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲಿಯೂ ಉಳ್ಳಾಲ ಕ್ಷೇತ್ರದಲ್ಲಿ ಹೆಚ್ಚು ವೆಂಟೆಡ್ ಡ್ಯಾಮ್‌ಗಳನ್ನು ಅವರು ಮಾಡುವುದಕ್ಕೆ ಮನಸ್ಸು ಮಾಡಬೇಕು. ಅಲ್ಲದೆ, ಜಿಲ್ಲಾ ಪರಿಷತ್ತಿನ ವತಿಯಲ್ಲಿರತಕ್ಕಂಥ ಎಲ್ಲಾ ರಸ್ತೆಗಳನ್ನು ತಾವು ತಮ್ಮ ಇಲಾಖೆಗೆ ತೆಗೆದುಕೊಳ್ಳಬೇಕು. ಜಿಲ್ಲಾ ಪರಿಷತ್ತು ಯಾವ ರಸ್ತೆಗಳ ಕೆಲಸಗಳನ್ನೂ ಮಾಡುವುದಿಲ್ಲ ನಮ್ಮಲ್ಲಿ ಹಣ ಇಲ್ಲ, ಹಣ ಇಲ್ಲ ಎಂದು ಹೇಳುತ್ತಾರೆ. ನಮಗೆ ಇರುವುದು ಗ್ರಾಮಾಂತರ ಪ್ರದೇಶ ಇವತ್ತು ಗ್ರಾಮಾಂತರ ಪ್ರದೇಶ ಒಳ್ಳೆಯದಾದರೆ ಮಾತ್ರ ಇಡೀ ದೇಶ ಒಳ್ಳೆಯದಾಗಲಿಕ್ಕೆ, ನಾಡು ಒಳ್ಳೆಯದಾಗಲಿಕ್ಕೆ ಸಾಧ್ಯ. ಅಲ್ಲಿರತಕ್ಕಂಥ ರಸ್ತೆಗಳು ಒಳ್ಳೆಯದಾಗಬೇಕು, ಅಲ್ಲಿರತಕ್ಕಂಥ ಮೋರಿಗಳು ಒಳ್ಳೆಯದಾಗಬೇಕು, ಅಲ್ಲಿರತಕ್ಕಂಥ ಸಂಕ್‌ಗಳು ಒಳ್ಳೆಯದಾಗಬೇಕು. ಅದಕ್ಕೆ ಇವತ್ತು ಜಿಲ್ಲಾ ಪರಿಷತ್ತಿನವರು ಮನಸ್ಸು ಮಾಡುತ್ತಾ ಇಲ್ಲ. ಆದುದರಿಂದ ಜಿಲ್ಲಾಪರಿಷತ್ತಿನ ಸ್ವಾಧೀನದಲ್ಲಿರತಕ್ಕಂಥ ರಸ್ತೆಗಳನ್ನೆಲ್ಲಾ ಲೋಕೋಪಯೋಗಿ ಇಲಾಖೆಯವರೇ ವಹಿಸಿಕೊಳ್ಳಬೇಕು. ಇಷ್ಟರಲ್ಲಿಯೇ ಮಂತ್ರಿಗಳು ಅತ್ತ ಕಡೆ ಮನಸ್ಸು ಮಾಡಬೇಕು ಎಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಅಳೇಕಳದಲ್ಲಿ ಸೇತುವೆಗಾಗಿ ಮೂರು ವರ್ಷಗಳ ಟೋಕನ್ ಹಣ ಇಟ್ಟರೂ ಅಲ್ಲಿ ಇನ್ನು ಸೇತುವೆಯಾಗಿಲ್ಲ, ಅದು ಜಿಲ್ಲಾ ಪರಿಷತ್ತಿನ ಸ್ವಾಧೀನದಲ್ಲಿದೆ. ಅದು ಅಳೇಕಳದ ಉಳಿಯಕ್ಕೆ ಹೋಗತಕ್ಕಂಥ ದೊಡ್ಡ ಸೇತುವೆ. ಐದು ಲಕ್ಷ ರೂಪಾಯಿಗಳು ಎಂದು ಒಮ್ಮೆ ಹೇಳುತ್ತಾರೆ. ಈಗ ಹತ್ತು ಲಕ್ಷ ರೂಪಾಯಿ ಎಂದು ಹೇಳುತ್ತಾರೆ. ದಿನ ಹೋದ ಹಾಗೆ ಕ್ರಯ ಏರುತ್ತದೆ. ಅದರ ಕಾಮಗಾರಿಯನ್ನು ಕೂಡಾ ಪಿ.ಡಬ್ಲ್ಯೂ.ಡಿ. ಇಲಾಖೆಗೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ನನ್ನ ಕ್ಷೇತ್ರದಲ್ಲಿ ಸೋಮನಾಥ ಉಳಿಯದಲ್ಲಿ ಒಂದು ಸಂಘ ಇದೆ. ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡುತ್ತಿದ್ದೇನೆ. ಬೇರೆಯವರೆಲ್ಲ ಬಹಳ ಜನ ಚೆನ್ನಾಗಿ ಮಾತನಾಡಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ವಿಸ್ತಾರವಾಗಿ ಮಾತನಾಡಿದ್ದಾರೆ. ಅದನ್ನು

ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಮತ್ತೆ ಉಪ್ಪು ನೀರನ್ನು ತಡೆಯತಕ್ಕಂಥ ತಡೆಗೋಡೆಯ ವ್ಯವಸ್ಥೆ ನಮ್ಮಲ್ಲಿ ಆಗಬೇಕು. ನಮ್ಮಲ್ಲಿ ಹೆಚ್ಚು ಉಪ್ಪು ನೀರು ಬಂದು ಕೃಷಿ ಎಲ್ಲಾ ಹಾಳಾಗಿ ಹೋಗುತ್ತದೆ. ನದಿಯ ಬದಿಯಲ್ಲಿರತಕ್ಕ ಕೃಷಿಕರಿಗೆ ಉಪ್ಪು ನೀರು ಬರುವಂಥಾದ್ದನ್ನು ತಡೆಯತಕ್ಕಂಥ ತಡೆಗೋಡೆ ವ್ಯವಸ್ಥೆಯನ್ನು ಕೂಡ ಪಿಡಬ್ಲ್ಯುಡಿ ಮತ್ತು ನೀರಾವರಿ ಇಲಾಖೆಯ ಮುಖಾಂತರ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾನು ಬಹಳ ಪ್ರಾಮುಖ್ಯವಾದಂತಹ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಸರಪಾಡಿಯಿಂದ ನೀರನ್ನು ತರತಕ್ಕ ಒಂದು ಯೋಜನೆಯ ವ್ಯವಸ್ಥೆ ಇದೆ. ಸರಪಾಡಿ ನದಿಯಿಂದ ನೀರನ್ನು ತರತಕ್ಕ ವ್ಯವಸ್ಥೆ ಮಾಡಿದರೆ ನವ ಮಂಗಳೂರು. ಅದೇ ರೀತಿ ಬೇರೆ ಬೇರೆ ಕಾರ್ಖಾನೆಗಳಿಗೆ ಅಂದರೆ ಇಡೀ ಮಂಗಳೂರಿಗೇ ನೀರು ಸರಬರಾಜು ಆಗುವುದಕ್ಕೆ ಸಾಧ್ಯ ಉಂಟು. ಇದು ಒಂದು ಪ್ರಾಮುಖ್ಯವಾದ ಯೋಜನೆ ಉಂಟು. ಆದ್ದರಿಂದ ಸರಪಾಡಿ ನದಿಯಿಂದ ನೀರು ತರತಕ್ಕ ಯೋಜನೆಯನ್ನು ಕೂಡ ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನು ನನ್ನ ಪ್ರಶ್ನೆ ಇಷ್ಟೆ. ಯಾವುದೇ ಒಳ್ಳೆಯ ಕೆಲಸ ಆಗಬೇಕಾದರೆ ಇಂಜಿನಿಯರ್‌ಗಳು ಮತ್ತು ಕಂಟ್ರಾಕ್ಟರ್‌ಗಳು ಈ ದೇಶಕ್ಕೆ ಒಳ್ಳೆಯದು ಮಾಡಬೇಕು, ಈ ನಾಡಿಗೆ ಒಳ್ಳೆಯದು ಮಾಡಬೇಕು ಎಂದು ಮನಸ್ಸು ಮಾಡಿದರೆ ಕೆಲಸ ಒಳ್ಳೆಯದಾಗುತ್ತದೆ ನಮ್ಮ ಪುಣ್ಯಕ್ಕೆ ಮಣ್ಣಿನ ಮಗ, ಬಹಳ ಒಳ್ಳೆಯ ಸ್ಪಂದನ ಮಾಡತಕ್ಕಂಥ ಪ್ರತಿಯೊಬ್ಬರ ಹತ್ತಿರ ಶಾಂತಿಯಿಂದ ಪ್ರತಿಯೊಂದು ವಿಷಯವನ್ನೂ ಕೇಳಿ ತಿಳಿಯತಕ್ಕಂಥ ಮಂತ್ರಿ ಪುಟ್ಟಸ್ವಾಮಿಗೌಡರು ಸಿಕ್ಕಿದ್ದಾರೆ. ಇವೊತ್ತು ಅವರು ಬಂದು ಐದು ತಿಂಗಳು ಆಯಿತಷ್ಟೆ. ಒಂದು ವರ್ಷದೊಳಗೆ ಅವರು ಅದ್ಭುತವಾದ ಒಳ್ಳೆಯ ಕೆಲಸವನ್ನು ಮಾಡತಕ್ಕ ಸೂಚನೆಯನ್ನು ಅವರು ತೋರಿಸಿ ಕೊಟ್ಟಿದ್ದಾರೆ. ಮಾನ್ಯ ಸಚಿವರು ನಮ್ಮ ದಕ್ಷಿಣ ಕನ್ನಡಕ್ಕೆ ಬಂದು ಕಡಲ ಕೊರತವನ್ನು ನೋಡಿದ್ದಕ್ಕೆ ಈ ಸಂದರ್ಭದಲ್ಲಿ ಅವರಿಗೆ ನನ್ನ ಅಭಿನಂದನೆಗಳನ್ನು ಕೂಡ ಸಲ್ಲಿಸುತ್ತೇನೆ. ಅದೇ ರೀತಿಯಾಗಿ ಮಾತಿಗಿಂತಲೂ ಹೆಚ್ಚಾಗಿ ಐದು ಚರಣದ ಕವಿತೆಯಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ, ಪಿಡಬ್ಲ್ಯುಡಿ ಇಲಾಖೆಗೆ ಸಂಬಂಧಪಟ್ಟಿದೆ ಲ್ಲವೂ ಅವರಲ್ಲಿ ಅಡಕವಾಗಿದೆ ಎಂದು ಹೇಳಿ ನನ್ನ ಕವನದ ಸಾಲುಗಳನ್ನು ಓದುತ್ತೇನೆ. ''ಲೋಕೋಪಯೋಗಿ ಕೆಲಸಗಳ ಕಂಟ್ರಾಕ್ಟುದಾರ, ಏಕ ಭೂಪತಿ, ಊರಿಗವ ದೊಡ್ಡ ಸರದಾರ, ಸಾಖ್ಯೆಗಟ್ಟಳೆ ಬಂಗ್ಲೆ, ಸಂಖ್ಯೆಗಟ್ಟಳೆ ಕಾರುಗಳ ವಾರೀಸುದಾರ, ಇಂಜಿನಿಯರರ ಮಧ್ಯದಲ್ಲಿ ಆತ ಹಿರಿಯ ನೇತಾರ ಜಲ್ಲಿ, ಕಬ್ಬಿಣ, ಸಿಮೆಂಟು ಮಂಗಮಾಯ ಪೂರ, ಕೆಲಸಗಳೆಲ್ಲಾ ಕಳಪೆ, ಕಟ್ಟಡ, ಸಂಕಗಳು ಬಿರಂಕು ನೇರ. ಸಚಿವ ಪುಟ್ಟಸ್ವಾಮಿಗೌಡರೇ ಇಂಥವರ ಮಾಡಿ ನುಚ್ಚುನೂರು ಈ ನಾಡನ್ನು ಇವರಿಂದ ಉಳಿಸಿ ಜನತೆಯನ್ನು ಮಾಡಿ ಪಾರು.''

† ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಅಧ್ಯಕ್ಷರೆ, ಇಂದು ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳಿಗೆ ಬೆಂಬಲವನ್ನು ಸೂಚಿಸಿ, ನನ್ನ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಕಾಲದ ಅಭಾವ ಎನ್ನುವ ಮಾತನ್ನು ತಾವು ಹೇಳಿದಾಗ ಭಾಷಣ ಮಾಡುವುದಕ್ಕೆ ಬದಲು ಸೂಚನೆ ಕೊಡುವುದಕ್ಕೆ ಇಚ್ಛೆಪಡತ್ತೇನೆ. ಬಹಳ ಮುಖ್ಯವಾಗಿ ನಾನು ಪ್ರಸ್ತಾಪ ಮಾಡಬೇಕಾಗಿರತಕ್ಕದ್ದು ನೀರಾವರಿ ಬಗ್ಗೆ. ಈ ಸದನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ರೈತರ ಬಗ್ಗೆ ಪ್ರಸ್ತಾಪ ಆಗತಕ್ಕದ್ದನ್ನು ನಾವೆಲ್ಲಾ ನೋಡಿದ್ದೇವೆ. ರೈತರ ಬಗ್ಗೆ ನಾವೆಲ್ಲಾ ಸಾಕಷ್ಟು ಮಾತನಾಡಿದ್ದೇವೆ. ಇವೊತ್ತು ರೈತರ ಪರವಾಗಿ, ರೈತ ಮಕ್ಕಳಾಗಿ, ರೈತ ಪ್ರತಿನಿಧಿಯಾಗಿ ಬಂದಿರತಕ್ಕವರು ನಾವು ಹಲವರು ಇದ್ದೇವೆ. ಆದರೆ ರೈತರ ಸಮಸ್ಯೆ ಬಂದಂತಹ ಸಂದರ್ಭದಲ್ಲಿ ನಾವು ಎಲ್ಲವನ್ನೂ ಮರೆಯುತ್ತೇವೆ ಎಂದು ಹೇಳಿದರೆ ಅದು ತಪ್ಪಾಗಲಾರದು ಎಂದು ನನ್ನ ಭಾವನೆ. ಸದನದಲ್ಲಿ ನಿನ್ನೆ ಮೊನ್ನೆ ಚುಕ್ಕೆ ಗುರುತಿನ ಪ್ರಶ್ನೆ ಬಂದಾಗ ಈ ರಾಜ್ಯದಲ್ಲಿ ಸುಮಾರು ೧೩ ಲಕ್ಷ ಜನ ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ ಮತ್ತು ನಮ್ಮ ಲೆಕ್ಕಕ್ಕೆ ಸಿಗದೇ ಇರುವವರು ಇನ್ನೂ ಹೆಚ್ಚು ಜನ ಇದ್ದಾರೆ ಎನ್ನುವ ಮಾತು ಹೊರ ಬಂತು. ಇವೊತ್ತು ಈ ಸರ್ಕಾರದ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ. ಕಾರಣ ಏನು ಅಂದರೆ. ೧೯೮೩ನೇ ಇಸವಿಯಲ್ಲಿ ಚುನಾವಣೆ ಆದ ಸಂದರ್ಭದಲ್ಲಿ ಈ ಕಾಂಗ್ರೆಸ್ ಪಕ್ಷ ಅಧಿಕಾರವನ್ನು ಕಳೆದುಕೊಂಡಿತು. ಅದಕ್ಕೆ ಕಾರಣ ಅವತ್ತು ರೈತ ಎಚ್ಚೆತ್ತು ಈ ರಾಜ್ಯದಲ್ಲಿ ಅವರ ಅಭಿಲಾಷೆಯಂತೆ ಅಪೇಕ್ಷೆಯಂತೆ ನಾವು ಕೆಲಸವನ್ನು ಮಾಡಲಿಲ್ಲ ಎಂಬ ಭಾವನೆಯಿಂದ ನಮ್ಮನ್ನು ಅಧಿಕಾರದಿಂದ ಕಿತ್ತೊಗೆದು, ಇವೊತ್ತು ಮತ್ತೆ ನಮ್ಮಲ್ಲಿ ವಿಶ್ವಾಸವನ್ನು ಇಟ್ಟು ಅಧಿಕಾರಕ್ಕೆ ತಂದಿದ್ದಾರೆ. ನಮ್ಮ ಮೇಲಿಟ್ಟಿರತಕ್ಕ ವಿಶ್ವಾಸವೇನೆಂದರೆ ಕಾಂಗ್ರೆಸ್ ಪಕ್ಷಕ್ಕೆ ಮತ ಕೊಡುವುದರಿಂದ ರೈತನ ಸಮಸ್ಯೆ ಸ್ವಲ್ಪಮಟ್ಟಿಗೆ ಬಗೆ ಹರಿದಿತು, ಸಮರ್ಥವಾದಂಥ ಒಂದು ನಾಯಕತ್ವವನ್ನು ಕೊಡಬಲ್ಲರು ಎಂದು ಇನ್ನೂ ನಾನಾ ರೀತಿಯ ಭಾವನೆಗಳನ್ನು ಇಟ್ಟುಕೊಂಡು ಮತವನ್ನು ಕೊಟ್ಟಿದ್ದಾರೆ. ಆ ಮಟ್ಟಕ್ಕೆ ನಾವು ಬಾಳ ಬೇಕಾಗುತ್ತದೆ. ನಾವು ಉಳಿಯಬೇಕಾಗುತ್ತದೆ.

ಇವೊತ್ತು ಲಕ್ಷಾಂತರ ಮಂದಿ ನಿರುದ್ಯೋಗಿಗಳು ಇದ್ದಾರೆ. ಇವೊತ್ತು ಅಗ್ರಿಕಲ್ಚರಲ್ ಲೇಬರರ್ಸ್ ಏನು ಇದ್ದಾರೆ, ಅವರ ಹೆಸರು ಯಾವುದೇ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿಯೂ ರಿಜಿಸ್ಟರ್

೧೧.೨೦ ಎ.ಎಂ.

ಆಗಿಲ್ಲ. ಅವರಿಗೆ ಒಂದು ಉದ್ಯೋಗವನ್ನು ಕೊಡಬೇಕು. ಇವತ್ತು ಎಲ್ಲರಿಗೂ ಸರ್ಕಾರದ ಮಟ್ಟದಲ್ಲಿ ಉದ್ಯೋಗ ಕೊಡುವುದಕ್ಕೆ ಸಾಧ್ಯವಿಲ್ಲ. ಅದು ಎಲ್ಲರಿಗೂ ಗೊತ್ತಿರತಕ್ಕಂಥಾದ್ದು. ಆ ದುಡಿಯುವಂಥ ಕೈಗಳಿಗೆ ಒಂದು ಉದ್ಯೋಗವನ್ನು ಕೊಡಬೇಕು. ಅಂದರೆ ವಿದ್ಯಾವಂತರಿಗೆ, ಅವಿದ್ಯಾವಂತರಿಗೆ, ಯುವಕರಿಗೆ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡತಕ್ಕದ್ದಕ್ಕೆ ಒಂದೇ ಒಂದು ಅವಕಾಶ ಇರತಕ್ಕದ್ದು. ನೀರಾವರಿ ಇಂಪ್ರೂವ್ ಮಾಡುವುದರಿಂದ ಮಾತ್ರವೇ ವಿನಃ ಇನ್ಯಾವುದರಿಂದಲೂ ಸಾಧ್ಯವಿಲ್ಲ. ನಾನು ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಉಳಿಸಿಕೊಂಡು ಮಾತನಾಡುವುದಾದರೆ, ನಾನು ಹಿಂದೆ ಶಾಸನಸಭಾ ಸದಸ್ಯನಾಗಿದ್ದಂಥ ಸಂದರ್ಭದಲ್ಲಿ ಆಗಿದ್ದಂಥ ಮಳೆ ಬೆಳೆಯನ್ನು ೧೦–೧೨ ವರ್ಷಗಳಿಂದ ನೋಡುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಮಳೆ ಬಂದಂಥ ವಾತಾವರಣ ಕಾಣುತ್ತಿದ್ದೆಯೋ ಹೊರತು ಮಳೆ ಬರಲಿಲ್ಲ, ಮುಂಗಾರು ಆಗಲಿಲ್ಲ, ರೈತ ಸಾಲಸೋಲ ಮಾಡಿ ತೆಗೆದುಕೊಂಡು ಹೋಗಿ ಜಮೀನಿಗೆ ಹಾಕಿದಂಥ ಗೊಬ್ಬರಗಳೆಲ್ಲ ವೇಸ್ಟ್, ಉಳುಮೆ ಮಾಡಿದ್ದು ವೇಸ್ಟ್ ಎನ್ನತಕ್ಕಂಥ ಪರಿಸ್ಥಿತಿ ಇದೆ. ಅದರಲ್ಲೂ ವಿಶೇಷವಾಗಿ ತುಮಕೂರು, ಚಿತ್ರದುರ್ಗ, ಕೋಲಾರ ಬೆಂಗಳೂರು ಗಭಾದಲ್ಲಿರತಕ್ಕಂಥ ರೈತರಿಗೆ ಬಹಳ ಕಷ್ಟಬಂದಿದೆ, ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಜನಜೀವನ ಮಾಡತಕ್ಕದ್ದು ಬಹಳ ಕಷ್ಟಪರಿಸ್ಥಿತಿಯಲ್ಲಿದೆ ಎನ್ನುವುದನ್ನು ತಾವು ಅರಿಯಬೇಕು. ಪ್ರಾಮುಖ್ಯವಾಗಿ ಇವರಿಗೆ ಒಂದು ಉದ್ಯೋಗವನ್ನು ಕೊಡಬೇಕಾದರೆ, ನೀರಾವರಿ ಅಭಿವೃದ್ಧಿ ಮಾಡುವುದರಿಂದ ಆಗುತ್ತದೆ. ಇವತ್ತು ನೀರಾವರಿ ಇಲಾಖೆ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಹಿಂದೆ ಕಾವೇರಿ ಬೇಸಿನ್‌ನ ಒಂದು ಪ್ರಸ್ತಾಪ ಬಂದಂಥ ಸಂದರ್ಭದಲ್ಲೂ ಕೂಡ ಸಾಕಷ್ಟು ಚರ್ಚೆ ಮಾಡಿದ್ದೇವೆ. ಇವತ್ತು ಈ ನೀರಾವರಿ ಇಲಾಖೆಯ ಬೇಡಿಕೆಗೆ ಹೆಚ್ಚು ಹಣವನ್ನು ಕೊಡಬೇಕು ಎನ್ನುವುದು ಈಗಾಗಲೇ ಸರ್ಕಾರಕ್ಕೆ ಮನವರಿಕೆಯಾಗಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಪ್ರಶಂಸಿಸುತ್ತೇನೆ. ಹಿಂದೆ ಎಂದೂ ಕೊಡದೇ ಇರತಕ್ಕಂಥ ಹೆಚ್ಚು ಹಣವನ್ನು ಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದಿರಿ. ಆದರೆ ಇವತ್ತು ಸರ್ಕಾರದ ಮಟ್ಟದಲ್ಲಿರತಕ್ಕಂಥ ಸಂಪನ್ಮೂಲದಲ್ಲಿ ಕೊಟ್ಟಿರತಕ್ಕಂಥಾ ಹಣ ಹೆಚ್ಚು ಎಂಬ ಭಾವನೆ ಇದ್ದರೂ ಸಹಿತ ತಮ್ಮನ್ನು ಇದಕ್ಕಾಗಿ ಪ್ರಶಂಸೆ ಮಾಡುವುದಾದರೂ ಸಹಿತ ಇವತ್ತು ಕರ್ನಾಟಕದ ನೀರಿನ ಸಂಪತ್ತು ಏನಿದೆ ಅದನ್ನು ಉಳಿಸತಕ್ಕಂಥ ಮತ್ತು ಬಳಸತಕ್ಕಂಥ ಹಕ್ಕು ನಮ್ಮದು. ಅದನ್ನು ಉಳಿಸಬೇಕು, ಬಳಸಬೇಕಾದರೆ ಕೇವಲ ೩೦೦ ಕೋಟಿ ೪೦೦ ಕೋಟಿ ಕೊಟ್ಟರೆ ಸಾಲದು. ೭೦೦೦ ಕೋಟಿ, ೮೦೦೦ ಕೋಟಿ ಹಣವನ್ನು ತೊಡಗಿಸತಕ್ಕಂಥ ಒಂದು ಯೋಜನೆಯನ್ನು ನೀವು ಮಾಡಬೇಕಾಗುತ್ತದೆ. ಹಿಂದೆ ಬೇರೆ ಸರ್ಕಾರ ಇದ್ದಂಥ ಸಂದರ್ಭದಲ್ಲೂ ಕೂಡ, ಹಿ ದಿನ ನೀರಾವರಿ ಸಚಿವರು ಕೂಡ ರೈತರ ಬಗ್ಗೆ ಸಾಕಷ್ಟು ಮಾತನಾಡುತ್ತಾ ಇದ್ದರು. ರಾಜಕೀಯ ಪರಿವರ್ತನೆಯಾಗಿ ಅವರು ಅಧಿಕಾರದಿಂದ ಕಿತ್ತುಹೋದರು. ಅದನ್ನು ಮನಗಂಡು ಜನತೆ ಇವತ್ತು ನಮಗೆ ಮತವನ್ನು ಕೊಟ್ಟಿದ್ದಾರೆ. ಇವತ್ತು ೭೦೦೦ ಕೋಟಿ, ೮೦೦೦ ಕೋಟಿ ಹಣವನ್ನು ನೀರಾವರಿಗೆ ತೊಡಗಿಸತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಇವತ್ತು ನೀವು ಕೊಡುತ್ತಾ ಇರತಕ್ಕಂಥ ಹಣವನ್ನು ಲೆಕ್ಕ ಹಾಕುವುದಾದರೆ ಇನ್ನು ೫೦ ವರ್ಷಗಳಾದರೂ ಈ ಯೋಜನೆಗಳ ಕೆಲಸ ಮುಗಿಯುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂಥ ಪರಿಸ್ಥಿತಿ ಇದೆ. ಈ ಕೆಲಸಗಳು ವಿಳಂಬವಾಗಿರುವುದರಿಂದ ಮತ್ತು ಹಣಕಾಸು ಕಡಿಮೆಯಾಗಿರುವುದರಿಂದ ಈಗಾಗಲೇ ಕಾವೇರಿ ನೀರಿನ ಒಂದು ಪಾಲನ್ನು ಬಿಟ್ಟುಕೊಡತಕ್ಕಂಥ ಪರಿಸ್ಥಿತಿಯನ್ನು ನಾವು ಮನಗಂಡಿದ್ದೇವೆ. ಇವತ್ತು ಸದನದಲ್ಲಿ ವಿರೋಧಿ ಸದಸ್ಯರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಿದರೆ ತಪ್ಪಾಗಲಾರದು. ತಾವು ಕೊಟ್ಟಿರತಕ್ಕಂಥ ಸುಪ್ರೀಂಕೋರ್ಟ್ ಜಡ್ಜ್‌ಮೆಂಟಿನ ಒಂದು ಕಾಪಿಯನ್ನು ಓದುವಂತಹ ಸಂದರ್ಭದಲ್ಲಿ ನೋಡಿದ್ದೇನೆ. ಕೇಂದ್ರಸರ್ಕಾರ ಕಾವೇರಿ ನೀರಿನ ಹಂಚಿಕೆಯಲ್ಲಿ ನಮಗೆ ತಾರತಮ್ಯವನ್ನು ಮಾಡಿದೆ. ಜಡ್ಜ್‌ಮೆಂಟಿನಲ್ಲಿರುವುದನ್ನು ಇಲ್ಲಿ ಉಲ್ಲೇಖ ಮಾಡುವ ಅವಶ್ಯಕತೆ ಇಲ್ಲ ಎಂದು ನಾನಾದರೂ ತಿಳಿದಿದ್ದೇನೆ. ಜಡ್ಜ್‌ಮೆಂಟ್‌ನಲ್ಲಿ ಕ್ಲಿಯರಾಗಿದೆ. ಕೇಂದ್ರಸರ್ಕಾರ ಆಸಕ್ತಿ ವಹಿಸದೆ, ತಮಿಳುನಾಡು ಸರಕಾರದ ಪರವಾಗಿ ನಿಲುವು ತೆಗೆದುಕೊಂಡು ಕರ್ನಾಟಕಕ್ಕೆ ಒಂದು ದೊಡ್ಡ ದ್ರೋಹವನ್ನು ಮಾಡಿದೆ. ಇದಕ್ಕೆ ಪ್ರತಿಯಾಗಿ ನೀವು ನಿಲ್ಲಬೇಕು. ಇವತ್ತು ನೀವು ಯಾವುದೇ ಒಂದು ತೀರ್ಮಾನವನ್ನು ತೆಗೆದುಕೊಂಡರೂ ಸಹಿತ ಅದರ ಹಿನ್ನೆಲೆಯಲ್ಲಿ ನಾವಿದ್ದೇವೆ. ಈ ಕರ್ನಾಟಕದ ೫ ಕೋಟಿ ಜನ ಇದ್ದಾರೆ ಎನ್ನುವುದನ್ನು ತಾವು ಮರೆಯಬಾರದು. ಇದು ಕರ್ನಾಟಕದ ಕನ್ನಡಿಗರ ಪ್ರಶ್ನೆಯಾಗಿರತಕ್ಕಂಥಾದ್ದು. ಇವತ್ತು ಒಂದು ತೊಟ್ಟು ನೀರನ್ನು

ಬಿಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನೂ ಕೂಡ ತಾವು ಅರಿಯಬೇಕು. ಇವತ್ತು ಕೇಂದ್ರ ಸರ್ಕಾರದ ಮಟ್ಟದಲ್ಲಿ ರಾಷ್ಟ್ರಪತಿಗಳು ಇಂಟರ್‌ಸ್ಟೇಟ್ ಕೌನ್ಸಿಲನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಈ ರೀತಿ ಮಾಡಿರುವಂಥ ಸಂದರ್ಭದಲ್ಲಿ ಟ್ರಿಬ್ಯುನಲನ್ನು ಕಾನ್‌ಸ್ಟಿಟ್ಯೂಟ್ ಮಾಡಿರತಕ್ಕಂಥ ವೈಶಿಷ್ಟ್ಯ ವೇನು ಎಂದು ಪ್ರಶ್ನೆ ಮಾಡುವುದರ ಜೊತೆಗೆ ಇವತ್ತು ಕೇಂದ್ರ ಸರ್ಕಾರದ ಮುಂದೆ ತಾವು ಹೋಗ ಬೇಕು, ಸಾಕಷ್ಟು ಮನವೊಲಿಸತಕ್ಕಂಥ ಪ್ರಯತ್ನ ಮಾಡಿ. ಇಂತಹ ವಿವರಗಳನ್ನು ತಮ್ಮಲ್ಲೇ ಇತ್ಯರ್ಥ ಮಾಡತಕ್ಕಂಥ ವ್ಯವಸ್ಥೆಯನ್ನು ನೀವು ಮಾಡಬೇಕು ಹೆಚ್ಚಿನ ಪ್ರಭಾವವನ್ನು ಬೀರಬೇಕು, ಅದಕ್ಕೆ ಹೆಚ್ಚಿನ ಶ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ತಮ್ಮಲ್ಲಿ ಹೇಳುತ್ತೇನೆ. ಇವತ್ತು ಇದರ ಜೊತೆಯಲ್ಲಿ ಅನೇಕ ಯೋಜನೆಗಳಿವೆ. ಕರ್ನಾಟಕದಲ್ಲಿ ಸುಮಾರು ೩೦–೩೫ ಪ್ರಾಜೆಕ್ಟ್‌ಗಳು ಅರೆಬರೆಯಾಗಿ ನಿಂತಿರತಕ್ಕದ್ದನ್ನು ನಾವು ನೋಡಿದ್ದೇವೆ. ಇವತ್ತು ಆ ಪ್ರಾಜೆಕ್ಟ್‌ಗಳೆಲ್ಲವೂ ಕೂಡ ಆಗಿದ್ದೇ ಆದರೆ ನಿಜವಾಗಲೂ ಕೂಡ ಇವತ್ತು ಕರ್ನಾಟಕ ಯಾವ ಪಂಜಾಬಿಗೆ ಕಡಿಮೆಯಿಲ್ಲ ಎನ್ನುವ ಮಟ್ಟಿಗೆ ಬರುವುದಕ್ಕೆ ಸಾಧ್ಯತೆ ಇದೆ. ಅಂತಹ ಒಂದು ವ್ಯವಸ್ಥೆಯನ್ನು ನೀವು ಮಾಡಬೇಕಾದರೆ ನಿಜವಾಗಲೂ ನೀವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಿ. ಹಿಂದೆ ಪ್ರಕಟವಾದಂತೆ ಕೇಂದ್ರ ಸರ್ಕಾರದ ಪರ್ಮಿಷನ್ನಾಗಲಿ, ರಿಸರ್ವ್‌ಬ್ಯಾಂಕ್ ಪರ್ಮಿಷನ್ನಾಗಲಿ ತೆಗೆದುಕೊಂಡು, ಜನಗಳಿಂದ ಬ್ಯಾಂಕ್‌ಗಳಿಂದ ಹಣವನ್ನು ತೆಗೆದುಕೊಂಡು, ಅದನ್ನು ತೊಡಗಿಸಿ, ಈ ಯೋಜನೆಗಳನ್ನು ಪೂರೈಸ ತಕ್ಕಂಥ ಒಂದು ದೊಡ್ಡ ಕಾರ್ಯವನ್ನು ನೀವು ಮಾಡುವುದಕ್ಕೆ ಪ್ರಯತ್ನಪಡಬೇಕು. ಇವತ್ತು ಇದರಲ್ಲಿ ತಾವು ಯಶಸ್ವಿಯಾಗುತ್ತೀರಿ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ,

ನಾನು ಕಾವೇರಿ ಪ್ರಶ್ನೆಯನ್ನು ಏತಕೋಸ್ಕರ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಹೇಮಾವತಿ ಯೋಜನೆಯಿಂದ ನಮ್ಮ ಜಿಲ್ಲೆಗೂ ಅನುಕೂಲ ಇದೆ. ಕಾವೇರಿ ನದಿ ನೀರಿನ ವಿವಾದದಿಂದ ಕರ್ನಾಟಕದ ಹಕ್ಕಿಗೆ ಪೆಟ್ಟು ಆದರೆ, ಅದರಿಂದ ಆಗತಕ್ಕ ಅನ್ಯಾಯ ತುಮಕೂರು ಜಿಲ್ಲೆಯವರಿಗೆ. ಈಗಾಗಲೇ ತುಮಕೂರು ಜಿಲ್ಲೆ ಶಾಶ್ವತ ಬರಗಾಲಕ್ಕೆ ತುತ್ತಾಗಿದೆ. ಹೇಮಾವತಿ ಯೋಜನೆಯಿಂದ ೫–೬ ತಾಲ್ಲೂಕು ಗಳಿಗೆ ನೀರು ಉಣಿಸತಕ್ಕ ಕೆಲಸ ಪ್ರಾರಂಭವಾಗಿದೆ. ಕಾಲುವೆಗಳ ಕೆಲಸ ಬಹಳ ತೀವ್ರಗತಿಯಿಂದ ನಡೆಯುತ್ತಿದೆ, ಆದರೆ, ನೀರು ಬರುತ್ತದೋ ಇಲ್ಲವೋ ಎನ್ನುವ ಅನುಮಾನ ಇರುವುದರಿಂದ ತಾವು ಇದರ ಬಗ್ಗೆ ಹೆಚ್ಚಿನ ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂದು ಹೇಳುತ್ತೇನೆ. ತಾವು ಹೇಮಾವತಿ ನದಿ ಹುಟ್ಟತಕ್ಕ ಜಾಗದಿಂದ ಬಂದಿದ್ದೀರಿ. ಕಾವೇರಿ ನದಿ ನೀರಿನ ವಿವಾದಗಳನ್ನು ಬಗೆಹರಿಸುವುದರ ಜೊತೆಗೆ ಅದರ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಬೇಕೆಂದು ಹೇಳುತ್ತೇನೆ. ತುಮಕೂರು ಜಿಲ್ಲೆಯನ್ನು ಕೇಂದ್ರ ಸರ್ಕಾರ ಪರ್ಮನೆಂಟ್ ಡ್ರಾಟ್ ಏರಿಯಾ ಎಂದು ಡಿಕ್ಲೇರ್ ಮಾಡಿದೆ. ನಾನು ಇಂಥ ಕನಿಷ್ಠ ಕ್ಷೇತ್ರದಿಂದ ಬರುತ್ತಿದ್ದೇನೆ. ಶಾಶ್ವತ ಬಡತನಕ್ಕೆ ತುತ್ತಾಗಿರತಕ್ಕ ನಮ್ಮ ಕ್ಷೇತ್ರಕ್ಕೆ ಅನುಕೂಲವಾಗಬೇಕಾಗಿರುವುದು ಹೇಮಾವತಿ ಯೋಜನೆಯಿಂದ ಮಾತ್ರ, ೧೯೭೮ನೇ ಇಸವಿಯಲ್ಲಿ ಸನ್ಮಾನ್ಯ ದೇವರಾಜ ಅರಸುರವರು ಇದ್ದ ಕಾಲದಲ್ಲಿ ಅಪ್ಪರ್ ಭದ್ರ ಯೋಜನೆ ಮಾಡುತ್ತೇವೆಂದು ಭಾಷಣ ಮಾಡಿದ್ದು ನಮಗೆ ಜ್ಞಾಪಕ ಇದೆ ನಂತರ ೨೮–೨೯ ವರ್ಷಗಳಾಗುತ್ತಾ ಬಂದರೂ ಈ ಯೋಜನೆ ಏನಾಯಿತು, ಯಾವ ಹಂತದಲ್ಲಿದೆ ಎಂಬುದು ನಮಗೆ ಗೊತ್ತಿಲ್ಲ. ಬಚಾವತ್ ಅವಾರ್ಡ್ ಪ್ರಕಾರ ೧೦ ಟಿ.ಎಂ.ಸಿ. ನೀರನ್ನು ಭದ್ರಾದಿಂದ ನಾವು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ೨೦೦೦ದ ಇಸವಿಯೊಳಗೆ ನಾವು ಈ ನೀರನ್ನು ಉಪಯೋಗಿಸಿಕೊಳ್ಳಲೇಬೇಕು. ಈ ನೀರನ್ನು ಉಪಯೋಗಿಸಿಕೊಳ್ಳದೇ ಹೋದರೆ, ಕಾವೇರಿ ನದಿ ನೀರನ್ನು ಯಾವ ರೀತಿ ಕಳೆದು ಕೊಂಡೆವೋ ಅದೇ ರೀತಿ ಇಲ್ಲೂ ಕೂಡ ಕಳೆದುಕೊಳ್ಳುವಂಥ ಸಂದರ್ಭ ಬರುತ್ತದೆ, ಯಾವುದಾದರೂ ಒಂದು ರೂಪದಲ್ಲಿ ೧೦ ಟಿ ಎಂ ಸಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ತುಮಕೂರು, ಚಿತ್ರದುರ್ಗ ಹಾಗೂ ಕೋಲಾರ ಜಿಲ್ಲೆಗಳಿಗೆ ನದಿಗಳ ನೀರಿನ ಅನುಕೂಲ ಇಲ್ಲದೇ ಇರುವುದರಿಂದ ಈ ಜಿಲ್ಲೆಗಳು ಶಾಶ್ವತವಾಗಿ ಬರಗಾಲಕ್ಕೆ ಒಳಗಾಗುತ್ತಿವೆ. ಈ ಭಾಗದ ಜನರು ಅಪ್ಪರ್‌ಭದ್ರ ಯೋಜನೆ ಇವತ್ತಲ್ಲ ನಾಳೆ ಬಂದೇ ಬರುತ್ತದೆನ್ನುವ ಆಶಾಭಾವನೆಯನ್ನು ಹೊಂದಿದ್ದಾರೆ. ಈ ಯೋಜನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಇದಕ್ಕೆ ಸುಮಾರು ೧೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು, ಇದರ ಸರ್ವೆ ಕೆಲಸ ಪ್ರಾರಂಭವಾಗಿದೆ ಎಂದು ಕೇಳಿದ್ದೇನೆ ಈಗಾಗಲೇ ೭ನೇ ಪಂಚವಾರ್ಷಿಕ ಯೋಜನೆ ಮುಗಿದು, ೮ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿದೆ. ಸೆಂಟ್ರಲ್ ವಾಟರ್ ಕಮೀಷನ್‌ನವರು ಕೂಡ ಈ ಪ್ರಾಜೆಕ್ಟ್‌ಗೆ ಕ್ಲಿಯರೆನ್ಸ್ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಆದರೆ, ಕೆಲವರು ಸ್ವಾರ್ಥಿಗಳು ತಜ್ಞರು ಇದ್ದಾರೆ. ವಿಶ್ವೇಶ್ವರಯ್ಯ ನವರು ಹುಟ್ಟಿದಂಥ ಈ ನಾಡಿನಲ್ಲಿ ಒಳ್ಳೆಯ ಇಂಜಿನಿಯರುಗಳೂ ಇದ್ದಾರೆ, ಆದರೆ, ಕೆಲವರು ವಿಶಾಲ ವಾದಂಥ ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲ. ಕೆಲವು ಮುಖ್ಯ ಇಂಜಿನಿಯರುಗಳು

ಅಪ್ಪರ್‌ಭದ್ರಾ ಪ್ರಾಜೆಕ್ಟ್‌ಗೆ ವಿರುದ್ಧವಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ಅದಕ್ಕೆ ತಾವು ಯಾವತ್ತೂ ಓಗೊಡಬಾರದು ಈ ಯೋಜನೆಯಿಂದ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಮೂರು ಸಾವಿರ ಎಕರೆ ಅರಣ್ಯ ಭೂಮಿ ಮುಳುಗಡೆಯಾಗಬಹುದು. ಶಾಶ್ವತ ಬರಗಾಲಕ್ಕೆ ತುತ್ತಾಗತಕ್ಕಂಥ ಪ್ರದೇಶದ ೪-೫ ಲಕ್ಷ ಎಕರೆ ಭೂಮಿಗೆ ನೀರು ಸಿಗುವಾಗ ಮೂರು ಸಾವಿರ ಎಕರೆ ಅರಣ್ಯ ಭೂಮಿ ಮುಳುಗಡೆಯಾಗುವುದರಿಂದ ತೊಂದರೆ ಏನೂ ಆಗುವುದಿಲ್ಲ ಈ ಪ್ರಾಜೆಕ್ಟ್‌ಗೆ ಒಪ್ಪಿಗೆ ಕೊಡಬೇಕು. ಕೇಂದ್ರ ಸರ್ಕಾರದ ಮೇಲೆ ತಾವು ಪ್ರಭಾವ ಬೀರಿ, ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಗೆ ಸಾಕಷ್ಟು ಹಣ ದೊರಕಿಸಿಕೊಳ್ಳಬೇಕೆಂದು ಹೇಳುತ್ತೇನೆ ನಾವು ನಿಮ್ಮನ್ನು ಕೇಳುವುದಿಷ್ಟೆ. ನಮಗೆ ಬೇಕಾಗಿರುವುದು ನೀರು ಅದನ್ನು ತಾವು ಯಾವ ರೀತಿ ಪೂರೈಸುತ್ತೀರಿ ಎನ್ನುವ ಮಾತನ್ನು ತಾವು ಹೇಳಬೇಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಅಪ್ಪರ್ ಭದ್ರ ಪ್ರಾಜೆಕ್ಟ್ ಮಾಡತಕ್ಕಂಥದ್ದಕ್ಕೆ ಕೆಲವು ಮುಖ್ಯ ಇಂಜಿನಿಯರ್‌ಗಳು ವಿರೋಧ ಮಾಡುತ್ತಿದ್ದಾರೆ, ಅಪಪ್ರಚಾರ ಮಾಡುತ್ತಿದ್ದಾರೆ ಎನ್ನುವ ಭಾವನೆಯನ್ನು ಮಾನ್ಯ ಸದಸ್ಯರು ಹೊಂದಿರುವ ಹಾಗೆ ಕಾಣುತ್ತದೆ. ನೀರು ರಾಜ್ಯದ ಸ್ವತ್ತು. ಅದನ್ನು ಉಪಯೋಗಿಸಿ ಕೊಳ್ಳತಕ್ಕಂಥಾದ್ದರ ಬಗ್ಗೆ ಅಪ ಪ್ರಚಾರ ಮಾಡುವುದಾಗಲಿ ಅಥವಾ ವಿರೋಧ ಮಾಡುವುದಾಗಲಿ, ಯಾವ ಮುಖ್ಯ ಇಂಜಿನಿಯರ್ ಆಗಲಿ ಇಂಜಿನಿಯರ್‌ಗಳಾಗಲಿ ಕೂಡ ಮಾಡುವುದಿಲ್ಲ. ಅದನ್ನು ಸದ್ಬಳಕೆ ಮಾಡಿಕೊಳ್ಳತಕ್ಕಂಥಾ ಸಾಧ್ಯತೆಗಳ ಬಗ್ಗೆ ಪರಿಶೀಲನೆ ಮಾಡುತ್ತಾರೆಯೇ ಹೊರತು, ಅದನ್ನು ಉಪಯೋಗಿಸಿಕೊಳ್ಳಬಾರದು ಎಂದು ಯಾವ ಮುಖ್ಯ ಇಂಜಿನಿಯರ್‌ಗಳು ಮಾಡುವುದಿಲ್ಲ. ಇದನ್ನು ಸನ್ಮಾನ್ಯ ಮಿತ್ರರು ಅರಿಯಬೇಕು ಎಂದು ಹೇಳುತ್ತೇನೆ ಇನ್ನು ಅಪ್ಪರ್ ಭದ್ರ ಯೋಜನೆಗೆ ಕೇಂದ್ರ ಸರ್ಕಾರದವರು ಕ್ಲಿಯರೆನ್ಸ್ ಕೊಡಬೇಕು. ಎನ್‌ವೈರನ್‌ಮೆಂಟಲ್ ಕ್ಲಿಯರೆನ್ಸ್ ಆಗಬೇಕಾಗಿದೆ ಅದಕ್ಕೆ ಅಪಾರವಾದಂಥ ಕಾಡು ಹೋಗುತ್ತದೆ ಎನ್ನುವುದು ಅವರ ಒಂದು ಇರಾದೆ. ಅದಕ್ಕೂ ನಮ್ಮ ಮುಖ್ಯ ಇಂಜಿನಿಯರ್‌ಗಳಿಗೂ ಯಾವುದೇ ವಿಧವಾದ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ಈಗಾಗಲೇ ನನಗೆ ಬಂದಿರತಕ್ಕ ವರ್ತಮಾನದ ಪ್ರಕಾರ ಇದೇ ೧೧ ಟಿ. ಎಂ. ಸಿ. ನೀರನ್ನು ಇನ್ನೊಂದು ಭಾಗದಲ್ಲಿ ತೆಗೆದುಕೊಳ್ಳಬಹುದು, ಅಪ್ಪರ್ ಭದ್ರ ಯೋಜನೆ ಬೇಡ ಎನ್ನತಕ್ಕಂಥ ಒಂದು ವಾದ ಇದೆ ಎಂದು ಕೇಳಿದ್ದೇನೆ ಅದಕ್ಕೋಸ್ಕರ ನಾನು ಹೇಳಿದೆ. ಅಂಥಾದ್ದು ಇಲ್ಲ ಅಂದರೆ ನಾನು ಸ್ವಾಗತಿಸುತ್ತೇನೆ. ಈಗ ಎನ್‌ವೈರನ್‌ಮೆಂಟಲ್ ಕ್ಲಿಯರೆನ್ಸ್ ಆಗಬೇಕಾದರೆ. ತಾವು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಯವರನ್ನು ಕಂಡು ಅವರನ್ನು ಕನ್‌ವಿನ್ಸ್ ಮಾಡಿ ಕ್ಲಿಯರನ್ಸ್‌ಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಈಗಾಗಲೆ ನಾನು ನಮ್ಮ ಅಳಲು ಏನು ಎನ್ನುವುದನ್ನು ಹೇಳಿದ್ದೇನೆ. ನಮಗೆ ನೀರು ಬೇಕು ನೀವು ಹೇಗೆ ಕೊಡುತ್ತೀರಿ ಎನ್ನುವುದಲ್ಲ ಮುಖ್ಯ ಒಟ್ಟಿನಲ್ಲಿ ನಮಗೆ ನೀರು ಬೇಕು, ಈ ಒಂದು ಯೋಜನೆಯನ್ನು ಬಿಟ್ಟರೆ. ಇನ್ನು ಯಾವ ರೀತಿಯಲ್ಲೂ ನೀರನ್ನು ಒದಗಿಸಲಿಕ್ಕೆ ಸಾಧ್ಯವಿಲ್ಲ. ಇನ್ನು ಮುಂದೆ ಯಾವ ಶತಮಾನದಲ್ಲೂ ಕೂಡ, ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಪರಿಸ್ಥಿತಿ ಇರುವುದರಿಂದ, ನಾವು ಒತ್ತಾಯ ಮಾಡಿ ಹೇಳಬೇಕಾಗುತ್ತದೆ ತಾಂತ್ರಿಕವಾಗಿ ಏನಿದೆಯೋ ಪ್ರಚಾರ ಏನಿದೆಯೋ ಎನ್ನತಕ್ಕಂಥಾದ್ದಲ್ಲ ನನಗೆ ಏನು ಅನಿಸಿದೆ; ಅದನ್ನು ಹೇಳುತ್ತಿದ್ದೇನೆ. ಅದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ; ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಇದರ ಬಗ್ಗೆ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ:— ಅಧ್ಯಕ್ಷರೆ,......

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:—ಅಧ್ಯಕ್ಷರೆ ಇದಕ್ಕೆ ಮಾನ್ಯ ಕಾಗೋಡು ತಿಮ್ಮಪ್ಪನವರ ವಿರೋಧ ಇದೆ ಎಂದು ನನಗೆ ಗೊತ್ತಿದೆ. ನಾನು ಅದಕ್ಕೋಸ್ಕರ ಹೇಳಿದ್ದು. ಇಂಜಿನಿಯರ್‌ಗಳು ಎಂದು ಹೇಳುವುದಿಲ್ಲ. ರಾಜಕಾರಣಿಗಳು ಇದ್ದಾರೆ ಎನ್ನುವುದಕ್ಕೆ ಇದೆ ನಿದರ್ಶನ. ಈಗ ಅವರಿಗೆ ಬೇಕಾಗಿರತಕ್ಕಂಥಾದ್ದು ಅಪ್ಪರ್ ತುಂಗ. ಅಪ್ಪರ್‌ಭದ್ರ ಅಲ್ಲ. ಅದಕ್ಕೋಸ್ಕರವೇ ನಾನು ಹೆಚ್ಚಿಗೆ ಪ್ರಸ್ತಾಪ ಮಾಡದೆ. ದೊಡ್ಡ ವಿವಾದಕ್ಕೆ ಸಿಕ್ಕ ಹಾಕಿಕೊಳ್ಳದ ರೀತಿಯಲ್ಲಿ ಸೂಕ್ಷ್ಮವಾಗಿ ಮಾತನಾಡಿದ್ದೇನೆ. ದಯಮಾಡಿ ನಮ್ಮ ಕಷ್ಟವನ್ನು ತಾವು ಅರಿಯಬೇಕೆಂದು ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದಂಥ ವಿಚಾರ ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಈ ರಾಜ್ಯದಲ್ಲಿ ೪೦-೪೫ ಮುಖ್ಯ ಇಂಜಿನಿಯರ್‌ಗಳು ಇದ್ದಾರೆ, ಅವರ ಸಂಖ್ಯೆಯನ್ನು ಕಡಿಮೆ ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಈಗಾಗಲೇ ತಾವು ಅಧಿಕಾರ ವಹಿಸಿಕೊಂಡು ೭ ತಿಂಗಳು ಆಯಿತು. ಈ ಏಳು ತಿಂಗಳಲ್ಲಿ

ಎಷ್ಟು ಪೋಸ್ಟ್‌ಗಳನ್ನು ಅಬಾಲಿಷ್ ಮಾಡಿದ್ದೀರಿ ಎಷ್ಟು ಅಪಾಯಿಂಟ್‌ಮೆಂಟ್ಸ್ ಕಡಿಮೆ ಮಾಡಿದ್ದೀರಿ ಎನ್ನುವುದನ್ನು ತಾವು ಹೇಳಬೇಕು. ಕೇವಲ ೧೦–೧೨ ವರ್ಷಗಳ ಹಿಂದೆ ನಾನು ಶಾಸನ ಸಭಾ ಸದಸ್ಯನಾಗಿದ್ದಂಥ ಸಂದರ್ಭದಲ್ಲಿ ಒಬ್ಬರು, ಇಬ್ಬರು ಮೂರು ನಾಲ್ಕು ಐದು ಜನ ಚೀಫ್ ಇಂಜಿನಿಯರ್‌ಗಳು ಇದ್ದರು. ಕೇವಲ ಹತ್ತು ವರ್ಷಗಳಲ್ಲಿ ೪೫ ಜನ ಮುಖ್ಯ ಇಂಜಿಯರ್‌ಗಳು ಆಗಿದ್ದಾರೆ. ನಮ್ಮಲ್ಲಿರತಕ್ಕಂಥ ಹಣಕಾಸಿನ ಪರಿಸ್ಥಿತಿಯಲ್ಲಿ ಅವರನ್ನು ಮೈನ್‌ಟೇನ್ ಮಾಡತಕ್ಕಂಥ ಶಕ್ತಿ ಎಲ್ಲಿದೆ ಅದಕ್ಕಿಂತ ಹೆಚ್ಚಾಗಿ ಅಷ್ಟು ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದಾಕ್ಷಣ ಕೆಲಸ ಎಲ್ಲಿ ಕೊಡುತ್ತೀರಿ ಇವತ್ತು ಹಣ ಇಲ್ಲ ನಿಮ್ಮಲ್ಲಿ ಇರತಕ್ಕಂಥ ಲಿಮಿಟೆಡ್ ರಿಸೋರ್ಸಸ್ ನೋಡಿದರೆ ನಮ್ಮ ರಾಜ್ಯದಲ್ಲಿ ಐದಾರು ಜನ ಮುಖ್ಯ ಇಂಜಿನಿಯರ್‌ಗಳ ಮೇಲೆ ಬೇಕಾಗಿಲ್ಲ ಎಂದು ನನಗನಿಸುತ್ತದೆ. ಹೇಮಾವತಿ ನದಿಯು ಒಂದುನಾಲೆಗೆ ಇಬ್ಬರು ಮುಖ್ಯ ಇಂಜಿನಿಯರ್‌ಗಳಿದ್ದಾರೆ ಒಂದೊಂದು ನದಿಗೂ ಇಬ್ಬಿಬ್ಬರೂ ಮುಖ್ಯ ಇಂಜಿನಿಯರ್‌ಗಳಾದರೆ ಏನು ಪ್ರಯೋಜನವಾಗುತ್ತದೆ. ಅವರಿಗೆ ಕೊಡತಕ್ಕಂಥ ಸೌಲಭ್ಯದ ಬಗ್ಗೆ ಕೆಲವು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು ಮಂತ್ರಿಮಂಡಲದಲ್ಲಿ ನಾಲ್ಕು ಜನರನ್ನು ಜಾಸ್ತಿ ತೆಗೆದುಕೊಂಡರೆ ಇವೊತ್ತು ಕೂಗಾಡುತ್ತಾರೆ. ದಿನೇ ದಿನೇ ಇವರುಗಳ ಪೋಸ್ಟ್‌ಗಳನ್ನು ಜಾಸ್ತಿ ಮಾಡಿದರೆ ಅದರ ಬಗ್ಗೆ ಯಾರೂ ಪರಿತಾಪವನ್ನು ವ್ಯಕ್ತಪಡಿಸುವುದಿಲ್ಲ. ಅದರ ಬಗ್ಗೆ ತಾವು ಗಮನ ಹರಿಸಿ ಇಂಜಿನಿಯರ್ ಪೋಸ್ಟ್‌ಗಳನ್ನು ಕಡಿಮೆ ಮಾಡಬೇಕು. ಇನ್ನೊಂದು ಮುಖ್ಯವಾದಂಥ ವಿಷಯ ಅಂದರೆ ನಿನ್ನೆ ದಿವಸ ಮಾತನಾಡುವಂಥ ಸಂದರ್ಭದಲ್ಲಿ ಪಿಡಬ್ಲ್ಯುಡಿ ಅಂದರೆ ಎಲ್ಲರೂ ಒಂದು ತರಹ ಬಣ್ಣದ ಗಾಜಿನಲ್ಲಿ ನೋಡುತ್ತಾರೆ. ಭ್ರಷ್ಟಾಚಾರ ತುಂಬಿದೆ ಎಂದು ಎಲ್ಲರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ದೃಷ್ಟಿಯಿಂದ ನಾವು ಈ ಇಲಾಖೆಯನ್ನು ನೋಡುತ್ತೇವೆ. ಆದರೆ ನಾನು ಆ ದೃಷ್ಟಿಯಿಂದ ನೋಡುವುದಿಲ್ಲ. ಆದರೂ ಕೂಡ ಭ್ರಷ್ಟಾಚಾರ ಇಲ್ಲ ಎಂದು ಹೇಳುವ ಪ್ರಶ್ನೆ ಇಲ್ಲ. ನೀವು ಯಾವ ದೇಶಕ್ಕೆ ಹೋದರೂ ನೂರಕ್ಕೆ ನೂರರಷ್ಟು ಭ್ರಷ್ಟಾಚಾರ ತಪ್ಪಿಸುವಂಥ ವ್ಯವಸ್ಥೆ ಈ ಪ್ರಪಂಚದಲ್ಲಿ ಈ ಭೂಮಿ ಮೇಲೆ ಇಲ್ಲ ಭ್ರಷ್ಟಾಚಾರ ಕಡಿಮೆ ಮಾಡತಕ್ಕ ಕೆಲಸವನ್ನು ನೀವು ಮಾಡಬೇಕು. ಇನ್ನು ಪಿಡಬ್ಲ್ಯುಡಿನಲ್ಲಿ ಯಾವುದೇ ಕೆಲಸ ಆದರೂ ೨೦–೨೫ ಪರ್‌ಸೆಂಟ್ ಹಣ ಸೋರಿ ಹೋಗತಕ್ಕಂಥಾದ್ದು ನಮಗೂ ನಿಮಗೂ ಗೊತ್ತಿರತಕ್ಕ ವಿಷಯ. ಹಿಂದಿನ ೭–೮ ವರ್ಷಗಳ ಅವಧಿಯಲ್ಲಿ ೨೦ ಪರ್‌ಸೆಂಟ್ ಸೋರಿಹೋಗುವುದು ಇತ್ತು ಅದು ಈಗ ೫೦ ಪರ್‌ಸೆಂಟ್‌ಗೆ ಹೋಗಿದೆ. ಇದು ಆಗಬಾರದು ಇವೊತ್ತು ಪಿಡಬ್ಲ್ಯುಡಿಯಲ್ಲಿ ಯಾವುದೇ ಕೆಲಸ ಮಾಡಬೇಕಾದರೂ ಎಸ್. ಆರ್. ನಲ್ಲಿ ಮಾಡುತ್ತಾರೆ. ಎಸ್. ಆರ್. ಮಾಡತಕ್ಕವರು ಕಂಟ್ರಾಕ್ಟದಾರರೆ. ಹೇಳತಕ್ಕಂಥಾದ್ದು ಎಸ್. ಆರ್. ಎಂದು ಆದರೆ ಶೇಕಡಾ ೫೦ ಪರ್‌ಸೆಂಟ್ ಖಾಸಗಿಯವರ ಪಾಲಾಗುತ್ತದೆ, ಕಂಟ್ರಾಕ್ಟದಾರರ ಪಾಲಾಗುತ್ತದೆ. ಅವರ ಮುಖೇನ ಎಲ್ಲೆಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗುತ್ತದೆ. ಇಂಥಾದ್ದನ್ನು ತಪ್ಪಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇದರ ಬಗ್ಗೆ ನಾನು ಒಂದು ಹೊಸ ಸಲಹೆ ಕೊಡಬಯಸುತ್ತೇನೆ. ಬಡ್ಜೆಟೆಡ್ ವರ್ಕ್ಸ್ ಅನ್ನು ಟೆಂಡರ್ ಕಾಲ್‌ಫರ್ ಮಾಡಿ ಕಾಂಪಿಟಿಟೀವ್ ರೇಟಿನಲ್ಲಿ ಕೊಡತಕ್ಕಂತಹ ವ್ಯವಸ್ಥೆ ಮಾಡಿದರೆ ಸ್ವಲ್ಪ ಮಟ್ಟಿಗೆ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಮಾಡತಕ್ಕಂತಹ ಕೆಲಸಗಳಲ್ಲಿ ಕಳಪೆ ಮಟ್ಟದ ಕೆಲಸಗಳನ್ನು ಮಾಡುತ್ತಿರತಕ್ಕಂಥಾದ್ದನ್ನು ನಾವು ಎಲ್ಲೆಲ್ಲೂ ನೋಡಿದ್ದೇವೆ. ಗುಣಮಟ್ಟವನ್ನು ಕಾಪಾಡುವುದರಲ್ಲಿ ತಾವು ಹೆಚ್ಚಿನ ಶ್ರಮವನ್ನು ವಹಿಸಬೇಕು. ಆ ಸಂಬಂಧಪಟ್ಟ ಇಲಾಖೆಯ ಕೈಯನ್ನು ಬಲಪಡಿಸಬೇಕು. ಯಾವುದೇ ರಾಜಕೀಯ ಹಸ್ತಕ್ಷೇಪ ಇಲ್ಲದೇ ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನನ್ನ ಕ್ಷೇತ್ರದ ಮಟ್ಟಿಗೆ ಕೆಲವು ಸಲಹೆಗಳನ್ನು ಹೇಳುವುದಾದರೆ. ತಾವು ಬಡ್ಜೆಟ್ಟಿನಲ್ಲಿ ಕೆಲವು ವರ್ಕ್ಸ್ ಅನ್ನು ಸೇರಿಸುತ್ತೀರಿ. ಆಗ ನಾನು ಹೇಳಿದೆ ಮತ್ತೊಬ್ಬ ಶಾಸಕರು ಹೇಳಿದರು ಎಂದು ಆ ವರ್ಕ್ಸನ್ನು ಸೇರಿಸುತ್ತೀರಿ. ಆದರೆ ಇಷ್ಟು ಜನರು ಶಾಸನಸಭಾ ಸದಸ್ಯರಾಗಿ ಬಂದರೂ ಕೂಡ ಯಾವುದೇ ಹೊಸ ಕೆಲಸವನ್ನು ತೆಗೆದುಕೊಳ್ಳುವ ಪ್ರಯತ್ನ ನೀವು ಮಾಡಿಲ್ಲ. ಕ್ಯಾರಿ ಓವರ್ ಕೆಲಸಗಳು ಏನು ಇದೆಯೋ ಹಿಂದಿನ ಬಜೆಟ್ ಪುಸ್ತಕದಲ್ಲಿ ಏನಿತ್ತೋ ಅದನ್ನೇ ಪ್ರಿಂಟ್ ಮಾಡಿ ಕಳಿಸಿದ್ದೀರಿ. ಅದಕ್ಕೆ ಹಣ ಇಲ್ಲ. ಇದನ್ನು ಒಪ್ಪುತ್ತೇನೆ. ಹಿಂದೆ ಮೂರನೇ ಒಂದು ಭಾಗದಷ್ಟು ಹಣ ಕೊಡದೇ ಟೆಕ್ನಿಕಲ್ ಸ್ಯಾಂಕ್ಷನ್ ಆಗುತ್ತಿರಲಿಲ್ಲ. ಬಡ್ಜೆಟ್ಟಿನಲ್ಲಿ ೬ ಲಕ್ಷ ರೂಪಾಯಿಗಳ ಕೆಲಸವನ್ನು ತೋರಿಸುತ್ತೀರಿ, ಹತ್ತು ಸಾವಿರ ರೂಪಾಯಿಗಳ ಬಡ್ಜೆಟ್ ಪ್ರಾವಿಜನ್ ಮಾಡಿರುತ್ತೀರಿ. ಆದರೆ ಮೂರನೇ ಒಂದು ಭಾಗದಷ್ಟು ಹಣ ಕೊಡುವವರೆಗೆ ಟೆಕ್ನಿಕಲ್ ಸ್ಯಾಂಕ್ಷನ್ ಆಗುವುದಿಲ್ಲ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ನಮ್ಮ ಕ್ಷೇತ್ರದವರಿಗೆ ನೋಡಿ, ೬ ಲಕ್ಷ ರೂಪಾಯಿಗಳ ಕೆಲಸವನ್ನು ಸೇರಿಸಿದೆಯೆಂದು ಬಜೆಟ್ ಪುಸ್ತಕವನ್ನು ತೋರಿಸಬೇಕಾಗುತ್ತದೆ. ಆದರೆ ಕೆಲಸ ಮಾತ್ರ ಪ್ರಾರಂಭವಾಗುವುದಿಲ್ಲ. ನಿಮ್ಮ ಇಲಾಖೆಯು ಎಲ್ಲಾ ದುಡ್ಡನ್ನು ತಂದು ನನ್ನ

ಕ್ಷೇತ್ರಕ್ಕೆ ನೀಡಿದರೂ ಕೂಡ ನನ್ನನ್ನು ಸಮಾಧಾನ ಮಾಡುವುದಕ್ಕಾಗುವುದಿಲ್ಲ. ಆದರೆ ಯಾವ ಒಂದು ಕೆಲಸವನ್ನು ನೀವು ಕೈಗೆ ಎತ್ತಿಕೊಂಡಿರುತ್ತೀರಿ ಅದನ್ನು ಮುಗಿಸುವ ಪ್ರಯತ್ನ ಮಾಡಬೇಕು. ನಾನು ಮೊನ್ನೆ ಎರಡು ಲಿಫ್ಟ್ ಇರಿಗೇಷನ್‌ಗಳ ಬಗ್ಗೆ ಗಮನ ಸೆಳೆಯುವ ಸೂಚನೆಯ ಮೂಲಕ ತಮ್ಮ ಗಮನಕ್ಕೆ ತಂದೆ. ಸುಮಾರು ೧೨ ವರ್ಷಗಳ ಹಿಂದೆ ಲಿಫ್ಟ್ ಇರಿಗೇಷನ್ ವರ್ಕ್ ಆಗಿರತಕ್ಕಂಥಾದ್ದು. ಹೆಚ್ಚೂ ಕಡಿಮೆ ೧೮ ರಿಂದ ೨೦ ಲಕ್ಷ ರೂಪಾಯಿ ಖರ್ಚಾಗತಕ್ಕಂತಹ ಆ ಯೋಜನೆಗಳಿಗೆ ಈಗಾಗಲೆ ಮುಕ್ಕಾಲು ಭಾಗ ಹಣ ಖರ್ಚಾಗಿದೆ. ಇನ್ನು ಕಾಲು ಭಾಗ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯ ವಿಲ್ಲದೆ ಆ ಪ್ರಾಜೆಕ್ಟ್‌ಗಳು ಇನ್ನೂ ಪ್ರಾರಂಭವಾಗಿಲ್ಲ. ಅಂಬಾರಪುರ, ಮರೆದಾಡುಗಳಲ್ಲಿ ಎರಡು ಲಿಫ್ಟ್ ಇರಿಗೇಷನ್‌ಗಳ ಕೆಲಸ ಹಾಗೇ ಇದೆ. ಈಗಾಗಲೆ ತಾವು ಆದೇಶವನ್ನು ಕೊಟ್ಟಿದ್ದೀರಿ. ಆ ಆದೇಶವನ್ನು ಅಧಿಕಾರಿಗಳು ಪರಿಪಾಲನೆಮಾಡಿ ಆ ಎರಡು ಕೆಲಸಗಳನ್ನು ಆದಷ್ಟು ಬೇಗ ಮುಗಿಸಬೇಕು ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನು ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ಸಣ್ಣ ಕೆರೆಗಳು ಬರತಕ್ಕಂಥಾದ್ದು ಸಾಕಷ್ಟು ಇದೆ. ಅವುಗಳನ್ನು ಇವತ್ತು ತೆಗೆದುಕೊಂಡು ಹೋಗಿ ಜಿಲ್ಲಾ ಪರಿಷತ್ತಿಗೆ ಕೊಟ್ಟಿದ್ದೀರಿ. ಜಿಲ್ಲಾ ಪರಿಷತ್ತಿನ ಕೈಯನ್ನು ಬಲಪಡಿಸಬೇಕೆಂದು ತಾವು ಕೊಟ್ಟಿರಬಹುದು ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಅವುಗಳನ್ನು ಜಿಲ್ಲಾ ಪರಿಷತ್ತಿನಿಂದ ಕಿತ್ತುಕೊಂಡು ನಿಮ್ಮ ವ್ಯಾಪ್ತಿಯಲ್ಲಿ ಇಟ್ಟುಕೊಳ್ಳುವುದು ಸೂಕ್ತ. ಅದು ಆಗದಿದ್ದರೆ ಅವರಿಗೇ ಪ್ರತ್ಯೇಕವಾಗಿ ಸಣ್ಣ ಕೆರೆಗಳ ನಿರ್ಮಾಣಕ್ಕೋಸ್ಕರ ಹಣವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿ. ಟೈಂ ಬಾಂಡ್ ಪಾಲಿಸಿಯನ್ನು ಹಾಕಿಕೊಂಡು ಮಾಡಿದರೆ ಕೆಲಸವನ್ನು ಬೇಗ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಒಂದು ಕೆಲಸ ಪ್ರಾರಂಭವಾದರೆ ಅದು ಮುಗಿಯಬೇಕಾದರೆ ೧೦–೧೫ ವರ್ಷಗಳಾಗುತ್ತಿದೆ. ಈ ರೀತಿ ಆಗುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಅದಕ್ಕೆ ಹಾಕತಕ್ಕಂತಹ ಹಣವೆಲ್ಲ ಡೆಡ್ ಕ್ಯಾಪಿಟಲ್ ಆಗುತ್ತದೆ. ಅದು ರೈತನಿಗೇ ಕೂಡ ತಲುಪತಕ್ಕಂತಹ ವ್ಯವಸ್ಥೆಯಾಗುವುದಿಲ್ಲ. ಹಿಂದೆ ನಾನು ಇದ್ದಂಥ ಕಾಲದಲ್ಲಿ ನಿಮ್ಮ ಇಲಾಖೆಯಲ್ಲಿ ಇಬ್ಬರು ಎಕ್ಸಿಕ್ಯೂಟೀವ್ ಇಂಜನಿಯರ್‌ಗಳು ಇದ್ದರು ಇವತ್ತು ೪ ಜನ ಆಗಿದ್ದಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನಿಯರ್ಸ್ ಅಂತೂ ಎಷ್ಟು ಜನರಿದ್ದಾರೆಂದು ಗೊತ್ತಾಗುವುದಿಲ್ಲ. ಅವರ ಹೆಸರನ್ನು ಕೂಡ ಹೇಳುವುದಕ್ಕಾಗುವುದಿಲ್ಲ. ಅಷ್ಟೊಂದು ದೊಡ್ಡದಾಗಿ ಇಲಾಖೆ ಬೆಳೆದಿದೆ. ಹಿಂದೆ ಮಾನ್ಯ ಚಂದ್ರೇಗೌಡರು ಅಧಿಕಾರದಲ್ಲಿದ್ದಂತಹ ಸಮಯದಲ್ಲಿ ಹುಳಿಯಾರುವಿನಲ್ಲಿನ ಒಂದು ೫೦ ಅಡಿ ೪೦೦ ಅಡಿ ಜಾಗವನ್ನು ಕೆರೆಯ ಒಂದು ಭಾಗವನ್ನು ಸಾರ್ವಜನಿಕರ ಕೆಲಸಕ್ಕೋಸ್ಕರ ಕೊಡಬೇಕೆಂದು ಅರಿಕೆ ಮಾಡಿಕೊಂಡಿದ್ದೆ. ಅವರು ಆದೇಶ ಕೊಟ್ಟಿದ್ದರು ತಾವು ಮಂತ್ರಿಗಳಾದ ಮೇಲೆ ಎರಡು ಸಲ ಅದರ ಬಗ್ಗೆ ಪ್ರಸ್ತಾಪ ಮಾಡಿದರೂ ಕೂಡ ಇಲ್ಲಿಯವರೆಗೂ ಅದನ್ನು ಕೊಡುವುದಕ್ಕಾಗಿಲ್ಲ. ಅಂದರೆ ಸರ್ಕಾರದ ನಾವು ಯಾವುದಾದರೂ ಕೋರಿಕೆಯನ್ನು ಇಟ್ಟರೆ ಕೆಲಸವಾಗಬೇಕಾದರೆ ಮಟ್ಟದಲ್ಲಿ ಅದಕ್ಕೆ ಎಷ್ಟು ವರ್ಷಗಳು ಬೇಕಾಗುತ್ತದೆಯೋ ಗೊತ್ತಿಲ್ಲ. ಇದಕ್ಕೆ ಯಾವುದೇ ಹಣಕಾಸಿನ ಬರ್ಡನ್ ಇಲ್ಲ. ಕೆಟ್ಟು ಹೋಗಿರತಕ್ಕಂತಹ ಕೆರೆ ಏನು ಇದೆ ಅದನ್ನು ಮಂಡಲ ಪಂಚಾಯತಿಗೆ ವಹಿಸಿಕೊಡಿ ಎಂದರೆ ಒಂದು ಕಾಗದ ವಿಲೇವಾರಿಯಾಗಬೇಕಾದರೆ ಸುಮಾರು ೧೦–೧೨ ವರ್ಷವಾಗಬೇಕಾದರೆ ತಮ್ಮ ಇಲಾಖೆಯಲ್ಲಿ ಇಷ್ಟೊಂದು ಸ್ಟಾಫ್ ಇದ್ದರೂ ಕೂಡ ಏನು ಮಾಡುತ್ತಿದ್ದಾರೆ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡುತ್ತೇನೆ. ಇನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ ಹಿಂದೆ ಎರಡು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳನ್ನು ಮಾಡಿದ್ದರು. ಯಾರೋ ತಮಗೆ ಬೇಕಾಗಿರತಕ್ಕವರೊಬ್ಬರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೋಸ್ಕರ ಕಾರ್ಪೊರೇಷನನ್ನು ಮಾಡಿದ್ದಾರೆಂಬ ಭಾವನೆ ಬರುತ್ತದೆ. ಸುಮಾರು ೪೦೦–೫೦೦ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದೀರಿ ಅದಕ್ಕೆ ಒಂದು ರೂಪಾಯಿಯನ್ನು ಕೂಡ ಖರ್ಚು ಮಾಡಲಿಕ್ಕೆ ಆಗಲಿಲ್ಲ. ಒಂದು ಪ್ರಾಜೆಕ್ಟ್ ಐಡೆಂಟಿಫೈ ಮಾಡಲಿಕ್ಕೂ ಆಗಲಿಲ್ಲ. ಇವತ್ತಿನವರೆಗೂ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಾನು ಒಂದು ಸಲಹೆಯನ್ನು ಕೊಡುವುದೇನೆಂದರೆ ಆ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗೆ ಶಕ್ತಿ ಕೊಟ್ಟು, ಸಾಕಷ್ಟು ಹಣ ಕೊಟ್ಟು, ಕಾವೇರಿ ಮತ್ತು ಕೃಷ್ಣ ಬೆಸಿನ್‌ನಲ್ಲಿ ಒಂದೊಂದು ಕಾರ್ಪೊರೇಷನ್ ಮಾಡಿರುವುದರಿಂದ ಇವತ್ತು ಕೆಲಸವನ್ನು ತ್ವರಿತಗತಿಯಲ್ಲಿ ಮುಗಿಸಲೇ ಬೇಕಾಗಿರುವುದರಿಂದ ಹೆಚ್ಚು ಹಣವನ್ನು ಕೊಟ್ಟು ನಮ್ಮ ನೀರನ್ನು ಹೆಚ್ಚು ಉಪಯೋಗಿಸಲು ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯ ಎನ್ನತಕ್ಕ ಮಾತನ್ನು ಹೇಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಎ. ಚಿನ್ನಪ್ಪ (ಮಡಕೇರಿ).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ಮೇಲಿನ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ಎರಡು ವಿಷಯಗಳನ್ನು ಹೇಳ

ಬಯಸುತ್ತೇನೆ. ಈ ನೀರಾವರಿಯನ್ನು ಮೂರು ಭಾಗವಾಗಿ ವಿಂಗಡಿಸಿದ್ದಾರೆ. ಮೈನರ್ ಇರಿಗೇಷನ್ ಮೇಜರ್ ಇರಿಗೇಷನ್ ಮತ್ತು ಮೀಡಿಯಂ ಇರಿಗೇಷನ್ ಎಂದು ವಿಂಗಡಿಸಿದ್ದಾರೆ. ಮೇಜರ್ ಇರಿಗೇಷನ್ ಮೇಲೆ ಸಾಧಾರಣವಾಗಿ ಎಲ್ಲಾ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಆದರೆ ಮೈನರ್ ಇರಿಗೇಷನ್ ಮೇಲೆ ನಾನು ಒತ್ತಿಯಾಗಿ ಹೇಳ ಬಯಸುತ್ತೇನೆ. ಮಲೆನಾಡು ಪ್ರದೇಶದಲ್ಲಿ ಮೈನರ್ ಇರಿಗೇಷನ್‌ಗೆ ಹೆಚ್ಚಿನ ಸ್ಕೋಪ್ ಇದೆ ಎಂದು ನಾನು ಮಾನ್ಯ ಮಂತ್ರಿಯವರಿಗೆ ಹೇಳುತ್ತೇನೆ. ಏಕೆಂದರೆ, ಮಲೆನಾಡು ಪ್ರದೇಶದಲ್ಲಿ ಬೆಟ್ಟಗಳಿಂದ ನದಿಗಳು ಹರಿದು ಬಯಲು ಸೀಮೆಗೆ ಬರುತ್ತವೆ. ಅಲ್ಲಿ ಆ ಸೀಮೆಗಳಿಗೆ, ಆ ಜಾಗಕ್ಕೆ ಈ ದೊಡ್ಡ ನೀರಾವರಿಯಿಂದ ಯಾವುದೂ ಪ್ರಯೋಜನವಾಗಲಾರದು. ಅಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಮಾಡಬೇಕು. ಮತ್ತು ಹರಿದು ಬರತಕ್ಕ ಸಣ್ಣ ಸಣ್ಣ ಹೊಳೆಗಳು ಇವೆ ಅವಕ್ಕೆ ಸಣ್ಣ ಸಣ್ಣ ಕಟ್ಟೆಗಳನ್ನು ಹಾಕಿ ಅಲ್ಲಿನ ಜಮೀನುಗಳಿಗೆ, ಬಡ ರೈತರ ಜಮೀನುಗಳಿಗೆ ನೀರನ್ನು ಕೊಡತಕ್ಕ ಪ್ರಯತ್ನ ಮಾಡಿದರೆ ಈ ಮಲೆನಾಡು ಪ್ರದೇಶದ ಬೆಳೆ ಹೆಚ್ಚಾಗತಕ್ಕಂಥ ಸಂದರ್ಭವಿದೆ. ಅಲ್ಲದೆ ಬತ್ತಿ ಹೋಗಿರುವ ಕೆರೆಗಳನ್ನು ಡೀಪನ್ ಮಾಡಿದರೆ ಹೆಚ್ಚು ನೀರು ಒದಗತಕ್ಕ ಸಂದರ್ಭ ಉಂಟಾಗುತ್ತದೆ. ಅಷ್ಟೆ ಅಲ್ಲದೆ ಈ ಸಣ್ಣ ತೋಡುಗಳಲ್ಲಿ ಕಟ್ಟೆ ಹಾಕಿದರೆ ಆ ಕಟ್ಟೆಯಿಂದ ಸಣ್ಣ ಸಣ್ಣ ಜಮೀನುಗಳಿಗೆ ಮಲೆನಾಡು ಪ್ರದೇಶಗಳಲ್ಲಿ ನೀರು ಸಿಕ್ಕಲಿಕ್ಕೆ ಸಾಧ್ಯತೆ ಇದೆ. ಕೊಡಿಗೆವುಂಗೆ ಮಾತ್ರ ಮಲೆನಾಡಿನ ಬಗ್ಗೆ ನಾನು ಹೇಳುವುದಾದರೆ, ಮಲೆನಾಡಿಗೆ ಒಂದು ಮಲನಾಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಬೇಕು. ಏಕೆಂದರೆ, ಮಲೆನಾಡಿನ ಸ್ಥಿತಿಯೇ ಬೇರೆ ಬಯಲು ಸೀಮೆಯ ಸ್ಥಿತಿಯೇ ಬೇರೆ. ಬಯಲು ಸೀಮೆಯಲ್ಲಿ ಯಾವರೀತಿಯಲ್ಲಿ ಕೆಲಸಕ್ಕೆ ಎಸ್ಟಿಮೇಟ್ ಮಾಡುತ್ತೀರಿ ಅದೇ ಎಸ್ಟಿಮೇಟ್ ಮಲೆನಾಡು ಪ್ರದೇಶದಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ. ಅಂದರೆ ಅಲ್ಲಿ ಹೆಚ್ಚಿನ ಖರ್ಚಾಗುತ್ತದೆ. ಅಷ್ಟೆ ಅಲ್ಲದೆ ಮಲೆನಾಡು ಪ್ರದೇಶದಲ್ಲಿ ಯಾವುದಾದರೂ ಒಂದು ಕೆಲಸವನ್ನು ಕೈಗೆತ್ತಿಕೊಂಡರೆ ಸಾಧಾರಣ ೬ ತಿಂಗಳ ಕಾಲ ಇವರು ಅಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗಲಾರದು. ಅಲ್ಲಿ ಹೆಚ್ಚಿನ ಮಳೆ ಇರುವುದರಿಂದ ಕೆಲಸ ಮಾಡಲಿಕ್ಕೆ ಸಾಧ್ಯವಾಗಲಾರದು. ಆದರಿಂದ ಮಳೆ ಇಲ್ಲದ ಸಂದರ್ಭದಲ್ಲಿ ಹೆಚ್ಚಿನ ಕೆಲಸ ಮಾಡುವ ಪ್ರಯತ್ನವನ್ನು ಪಿ. ಡಬ್ಲ್ಯೂ. ಡಿ. ಯಿಂದ ಮಾಡಿಸಿದರೆ ಬೇಗ ಕೆಲಸ ಮಾಡುವಂತಹ ಸಾಧ್ಯತೆ ಇದೆ.

ಇನ್ನು ನಾನು ರೋಡ್ಸ್ ಬಗ್ಗೆ ಹೇಳುವುದಾದರೆ, ಈ ಸಲ ಕೊಡಗು ಜಿಲ್ಲೆಯನ್ನು ಕಂಪ್ಲೀಟ್ ಆಗಿ ನೆಗ್ಲೆಕ್ಟ್ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಕೊಡಿಗಿನಲ್ಲಿರುವ ರಸ್ತೆಗಳ ರಿಪೇರಿಗೆ ಒಟ್ಟು ೪೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ೪೫ ಸಾವಿರ ರೂಪಾಯಿಗಳು ಒಂದೇ ದಿವಸದಲ್ಲಿ ಖರ್ಚಾಗುತ್ತದೆ. ಉದಾ:—ನಾನು ಇದರ ಬಗ್ಗೆ ಕಾಗದದ ಮೂಲಕ ಬರೆದಿದ್ದೇನೆ ಮತ್ತು ತಿಳಿಸಿದ್ದೇನೆ. ಆದರೆ ಅದರ ಬಗ್ಗೆ ಗಮನವನ್ನು ತೆಗೆದುಕೊಂಡಿಲ್ಲ. ಇವತ್ತು ಮೈಸೂರಿನಿಂದ ಮಂಗಳೂರಿಗೆ ಹೋಗತಕ್ಕ ರಸ್ತೆ ಇದೆ, ಅದು ಸ್ಟೇಟ್ ಹೈವೆ ರಸ್ತೆ. ಆ ರಸ್ತೆಯಲ್ಲಿ ಸುಮಾರು ೫ ಸೇತುವೆಗಳು ಇವೆ. ಮಳೆಗಾಲದಲ್ಲಿ ಸಾಧಾರಣ ಆ ೫ ಸೇತುವೆಗಳ ಪೈಕಿ ಒಂದು ಅಥವಾ ಎರಡು ಸೇತುವೆಗಳು ಬೀಳತಕ್ಕ ಸ್ಥಿತಿಯಲ್ಲಿದೆ. ಈ ರೀತಿ ಸೇತುವೆಗಳು ಬಿದ್ದುಹೋದರೆ, ಬೆಂಗಳೂರಿನಿಂದ ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ವಾಹನಗಳು ಹೋಗಲಿಕ್ಕೆ ಆಗದೆ ಕೆಲವರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಆದ್ದರಿಂದ ನಾನು ಒತ್ತಿಹೇಳುವುದೇನೆಂದರೆ, ಬೈನಾಲೆಯಲ್ಲಿರತಕ್ಕಂಥ ಒಂದು ಬ್ರಿಡ್ಜ್ ಮದನಾಲೆಯಲ್ಲಿರತಕ್ಕಂಥ ಬ್ರಿಡ್ಜನ್ನು ಕೂಡಲೇ ತೆಗೆದುಕೊಂಡು ಅದನ್ನು ರಸ್ತೆಯಾಗಿ ಕಟ್ಟಿಸಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ತಲಕಾವೇರಿ ಒಂದು ಪುಣ್ಯ ಸ್ಥಳ. ಅಲ್ಲಿಗೆ ಸಾವಿರಾರು ಜನ ಯಾತ್ರಾರ್ಥಿಗಳು ಹೋಗುತ್ತಿರುತ್ತಾರೆ ಆದರೆ ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲದಿರುವುದರಿಂದ ಮಾನ್ಯ ಸಚಿವರು ತಲಕಾವೇರಿ ಬಗ್ಗೆ ಹೆಚ್ಚಿನ ಗಮನಕೊಟ್ಟು ಅಲ್ಲಿಗೆ ಹೋಗಿಬರುವವರಿಗೆ ಅನುಕೂಲ ಮಾಡಿಕೊಡಬೇಕು. ತಲಕಾವೇರಿಗೆ ಹೋಗುವ ರಸ್ತೆ ಬಹಳ ಚಿಕ್ಕದಾಗಿರುವುದರಿಂದ ಅದನ್ನು ಸ್ಟೇಟ್ ಹೈವೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಆಗ ಆ ಯಾತ್ರಾ ಸ್ಥಳಕ್ಕೆ ಹೋಗಲಿಕ್ಕೆ ಜನರಿಗೆ ಅನುಕೂಲವಾಗುತ್ತದೆ. ಅಲ್ಲಿ ಮುಖ್ಯವಾಗಿ ೪ ಸಣ್ಣ ಸಣ್ಣ ಬ್ರಿಡ್ಜ್‌ಗಳು ಇನಿವೆ ಅವುಗಳನ್ನು ವಿಶಾಲವಾಗಿ ಮಾಡಿಕೊಡಬೇಕಾಗಿದೆ. ಭಾಗಮಂಡಲದ ಸಂಗಮ ಸ್ಥಳದಲ್ಲಿರತಕ್ಕ ರಸ್ತೆ ಮತ್ತು ಬ್ರಿಡ್ಜ್ ಬಹಳಷ್ಟು ಕೆಳಮಟ್ಟದಲ್ಲಿರುವುದರಿಂದ ಒಂದು ಸಣ್ಣ ಫ್ಲಡ್ ಬಂದರೂ ಕೂಡ ಅದು ಮುಚ್ಚಿಹೋಗುತ್ತದೆ. ಆದ್ದರಿಂದ ಅದನ್ನು ೧೦ ಅಡಿ ಎತ್ತರಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮತ್ತು ಸರ್ಕಾರದಲ್ಲಿ ಕೇಳಿಕೊಂಡಿದ್ದೇನೆ. ಅದನ್ನು ಮಾಡಿದರೆ ಫ್ಲಡ್ ಬಂದರೂ ಕೂಡ ಯಾವುದೇ ವಾಹನ ಸಂಚಾರಕ್ಕೆ ತೊಂದರೆಯೂ ಆಗುವುದಿಲ್ಲ. ಆಮೇಲೆ ಹಾರಂಗಿ, ಮತ್ತು ಹೇಮಾವತಿ ನದಿಗೆ ಕಟ್ಟಿರತಕ್ಕ ೨ ಕಟ್ಟೆ,

ಗಳೇನಿವೆ ಅದರಲ್ಲಿ ಎಡಭಾಗದ ನಾಲೆಯನ್ನು ಮಾತ್ರ ಮಾಡಿದ್ದಾರೆ. ಬಲ ಭಾಗದಲ್ಲಿ ನಾಲೆಯನ್ನು ಮಾಡಿ ಆ ಭಾಗದ ಜನರಿಗೆ ಈ ನದಿಯಿಂದ ನೀರನ್ನು ಒದಗಿಸಿಕೊಟ್ಟರೆ ಕೊಡಗಿನ ಜನರಿಗೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆಮೇಲೆ ಕೊಡಗಿನಲ್ಲಿ ಚಿಕ್ಕ ಹೊಳೆ ಪ್ರಾಜೆಕ್ಟ್ ಎಂದು ಇದೆ. ಅದರ ಕೆಲಸ ಕಳೆದ ಸುಮಾರು ೧೦-೧೨ ವರ್ಷಗಳಿಂದ ಪೂರ್ಣವಾಗದೆ ಹಾಗೆಯೇ ಉಳಿದಿದೆ. ಆದ್ದರಿಂದ ಇದನ್ನು ಕೂಡಲೇ ಪೂರ್ಣ ಮಾಡಿ ಆ ಭಾಗದ ಜನರಿಗೆ ನೀರನ್ನೊದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಮಂತ್ರಿಗಳಲ್ಲಿ ಇನ್ನೊಂದು ಮನವಿ ಏನೆಂದರೆ, ಮಲೆನಾಡು ಪ್ರದೇಶದಲ್ಲಿ ತಾವು ಏನಾದರೂ ಒಂದು ರಸ್ತೆಯನ್ನು ಮಾಡುವುದಾದರೆ ತಮಗೆ ಎಷ್ಟು ಸಾಧ್ಯವೋ ಅಷ್ಟನ್ನೇ ಪೂರ್ಣವಾಗಿ ಮಾಡಿ. ಎರಡು ಕಿಲೋಮೀಟರ್ ರಸ್ತೆಯನ್ನು ಮಾಡುವುದಕ್ಕೆ ಸಾಧ್ಯವಾದರೆ ಅಷ್ಟನ್ನೇ ಪೂರ್ಣವಾಗಿ ಮಾಡಿ. ಏಕೆಂದರೆ, ನೀವು ಈ ವರ್ಷ ಮೆಟಲಿಂಗ್ ಹಾಕಿ ೩-೪ ವರ್ಷಗಳಾದರೂ ಟಾರ್ ಹಾಕದೇ ಹೋದರೆ ಮಳೆ ಬಂದು ಮೊದಲು ಮಾಡಿದ್ದ ಮೆಟಲಿಂಗ್ ಎಲ್ಲಾ ಕೊಚ್ಚಿ ಹೋಗಿರುತ್ತದೆ. ಆದ್ದರಿಂದ ನೀವು ಮಾಡಿಯೂ ಏನೂ ಪ್ರಯೋಜನವಾಗುವುದಿಲ್ಲ. ನೀವು ಮೆಟಲಿಂಗ್ ಮಾಡಿದಷ್ಟು ರಸ್ತೆಯನ್ನೂ ಪೂರ್ಣವಾಗಿ ಟಾರ್ ಮಾಡಿದರೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ಒಂದೇ ವರ್ಷದಲ್ಲಿ ರಸ್ತೆ ಕೆಲಸವನ್ನು ಮಾಡಿ ಮುಗಿಸತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊಡಗಿನಲ್ಲಿರತಕ್ಕ ರಸ್ತೆಗಳನ್ನು ಸಂಪೂರ್ಣವಾಗಿ ಜಿಲ್ಲಾ ಪರಿಷತ್ತಿಗೆ ವಹಿಸಿದ್ದೀರಿ. ಕಾವೇರಿ ಹೊಳೆಯ ಬಲಬದಿಯಲ್ಲಿ ಒಂದು ಸೇತುವೆ ಆಗಬೇಕು. ಅದಕ್ಕೆ ೪೫ ಲಕ್ಷ ರೂಪಾಯಿಗಳನ್ನು ಹಿಂದಿನ ಸರ್ಕಾರ ಬಜೆಟ್‌ನಲ್ಲಿ ಇಟ್ಟಿತ್ತು. ಆದರೆ ಅದು ಬಹಳ ದೊಡ್ಡ ಕೆಲಸವಾದ್ದರಿಂದ ಮತ್ತು ಜಿಲ್ಲಾ ಪರಿಷತ್ತಿಗೆ ಸೇರಿದಂಥ ರಸ್ತೆಯಾದ್ದರಿಂದ ಅವರು ಇದನ್ನು ಮಾಡಲಿಕ್ಕೆ ಸಾಧ್ಯವಾಗದೆ ಈ ಬಜೆಟ್‌ನಲ್ಲಿ ಅದು ಕೈಬಿಟ್ಟು ಹೋಗಿದೆ. ಆದ್ದರಿಂದ ಪುನಃ ಈ ಬಜೆಟ್‌ನಲ್ಲಿ ಇದನ್ನು ಸೇರಿಸಿಕೊಂಡು ಆ ಸೇತುವೆಯನ್ನು ಸರ್ಕಾರದಿಂದಲೇ ಕಟ್ಟಿಸಬೇಕೆಂದು ನಾನು ಒತ್ತಾಯಿಸುತ್ತೇನೆ.

ಇನ್ನು ನನ್ನ ಕಡೆಯ ಬೇಡಿಕೆ ಏನೆಂದರೆ, ತಾವು ದಯಮಾಡಿ ಮಲೆನಾಡು ಪ್ರದೇಶಕ್ಕೆ ಮಲೆನಾಡು ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿ ಆ ಕಾರ್ಪೊರೇಷನ್ ಮೂಲಕ ಮಲೆನಾಡಿನ ಅಭಿವೃದ್ಧಿಯನ್ನು ಮಾಡಬೇಕೆಂದು ಕೇಳಿಕೊಂಡು, ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದನೆಗಳನ್ನರ್ಪಿಸಿ. ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಕಣ್ಣೂರು (ಶಿಗ್ಗಾಂ).—ಮಾನ್ಯ ಉಪಾಧ್ಯಕ್ಷಿಣಿಯವರೇ, ನೀರಾವರಿ ಮತ್ತು ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಮುಖ್ಯವಾಗಿ ನಾವು ಇವತ್ತು ಚಿಕ್ಕ ನೀರಾವರಿಗೆ ಬಹಳ ಮಹತ್ವವನ್ನು ಕೊಡಬೇಕಾಗಿದೆ. ಕಳೆದ ವರ್ಷಗಳಲ್ಲಿ ಅಂದರೆ ೧೯೮೩ರಿಂದ ೧೯೯೦ನೇ ಇಸವಿಯವರೆಗೆ ಈ ನೀರಾವರಿ ಇಲಾಖೆಗೆ ಎಷ್ಟು ಮಹತ್ವವನ್ನು ಕೊಡಬೇಕಾಗಿತ್ತೋ ಅಷ್ಟು ಮಹತ್ವವನ್ನು ಕೊಟ್ಟಿಲ್ಲವೆಂದು ಹೇಳಲಿಕ್ಕೆ ನನಗೆ ಬಹಳ ವಿಷಾದವೆನಿಸುತ್ತದೆ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಹಿಂದೆ ಲೋಕೋಪಯೋಗಿ ಖಾತೆಯ ಮಂತ್ರಿಗಳಾಗಿದ್ದಾಗ ತಾಲ್ಲೂಕು ಮಟ್ಟದಲ್ಲಿ ಚಿಕ್ಕ ನೀರಾವರಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು, ಪ್ರತಿವರ್ಷ ಸುಮಾರು ೧೫೦೦ ಎಕರೆಯಿಂದ ೩ ಸಾವಿರ ಎಕರೆವರೆಗೆ ಅಲ್ಲಿ ನೀರಾವರಿ ಆಗುವಂಥ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದುದನ್ನು ನಾವು ನೆನಪು ಮಾಡಿಕೊಳ್ಳಬೇಕಾಗಿದೆ. ಅದೇ ರೀತಿ ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರತಿವರ್ಷ ಕೆರೆಗಳಿಗೆ ನೀರನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡಿ, ಅದರ ಉಪಯೋಗ ನಮ್ಮ ರೈತಬಾಂಧವರಿಗೆ ದೊರೆಯುವಂತೆ ಮಾಡುವುದು ಬಹಳ ಮಹತ್ವದ್ದು ಎಂದು ತಿಳಿದುಕೊಂಡು ನಾನು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

೧೧-೩೦ ಎ.ಎಂ.

ಮಾನ್ಯ ಸಭಾಧ್ಯಕ್ಷರೇ, ಇವತ್ತು ನಾವು ನೋಡುತ್ತಿದ್ದೇವೆ. ಅನೇಕ ಕೆರೆಗಳಲ್ಲಿ ಮತ್ತು ಅದರ ಸುತ್ತಮುತ್ತಲೂ ನೀರು ಇಲ್ಲದೆ ಸತತವಾದ ಬರಗಾಲ ಬೀಳುತ್ತಿದೆ. ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ನದಿಗಳು ಕೂಡ ಅನೇಕ ತಾಲ್ಲೂಕುಗಳ ಸಮೀಪದಲ್ಲಿ ಹರಿಯುತ್ತಿರುತ್ತವೆ. ಅಂಥ ನದಿಗಳಿಂದ ಅಂದರೆ ಪ್ರತಿಯೊಂದು ತಾಲ್ಲೂಕಿನ ಸಮೀಪದಲ್ಲಿರತಕ್ಕಂಥ ನದಿಗಳಿಂದ ನೀರನ್ನು ಒದಗಿಸಬೇಕು. ಇವತ್ತು ಚಿಕ್ಕ ನೀರಾವರಿ ಯೋಜನೆಗಳಿಗೆ ಮಹತ್ವವನ್ನು ಕೊಟ್ಟು, ಏತ ನೀರಾವರಿಯಿಂದ ನೀರನ್ನು

ರೈತಬಾಂಧವರಿಗೆ ಒದಗಿಸಿ ಅವರು ತಮ್ಮ ಯೋಗ್ಯವಾದ ಒಕ್ಕಲುತನದ ಉದ್ಯೋಗವನ್ನು ಮಾಡಿ, ಬೆಳೆಗಳನ್ನು ಬೆಳೆಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಶಿಗ್ಗಾವ್ ಮತ್ತು ಸವಣೂರು ಮತಕ್ಷೇತ್ರಗಳಲ್ಲಿ ಅಂದರೆ ಶಿಗ್ಗಾವಿಯ ನಾಗನೂರು ಕೆರೆ ಮತ್ತು ಸವಣೂರಿನ ಮೋತಿಟೆನಲ್ ಕೆರೆ ಮತ್ತು ಹತ್ತಿಮತ್ತೂರು ಕೆರೆಗಳಂತಹವುಗಳು ಸುಮಾರು ನಾಲ್ಕನೂರು ಎಕರೆಯಿಂದ ಐದುನೂರು ಎಕರೆಗಳವರೆಗೆ ನೀರನ್ನು ಒದಗಿಸುತ್ತಿದ್ದು ಕೆರೆಗಳು ಇವತ್ತು ಸಂಪೂರ್ಣವಾಗಿ ನೀರು ಇಲ್ಲದೆ ಬರಗಾಲಕ್ಕೆ ಬಿದ್ದು ಬತ್ತಿಹೋಗಿರತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅದರ ಸುತ್ತಲೂ ಸಾವಿರಾರು ಎಕರೆ ತೋಟಪಟ್ಟಿಗಳ ಜಮೀನು ಕೂಡ ಇರುತ್ತದೆ. ನಮಗೆ ಸಮೀಪದಲ್ಲಿಯೇ ಸುಮಾರು ೧೭ ಕಿಲೋಮೀಟರ್ ಅಂತರದಲ್ಲಿ ವರದಾನದಿ ಹರಿಯುತ್ತಿರುವುದರಿಂದ ಆ ನದಿಯಿಂದ ಈ ಕೆರೆಗಳಿಗೆ ನೀರನ್ನು ಪಡೆದುಕೊಂಡು ಅಲ್ಲಿರತಕ್ಕಂಥ ರೈತಬಾಂಧವರಿಗೆ ಅನುಕೂಲ ಮಾಡಿಕೊಟ್ಟಿದ್ದೇ ಆದರೆ ಸುಮಾರು ೧೫-೨೦ ಸಾವಿರ ಎಕರೆಗಳಿಗೆ ನೀರಾವರಿಯಾಗುತ್ತದೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಅದೇ ರೀತಿಯಲ್ಲಿ ಇವತ್ತು ರಾಜ್ಯಾದ್ಯಂತ ಎಲ್ಲ ತಾಲ್ಲೂಕುಗಳಲ್ಲಿ ಇಂಥ ಸೌಲಭ್ಯಗಳನ್ನು ಒದಗಿಸಲು ಏತ ನೀರಾವರಿ ನಿಗಮಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ನೀರಾವರಿಯನ್ನು ಮಾಡಲಿಕ್ಕೆ ಅನುಕೂಲ ಮಾಡಿಕೊಟ್ಟಲ್ಲಿ ಈ ಸರ್ಕಾರದವರು ಮಾಡಿದಂಥ ಈ ಮಹದುಪಕಾರಕ್ಕಿಂತ ಹೆಚ್ಚಿನದಿಲ್ಲವೆನ್ನುವುದು ನನ್ನ ಅನಿಸಿಕೆಯಾಗಿದೆ. ಅದೇ ರೀತಿಯಲ್ಲಿ ಹಿಂದಿನ ಜನತಾ ಸರ್ಕಾರದವರು ತಮ್ಮ ಆಡಳಿತದ ಕೊನೆಯ ಹಂತದ ಅವಧಿಯಲ್ಲಿ ಏತ ನೀರಾವರಿ ನಿಗಮಗಳನ್ನು ಮಾಡಿದರು. ಆ ಏತ ನೀರಾವರಿ ನಿಗಮಗಳಿಗೆ ರೈತರೂ ಕೂಡ ಇಂತಿಷ್ಟು ಹಣವನ್ನು ಕಟ್ಟಬೇಕಾಗುತ್ತದೆನ್ನತಕ್ಕಂಥ ನಿಯಮಾವಳಿಗಳನ್ನು ಅವರು ಮಾಡಿದ್ದರಿಂದ ಈ ಬಡ ರೈತರು ಅಂತಹ ಹಣವನ್ನು ಕಟ್ಟದೆ ಇವತ್ತು ಏತ ನೀರಾವರಿ ನಿಗಮಗಳು ಯಾವುದೇ ರೀತಿಯಿಂದ ಕೆಲಸಗಳನ್ನು ಮಾಡಿಲ್ಲ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಏತ ನೀರಾವರಿ ನಿಗಮಗಳ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ಸಂಪೂರ್ಣವಾಗಿ ಸರ್ಕಾರದವರೇ ಹಣಕಾಸಿನ ಹೊರೆಯನ್ನು ಹೊತ್ತುಕೊಂಡು ಏತ ನೀರಾವರಿ ನಿಗಮಗಳನ್ನು ಸುಧಾರಿಸಿ ನಮಗೆ ಲಿಫ್ಟ್ ಇರಿಗೇಷನ್ ಮಾಡತಕ್ಕಂಥ ಅವಕಾಶವನ್ನು ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಜಿಲ್ಲೆಗೆ ಹತ್ತಿರದಲ್ಲಿಯೇ ತುಂಗಾ ನದಿ ಕೂಡ ಹರಿಯುತ್ತಿರುವುದರಿಂದ ಈ ತುಂಗಾ ಮೇಲ್ದಂಡೆ ಯೋಜನೆಯನ್ನೂ ಕೂಡ ಕಾರ್ಯಗತಗೊಳಿಸತಕ್ಕಂಥಾದ್ದು ಅತಿ ಮಹತ್ವದ್ದಾಗಿದೆ. ಇವತ್ತು ಬಚಾವತ್ ಆಯೋಗದ ವರದಿಯಲ್ಲಿ ತಿಳಿಸಿರುವಂತೆ, ಎರಡು ಸಾವಿರ ಇಸವಿಯೊಳಗಾಗಿ ನಾವು ಆ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಕೃಷ್ಣಾ ಜಲಾನಯನದಿಂದ ಸುಮಾರು ೭೨.೬ ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುತ್ತದೆ. ಬಚಾವತ್ ಆಯೋಗ್ಯದ ವರದಿಯಲ್ಲಿಯೂ ಕೂಡ ಈ ರೀತಿಯಾದ ಒಂದು ಶಿಫಾರಸ್ಸನ್ನು ಮಾಡಿದ್ದಾರೆ. ಆ ಒಂದು ಶಿಫಾರಸ್ಸಿನ ಮೇರೆಗೆ ನಾವು ಈ ನೀರನ್ನು ಎರಡು ಸಾವಿರದ ಇಸವಿಯೊಳಗಾಗಿ ಉಪಯೋಗ ಮಾಡಿಕೊಳ್ಳದಿದ್ದರೆ ನಾವು ಬಹಳ ಕಷ್ಟಕ್ಕೆ ಗುರಿಯಾಗತಕ್ಕಂಥ ಪ್ರಸಂಗಗಳು ಬರಬಹುದು. ಮತ್ತೆ ಈವರೆಗೂ ಕೂಡ ಆ ನೀರನ್ನು ಉಪಯೋಗ ಮಾಡಿಕೊಂಡಿಲ್ಲವೆಂದರೆ ನಮಗೆ ಬಹಳ ವಿಷಾದವೆನಿಸುತ್ತದೆ. ಆದ್ದರಿಂದ ಇನ್ನು ಕೇವಲ ೧೦ ವರ್ಷಗಳು ಉಳಿದಿರುವಾಗ ಈ ತುಂಗಾ ಮೇಲ್ದಂಡೆ ಯೋಜನೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಅಲ್ಲಿ ಅಣೆಕಟ್ಟೆಗಳನ್ನು ಕಟ್ಟಿ ಇವತ್ತು ನೀರಾವರಿಯನ್ನು ಮಾಡಿಕೊಳ್ಳುವುದು ಬಹಳ ಯೋಗ್ಯವೆಂದು ನಾನು ಹೇಳಬಯಸುತ್ತೇನೆ. ಈಗಾಗಲೇ ಅಪ್ಪರ್ ತುಂಗಾ ಪ್ರಾಜೆಕ್ಟನ್ನು ನಿರ್ಮಾಣ ಮಾಡುವಾಗ ಈ ಅಧಿವೇಶನದಲ್ಲಿ ಮತ್ತು ಕಳೆದ ಅಧಿವೇಶನದಲ್ಲಿ ಕೂಡ ಅನೇಕ ಮಾನ್ಯ ಸದಸ್ಯರೂ ಇದರ ಬಗ್ಗೆ ಪ್ರಶ್ನೆಗಳನ್ನೂ ಕೂಡ ಕೇಳಿದರು. ಅಪ್ಪರ್ ತುಂಗಾ ಪ್ರಾಜೆಕ್ಟನ್ನು ಮಾಡುವಾಗ ಮಾಲತಿ ರಿಸರ್ವಾಯರ್ ಕನ್‌ಸ್ಟ್ರಕ್ಷನ್ ಮಾಡುವುದನ್ನು ಬಿಟ್ಟು, ಅದಕ್ಕೆ ಒಂದು ಅಣೆಕಟ್ಟನ್ನು ಮಾಡಬೇಕು ಎಂದು ಕೂಡ ಹೇಳಿದ್ದಾರೆ. ಈ ಯೋಜನೆಗೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳ ಎಸ್ಟಿಮೇಟನ್ನು ತಯಾರು ಮಾಡಿರುವ ಬಗ್ಗೆಯೂ ಕೂಡ ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ ಎರಡೂವರೆ ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆ. ಆದ್ದರಿಂದ ಮಾಲತಿ ಜಲಾನಯನ ರಿಸರ್ವಾಯರ್‌ನ್ನು ಅಲ್ಲಿ ಕಟ್ಟಬಾರದೆನ್ನುವ ಅಭಿಪ್ರಾಯಕ್ಕೆ ಬರುವುದಾದರೆ ಇವತ್ತು ಧಾರವಾಡ ಜಿಲ್ಲೆಯ ದಕ್ಷಿಣ ಭಾಗದ ಸುಮಾರು ೫-೬ ತಾಲ್ಲೂಕುಗಳಿಗೆ ಮತ್ತು ಅಲ್ಲಿರುವ ರೈತಬಾಂಧವರಿಗೆ ಅನ್ಯಾಯವಾಗುತ್ತದೆ ಎನ್ನುವುದನ್ನು ಕೂಡ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಇವತ್ತು ಈ ಮಾಲತಿ ರಿಸರ್ವಾಯರ್‌ನ್ನು ಮಾಡುವುದರಿಂದ ಜಮೀನು ಮುಳುಗಡೆಯಾಗುವ ರೈತ ಬಾಂಧವರು ವಿರೋಧ ಮಾಡುತ್ತಿದ್ದಾರೆಂದು ನಿನ್ನೆ ದಿವಸ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ

ಕೊಟ್ಟಾಗ ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ ಜಮೀನುಗಳು ಮುಳುಗಡೆಯಾಗುತ್ತವೆಂದು ಇಂತಹ ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡದೆ ಹೋದರೆ ನೀರಿನ ಸೌಕರ್ಯ ಇಲ್ಲದಂತಹ ರೈತರಿಗೆ ಮೋಸ ಮಾಡಿದಂತಾಗುತ್ತದೆ. ಆದುದರಿಂದ ಆ ಮಾಲತಿ ರಿಸರ್ವಾಯರ್ ಕಟ್ಟುವುದರಿಂದ ಎಷ್ಟೇ ಜಮೀನುಗಳು ಮುಳುಗಡೆಯಾಗಲಿ ಅದು ಮುಖ್ಯವಲ್ಲ. ಅದರಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿ ಆಗುತ್ತದೆ, ರಾಜ್ಯದ ಎಷ್ಟು ಜನರಿಗೆ ನೀರಿನ ಸೌಲಭ್ಯ ಕಲ್ಪಿಸಿಕೊಡಲು ಅನುಕೂಲವಾಗುತ್ತದೆ. ಅದರಿಂದ ಎಷ್ಟು ಲಾಭಾಂಶ ಪಡೆಯಲು ಸಾಧ್ಯವಾಗುತ್ತದೆ ಎಂಬುದನ್ನು ವಿಚಾರ ಮಾಡುವುದು ಬಹಳ ಮುಖ್ಯ. ಆದುದರಿಂದ ಮಾಲತಿ ರಿಸರ್ವಾಯರ್‌ನ್ನು ಕನ್‌ಸ್ಟ್ರಕ್ಷನ್ ಮಾಡಿಯೇ ತುಂಗಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತ ಮಾಡಿದ್ದಾದರೆ ರೈತರಿಗೆ ಸಾಕಷ್ಟು ಅನುಕೂಲ ದೊರೆಯುತ್ತದೆಂದು ಹೇಳಬಯಸುತ್ತೇನೆ. ಈ ನೀರಾವರಿ ಸಲುವಾಗಿ ನಾವು ಕೇಂದ್ರ ಸರ್ಕಾರದಿಂದ ನೀರಾವರಿ ಬಾಂಡುಗಳನ್ನು ಪಡೆದಾದರೂ ಈ ಯೋಜನೆಗಳನ್ನು ಕಾರ್ಯಗತ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಇವತ್ತು ತಾಲ್ಲೂಕು ಮಟ್ಟದಲ್ಲಿ ಮೈನರ್ ಇರಿಗೇಷನ್, ರೆಗ್ಯುಲರ್ ಪಿ.ಡಬ್ಲ್ಯು.ಡಿ. ಮತ್ತು ಜಿಲ್ಲಾ ಪರಿಷತ್ತು ಹೀಗೆ ವಿವಿಧ ಖಾತೆಗಳನ್ನು ಪ್ರತ್ಯೇಕವಾಗಿ ಮಾಡಿದ್ದರಿಂದ ಹೆಚ್ಚಿನ ಅಧಿಕಾರಿಗಳನ್ನು ನಿರ್ಮಾಣ ಮಾಡಿದಂತಾಗಿದೆ. ಅದರ ಜೊತೆಗೆ ಕೆಲಸಗಳು ಸರಿಯಾಗಿ ಆಗದಂತಹ ಅವ್ಯವಸ್ಥೆಯನ್ನು ಕೂಡ ನೋಡುತ್ತಿದ್ದೇವೆ. ಏಕೆಂದರೆ, ಇವತ್ತು ಈ ಮೈನರ್ ಇರಿಗೇಷನ್ ಉಪ ವಿಭಾಗವನ್ನು ಎರಡೆರಡು ತಾಲ್ಲೂಕುಗಳಿಗೆ ಒಂದೊಂದು ನಿರ್ಮಾಣ ಮಾಡಿದ್ದಾರೆ. ಅದರ ಜೊತೆಗೆ ರೆಗ್ಯುಲರ್ ಪಿ.ಡಬ್ಲ್ಯು.ಡಿ.ಯಲ್ಲಿ ಎರಡೆರಡು ತಾಲ್ಲೂಕುಗಳಿಗೆ ಒಬ್ಬೊಬ್ಬ ಅಧಿಕಾರಿಯನ್ನು ಹಾಕಿದ್ದಾರೆ. ಇನ್ನು ಜಿಲ್ಲಾ ಪರಿಷತ್ತಿನಲ್ಲಂತೂ ಒಬ್ಬೊಬ್ಬ ಅಧಿಕಾರಿ ಒಂದೊಂದು ತಾಲ್ಲೂಕಿಗೆ ಇರುತ್ತಾನೆ. ಇಂತಹ ಸಂದರ್ಭದಲ್ಲಿ ಎರಡೆರಡು ತಾಲ್ಲೂಕುಗಳಿಗೆ ಇರತಕ್ಕ ಅಧಿಕಾರಿಗಳು ಹೆಡ್‌ಕ್ವಾರ್ಟರ್ ಇರತಕ್ಕ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಾರೆಯೇ ಹೊರತು ಉಪ ತಾಲ್ಲೂಕಿನಲ್ಲಿ ಮತ್ತು ಅವರಿಗೆ ಸಂಬಂಧಿಸಿದ ಕಡೆಗಳಲ್ಲಿ ಕೆಲಸ ಮಾಡುವುದು ನಮಗೆ ಕಾಣುತ್ತಿಲ್ಲ. ಈ ರೀತಿ ಬೈಫರ್ಕೇಟ್ ಆಗಿರುವುದರಿಂದ ಅಧಿಕಾರಿಗಳಿಗೆ ಕೆಲಸ ಮಾಡಲಿಕ್ಕೆ ಬಹಳ ತೊಂದರೆಯಾಗಿದೆ ಎಂದು ಹೇಳುತ್ತೇನೆ. ಆದುದರಿಂದ ಈ ರೆಗ್ಯುಲರ್ ಪಿ.ಡಬ್ಲ್ಯು.ಡಿ., ಮೈನರ್ ಇರಿಗೇಷನ್ ಸಬ್ ಡಿವಿಜನ್ಸ್ ಮತ್ತು ಜಿಲ್ಲಾ ಪರಿಷತ್ತು ಇವೆಲ್ಲವನ್ನು ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಮಾಡಿ ಅಥವಾ ಒಬ್ಬ ಅಧಿಕಾರಿಗೆ ಎಲ್ಲಾ ಇಲಾಖೆಗಳನ್ನು ವಹಿಸಿ ಅಲ್ಲಿ ಕೆಲಸಗಳನ್ನು ಪೂರೈಸಿದರೆ ಉತ್ತಮವಾಗುತ್ತದೆಂದು ಹೇಳುತ್ತೇನೆ. ಕೆರೆಗಳಿಂದ ಅಥವಾ ನದಿಗಳಿಂದ ನೀರು ತೆಗೆದುಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಸಾಮೂಹಿಕ ಬೋರ್ ವೆಲ್‌ಗಳನ್ನು ಅಂದರೆ ತೋಡು ಬಾವಿಗಳನ್ನು ತೆಗೆದು ನೀರಾವರಿ ಅನುಕೂಲತೆ ಮಾಡಿ ಕೊಟ್ಟರೆ ಒಳ್ಳೆಯದಾಗುತ್ತದೆಂದು ಸಲಹೆ ಮಾಡುತ್ತೇನೆ. ಇವತ್ತು ನಮ್ಮ ಮತ ಕ್ಷೇತ್ರದಲ್ಲಿ ಸವಣೂರು-ಸೆರೆವಾಡ ರಸ್ತೆ ಸುಮಾರು ೩೦ ಕಿಲೋಮೀಟರ್ ಉದ್ದ ಇದ್ದು ಅದರ ಅಭಿವೃದ್ಧಿಯಾಗುವುದು ಅತಿ ಅವಶ್ಯವಿದೆ. ಈಗಾಗಲೆ ಧಾರವಾಡ ಜಿಲ್ಲಾ ಪರಿಷತ್ತಿನವರು ಇದರ ಬಗ್ಗೆ ಒಂದು ಠರಾವು ಪಾಸ್ ಮಾಡಿ ಸರ್ಕಾರದವರು ಈ ಕೆಲಸವನ್ನು ವಹಿಸಿಕೊಂಡು ಮಾಡಲು ಅಡ್ಡಿ ಇಲ್ಲವೆಂದು ಮಾಡಿದ್ದಾರೆ. ಆದ್ದರಿಂದ ಅಂಥ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡು ೫-೬ ತಾಲ್ಲೂಕುಗಳಿಗೆ ಆ ರಸ್ತೆ ಕೂಡುತ್ತಿರುವುದರಿಂದ ಅಲ್ಲಿರತಕ್ಕ ಜನರಿಗೆ ಮತ್ತು ಲಾರಿಗೆಗೆ ಅನುಕೂಲವಾಗುವ ದೃಷ್ಟಿಯಿಂದ ಅನುಕೂಲತೆ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಇವತ್ತು ಜಿಲ್ಲಾ ಪರಿಷತ್ತಿನ ಆಡಳಿತ ಇರುವುದರಿಂದ ನಮ್ಮ ನಮ್ಮ ಮತ ಕ್ಷೇತ್ರಗಳಲ್ಲಿ ಕೆಲವೊಂದು ಬ್ರಿಡ್ಜ್‌ಗಳನ್ನಾಗಲಿ ಅಥವಾ ರಸ್ತೆಗಳನ್ನಾಗಲಿ ಸೇರಿಸಬೇಕೆಂದರೆ ನಮಗೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಜಿಲ್ಲಾ ಪರಿಷತ್ತಿನವರು ಏನಾದರೂ ಯೋಜನೆಗಳನ್ನು ರೂಪಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಾಗ ಸರ್ಕಾರದಲ್ಲಿ ಆ ಕೆಲಸಗಳಿಗೆ ಮಂಜೂರಾತಿ ಕೊಡತಕ್ಕ ಒಂದು ವ್ಯವಸ್ಥೆ ಇರುವುದರಿಂದ ಇವತ್ತು ನಾವು ನಮ್ಮ ಮತ ಕ್ಷೇತ್ರಗಳಲ್ಲಿ ಯಾವಾಗಲೂ ಮುಖ್ಯವಾದ ಕೆಲಸಗಳನ್ನು ಮಾಡಬೇಕೆಂದರೆ ನಮಗೆ ಬಹಳ ತೊಂದರೆಯಾಗಿದೆ. ಉದಾಹರಣೆಗಾಗಿ, ನಮ್ಮ ಮತ ಕ್ಷೇತ್ರದಲ್ಲಿ ಕುರುಬಗಮ್ಮಲ್ಲೂರ್ ಬ್ರಿಡ್ಜ್ ಕನ್‌ಸ್ಟ್ರಕ್ಷನ್ ಆಗಬೇಕಾಗಿದೆ. ಸುಮಾರು ಐದರಿಂದ ಆರು ಲಕ್ಷ ರೂಪಾಯಿಗಳ ಯೋಜನೆ ಅದು. ಇದರ ಬಗ್ಗೆ ನಾನು ಜಿಲ್ಲಾ ಪರಿಷತ್ತಿನಲ್ಲಿ ಯೋಜನಾಧಿಕಾರಿಗಳ ಜೊತೆ ಮಾತನಾಡಿದಾಗ ಮತ್ತು ಯೋಜನಾ ಸ್ಥಾಯಿ ಸಮಿತಿ ಜೊತೆ ಮಾತನಾಡಿದಾಗ, ಅವರು ಈಗಾಗಲೇ ಒಂದು ಪಟ್ಟಿ ಸಿದ್ಧ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೇವೆ, ಅದನ್ನು ಹಾಕಲಿಕ್ಕೆ ಬರುವುದಿಲ್ಲ ಎಂದು ಹೇಳಿದರು. ತದ ನಂತರ ಸಂಬಂಧಪಟ್ಟ ಸಚಿವರ ಜೊತೆ ಮಾತನಾಡಿ ಆ ಕೆಲಸವನ್ನು ಸೇರಿಸಬೇಕು ಎಂದಾಗ ಜಿಲ್ಲಾ ಪರಿಷತ್ತಿನಿಂದ ಮಂಜೂರಾದ ಕೆಲಸಗಳಿಗೆ ಮಾತ್ರ ಇಲ್ಲಿ ಅಪ್ರೂವಲ್ ಕೊಡುತ್ತೇವೆ, ತಾವು ಹೇಳಿದ ಕೆಲಸವನ್ನು ಸೇರಿಸಬೇಕಾದರೆ ನಿಯಮಾವಳಿಗಳನ್ನು ತಿದ್ದುಪಡಿ ಮಾಡ

ಬೇಕಾಗುತ್ತದೆ. ಈಗಿರತಕ್ಕ ನಿಯಮಾವಳಿಗಳ ಪ್ರಕಾರ ಎಷ್ಟೇ ಮಹತ್ವದ ಕೆಲಸ ಇದ್ದರೂ ಕೂಡ ನೀವು ಹೇಳಿದ ಕೆಲಸಗಳನ್ನು ಹಾಕುವುದಕ್ಕೆ ಬರುವುದಿಲ್ಲ, ಜಿಲ್ಲಾ ಪರಿಷತ್ತಿನಿಂದ ಬಂದ ಕೆಲಸವನ್ನು ಮಾತ್ರ ಕೈಗೆತ್ತಿಕೊಳ್ಳಲಿಕ್ಕೆ ಸಾಧ್ಯವಿದೆ ಮತ್ತು ಅದಕ್ಕೆ ಮಾತ್ರ ಆರ್ಥಿಕವಾಗಿ ಮಂಜೂರಾತಿ ಕೊಡುವುದಕ್ಕೆ ಸಾಧ್ಯವಿದೆ ಎಂಬ ಮಾತನ್ನು ಹೇಳಿದರು. ಆದ್ದರಿಂದ ಮಾನ್ಯ ಶಾಸಕರುಗಳಿಗೂ, ಆಯಾ ಕ್ಷೇತ್ರದಲ್ಲಿ ಅತೀ ಮಹತ್ವದ ಕೆಲಸಗಳಿರಲಿ ಅಂದರೆ ಯಾವುದೇ ರಸ್ತೆಗಳಿರಲಿ, ಬ್ರಿಡ್ಜ್ ಇರಲಿ, ಚಿಕ್ಕ ನೀರಾವರಿ ಕೆಲಸಗಳಿರಲಿ ಅವನ್ನು ಮಾಡಿಸಿಕೊಡುವುದಕ್ಕೆ ಅನುಕೂಲವಾಗುವಂತೆ ಈ ಒಂದು ಇಲಾಖೆಯಲ್ಲಿ ಶಾಸಕರಿಗೂ ಕೂಡ ಡೆವಲಪ್‌ಮೆಂಟ್ ಫಂಡ್ ಎಂದು ಒಂದಿಷ್ಟು ಹಣವನ್ನು ಮೀಸಲಾಗಿ ಇಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ಈಗಾಗಲೇ ತಿಳಿಸಿರುವಂತೆ ಚಿಕ್ಕ ನೀರಾವರಿಗಳಿಗೆ ಏತ ನೀರಾವರಿ ನಿಗಮಗಳಿಗೆ ಹಾಗೂ ತುಂಗಭದ್ರ ಮೇಲ್ದಂಡೆ ಯೋಜನೆಗೆ ಹೆಚ್ಚಿನ ಗಮನ ಕೊಟ್ಟು ಅದನ್ನು ತೀವ್ರವಾಗಿ ಕೈಗೆತ್ತಿಕೊಂಡು ಕೆಲಸ ಮಾಡಿಕೊಡ ಬೇಕೆಂದು ಹೇಳಿ, ಈ ಬೇಡಿಕೆಗೆ ನನ್ನ ಬೆಂಬಲವನ್ನು ಸೂಚಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).— ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾಮಗಾರಿ ಮತ್ತು ಬೃಹತ್ ನೀರಾವರಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ದಕ್ಷತೆ ಮತ್ತು ಪ್ರಾಮಾಣಿಕತೆ ಇರುತ್ತದೆ, ಅದರ ಮೇಲೆ ದೇಶದ ಜನರ ಹಿತರಕ್ಷಣೆ ಆಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡಿದರು. ಅದನ್ನು ನಾನು ಕೇಳಿದೆ. ಆದರೆ ಒಂದು ಮನಸ್ಸಿಗೆ ಏನು ನೋವಾಯಿತು ಎಂದರೆ, ಇರುವ ವಿಚಾರವನ್ನು ಇದ್ದ ಹಾಗೆ ಮಾತನಾಡದೆ ಇಲ್ಲದ್ದೆಲ್ಲಾ ಹೊಗಳಿ, ಹೊಗಳಿ ಇವತ್ತು ಕೆಟ್ಟಿರತಕ್ಕ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸುವುದಕ್ಕೆ ಕಾರಣವಾಗುತ್ತದಲ್ಲ ಎಂದು ಮನಸ್ಸಿಗೆ ನೋವಾಯಿತು. ಈ ಇಲಾಖೆಯಲ್ಲಿ ಏನಾಗಿದೆ ಎಂದರೆ, ದಕ್ಷತೆ ಮತ್ತು ಪ್ರಾಮಾಣಿಕತೆ ಇವೆರಡೂ ಮುಖ್ಯವಾಗಿ ಬೇಕಾದುದು. ಅದರಲ್ಲೂ ವಿಶೇಷವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಇದು ಬೇಕು. ಈ ಇಲಾಖೆಯಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಇರುವ ಇಂಜಿನಿಯರುಗಳಿಗೆ ಶಾಪವಾಗಿ ಪರಿಣಮಿಸಿದೆ. ಯಾರು ಭ್ರಷ್ಟರೋ, ಯಾರು ಅಯೋಗ್ಯರೋ ಯಾರು ರಾಜಕಾರಣಿಗಳಿಗೆ ದುಡ್ಡು ಕೊಟ್ಟುಕೊಂಡು ಅವರ ಹಿಂದೆ ಹಿಂದೆ ತಿರುಗುತ್ತಾರೋ ಅಂಥವರಿಗೆ ಪುರಸ್ಕಾರ, ಅಂಥವರಿಗೆ ಕೇಳಿದ ಜಾಗಕ್ಕೆ ಟ್ರಾನ್ಸ್‌ಫರ್, ಅಂಥವರಿಗೆ ಪ್ರೊಮೋಷನ, ಅಂಥವರಿಗೆ ಎಲ್ಲಾ ವಿಧವಾದ ವ್ಯವಸ್ಥೆ ಆಗಿ ಏನಾಗಿದೆಯೆಂದರೆ, ಇರತಕ್ಕ ಅಲ್ಪ ಸ್ವಲ್ಪ ಯೋಗ್ಯರೂ ನಾವು ಏತಕ್ಕೆ ನಿಷ್ಠುರವಾಗಿ, ಅನಾನುಕೂಲವಾಗಿ ಕಂಡ ಕಂಡ ಜಾಗಕ್ಕೆ ಹೋಗಬೇಕು, ನಾವೂ ಬೇರೆಯವರ ತರಹ ಏತಕ್ಕೆ ಅನುಸರಿಸಿ ಕೊಂಡು ಹೋಗಬಾರದು ಎನ್ನುವ ಮಟ್ಟಕ್ಕೆ ಬಂದು ದಕ್ಷತೆ ಮತ್ತು ಪ್ರಾಮಾಣಿಕತೆ ಸೊನ್ನೆಗೆ ಇಳಿಯು ತ್ತಿದೆ ಎಂದರೆ ತಪ್ಪಾಗಲಾರದು. ಈ ವರ್ಷ ನಡೆದಂಥ ಟ್ರಾನ್ಸ್‌ಫರ್‌ಗಳನ್ನು ನೋಡಿದರೆ ಎಂಥವರಿಗೂ ಕೂಡ ಹೇಸಿಗೆಯಾಗುತ್ತದೆ, ನಾಚಿಕೆಯಾಗುತ್ತದೆ ಮತ್ತು ಇದು ಸರ್ಕಾರದಲ್ಲಿ ನಡೆಯತಕ್ಕಂಥ ವ್ಯವಹಾರವೇ ಎಂದು ನನಗನ್ನಿಸುತ್ತಿದೆ. ಮಾನ್ಯ ಅಧ್ಯಕ್ಷರೇ, ಹತ್ತಾರು ವರ್ಷಗಳಿಂದ ಈ ಇಲಾಖೆಯಲ್ಲಿ ಜೀವ ತೇದು, ದೇಶದ ಜನರಿಗೋಸ್ಕರ ನಿಷ್ಠೆಯಿಂದ ಕೆಲಸ ಮಾಡಿದಂಥ ಅಧಿಕಾರಿಗಳು ಫುಟ್‌ಬಾಲ್‌ಗಳಾ? ರಿಟೈರ್ ಆಗುವುದಕ್ಕೆ ಎರಡು ತಿಂಗಳಿರುವವರು, ರಿಟೈರ್ ಆಗುವುದಕ್ಕೆ ೬ ತಿಂಗಳಿರುವವರು, ೮ ತಿಂಗಳಿರುವವರು ವರ್ಗ ಆಗಿದ್ದಾರೆ. ಆದರೆ ಯಾರು ಭ್ರಷ್ಟರು ದುಡ್ಡು ಮಾಡಿಕೊಂಡು ಯಾರು ಯಾರಿಗೋ ಕೊಟ್ಟುಕೊಂಡು ವ್ಯವಸ್ಥೆ ಮಾಡಿಕೊಂಡಿರುತ್ತಾರೋ ಅವರು ೧೫–೨೦ ವರ್ಷಗಳಾದರೂ ಇಲ್ಲೇ ಮುಂದುವರೆದಿದ್ದಾರೆ. ಹೀಗಾದರೆ ದೇಶದ ಕಲ್ಯಾಣವಾಗುತ್ತದಾ? ಇದರ ಬಗ್ಗೆ ಯೋಚನೆ ಮಾಡುವುದಿಲ್ಲವೇ? ರಾಜ್ಯದಲ್ಲಿ ಐದು ವರ್ಷಗಳಿಂದ ಬರಗಾಲ ಇದೆ. ಈ ವರ್ಷವೂ ಪುನಃ ಬರಗಾಲ ಬಂದಿದೆ. ಇಂಥ ಕಷ್ಟ ಕಾಲದಲ್ಲೂ ಬಡ ಜನರು ದೇಶ ಕಲ್ಯಾಣವಾಗಲಿ ಎಂದು ಅವರು ಊಟ ಮಾಡುತ್ತಾರೋ ಇಲ್ಲ ಉಪವಾಸ ಇರುತ್ತಾರೋ, ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೋ ಇಲ್ಲವೋ, ಅವರು ಚಿಂದಿ ಬಟ್ಟೆ ಹಾಕುತ್ತಾರೋ ಒಳ್ಳೆಯ ಬಟ್ಟೆ ಹಾಕುತ್ತಾರೋ ಅವರೆಲ್ಲ ಕೊಟ್ಟಂಥ ತೆರಿಗೆ ಹಣ ನ್ಯಾಯವಾಗಿ ಖರ್ಚಾಗಬೇಕೋ ಬೇಡವೋ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾದುದು ಅವಶ್ಯಕ. ಈ ಇಲಾಖೆಗೆ ಏನಾದರೂ ಗೌರವ ಬರಬೇಕಾದರೆ, ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳನ್ನು ಗುರುತಿಸಿ, ಅವರಿಗೆ ಯೋಗ್ಯ ಸ್ಥಾನ ಮಾನಗಳನ್ನು ಕೊಡಬೇಕು, ಅವರಿಗೆ ತಕ್ಕ ಎನ್‌ಕರೇಜ್‌ಮೆಂಟ್ ಕೊಟ್ಟರೆ ಆಗ ದೇಶದ ಕಲ್ಯಾಣವಾಗುತ್ತದೆಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ,

ಒಂದು ವಿಭಾಗವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಿ.ಡಿ.ಎ. ಮತ್ತು ಕಾರ್ಪೊರೇಷನ್‌ನಲ್ಲಿ ಇಂಜಿನಿಯರುಗಳಿದ್ದಾರೆ. ಅಲ್ಲಿಗೆ ವರ್ಗ ಆಗಿದ್ದಾರೆ. ಅವರು ಯಾರು? ಅವರು ಅಲ್ಲಿಗೆ ಹೇಗೆ ಬಂದರು? ಎಷ್ಟು ವರ್ಷಗಳ ಹಿಂದೆ ಬಂದರು? ಅವರ ಇತಿಹಾಸ ಏನು?

ಇದನ್ನು ತೆಗೆದು ನೋಡಿದರೆ ಈ ಇಲಾಖೆಯ ಮಾನ್ಯ ಸಚಿವರ ದಕ್ಷತೆ ಮತ್ತು ಪ್ರಾಮಾಣಿಕತೆ ಅಚ್ಚು ಒತ್ತಿದ ಹಾಗೆ ಅದರಲ್ಲಿ ಕಾಣುತ್ತದೆ. ಇವೆಲ್ಲ ಏನು ಹುಡುಗಾಟಗಳು? ಹಾಗಾದರೆ ಯಾರು ಹೇಳುವವರು ಕೇಳುವವರು ಇಲ್ಲವೇ ಇಲ್ಲವಾ? ನಮ್ಮ ಹಾಸನ ಜಿಲ್ಲೆಯಲ್ಲಿ ೬ ತಿಂಗಳು, ೮ ತಿಂಗಳು ಕೆಲಸ ಮಾಡಿದ ಅಧಿಕಾರಿಗಳನ್ನು ಹೇಳದೆ ಕೇಳದೆ ಯು.ಕೆ.ಪಿ. ಅಲ್ಲಿ ಇಲ್ಲಿಗೆಲ್ಲ ವರ್ಗ ಮಾಡಿದರೆ ಅವರಲ್ಲಿ ಏನು ಪ್ರಾಮಾಣಿಕತೆ ಬರುತ್ತದೆ? ಅವರಿಗೆ ಹೇಗೆ ಕೆಲಸ ಮಾಡಬೇಕೆಂಬ ಮನಸ್ಸು ಬರುತ್ತದೆ? ಹಾಗಾದರೆ ಆ ಇಂಜಿನಿಯರ್ಸ್ ಏನು ಇದ್ದಾರೆ, ಅವರು ಈ ದೇಶದ ಶತ್ರುಗಳೆ? ಅವರನ್ನು ವಿಚಾರಿಸಿಕೊಂಡು ಅವರ ಕಷ್ಟ-ಸುಖಗಳನ್ನು ವಿಚಾರಿಸಿಕೊಂಡು ಅವರಿಗೆ ಎಲ್ಲಿಗೆ ಬೇಕೋ ಅಲ್ಲಿಗೆ ಹಾಕಿದರೆ ಒಳ್ಳೆಯ ಕೆಲಸ ಕಾರ್ಯಗಳಾಗುತ್ತವೆ. ಅದರ ಬಗ್ಗೆ ಗಂಧವೇ ಇಲ್ಲ. ಯಾರು ದುಡ್ಡು ಹೊಡೆಯುತ್ತಾರೆ ಅವರು ಚೆನ್ನಾಗಿಯೇ ಇದ್ದಾರೆ, ಒಳ್ಳೊಳ್ಳೆಯ ಜಾಗಗಳಿಗೆ ಹೋಗಿದ್ದಾರೆ. ಅವರು ಇನ್ನೂ ಹೆಚ್ಚು ಹೆಚ್ಚು ಒಳ್ಳೊಳ್ಳೆಯ ಕಾರುಗಳನ್ನು ಇಟ್ಟುಕೊಂಡು ತಿರುಗಾಡುತ್ತಿದ್ದಾರೆ. ಇದೆಲ್ಲ ಏನು ಪರಿಸ್ಥಿತಿ? ಈ ಇಲಾಖೆಯಲ್ಲಿ ಇದು ಖಂಡಿತ ಎಂದೂ ಆಗಬಾರದು; ಏಕೆಂದರೆ, ೩೦೦-೪೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಈ ಇಲಾಖೆಯಲ್ಲಿ ಜನರ ಕಲ್ಯಾಣ ಆಗಬೇಕು. ಜನರ ಕಲ್ಯಾಣ ಆಗಬೇಕಾದರೆ ಯೋಗ್ಯತೆಯನ್ನು ಗುರುತಿಸಿಕೊಂಡು ದಕ್ಷತೆ ಮತ್ತು ಪ್ರಾಮಾಣಿಕತೆಗೆ ಪುರಸ್ಕಾರ ಕೊಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಯಾರು ಏನೇ ಹೇಳಲಿ, ಮೇಲೊಬ್ಬ ದೇವರು ಇಲ್ಲವಾ? ಅಂತರಾತ್ಮ ಇಲ್ಲವಾ ನಿಮಗೆ? ಅಂತರಾತ್ಮವನ್ನೂ ವಂಚಿಸಿಕೊಂಡು ದೇವರು ಇದ್ದಾರೆಂಬುದನ್ನೂ ಮರೆತು ಎಷ್ಟರ ಮಟ್ಟಿಗೆ ಪ್ರಿಟೆಂಡ್ ಮಾಡಿ ಜನರ ಕಣ್ಣಿಗೆ ಮಣ್ಣು ಎರಚುತ್ತಿದ್ದೇವೆ? ಮಾನ್ಯ ಉಪಾಧ್ಯಕ್ಷರೆ ನಾನು ಹೇಳುವುದಾದರೆ, ದೇವರು ಅಂತ ಇದ್ದರೆ ಏನು ಶಿಕ್ಷೆಯನ್ನು ಕೊಡ್ತಾನು ಎಂಬುದನ್ನು ಕಾದು ನೋಡಬೇಕಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದನ್ನೆಲ್ಲಾ ನೋಡಿದಾಗ ಸಂಕಟವಾಗುತ್ತದೆ. ಕೆಲಸ ಮಾಡಬೇಕು; ಮಾಡಬೇಕಾದರೂ ಪ್ರಾಮಾಣಿಕತೆಯಿಂದ ಕೆಲಸವನ್ನು ಮಾಡಬೇಕು.

ಶ್ರೀ ಗೋಪಿನಾಥ್ ಆರ್. ಸಾಂಧ್ರ.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಈಲ್ಡಾಗುವುದಾದರೆ...

ಶ್ರೀ ಕೆ. ಎಚ್. ಹನುಮೇಗೌಡ.—ಯಾರು ಏನು ಬೇಕಾದರೂ ಮಾತನಾಡಿಕೊಳ್ಳಲಿ ನಾನು ಈಲ್ಡಾಗುವುದಿಲ್ಲ. ನನ್ನ ಅಭಿಪ್ರಾಯವನ್ನು ನಾನು ಹೇಳಿಯೇ ತೀರುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಧ್ರ.—ತಾವು ಏನು ಜನರಲ್ ರಿಮಾರ್ಕ್ಸ್ ಮಾಡುತ್ತಿದ್ದೀರಿ. ಅದು ಎಲ್ಲರಿಗೂ ಅನ್ವಯಿಸುವುದಿಲ್ಲ. ನಿಮ್ಮ ಜಿಲ್ಲೆಗೆ ಅಥವಾ ನಿಮಗೇನಾದರೂ ತೊಂದರೆಯಾಗಿರಬಹುದು, ಅದನ್ನೇ ಜನರಲ್ ರಿಮಾರ್ಕ್ಸ್ ಮಾಡಿ ಈ ಖಾತೆಯ ಮಂತ್ರಿಗಳ ಬಗ್ಗೆ ನಿಮಗೆ ಏನು ಗೌರವ ಇದೆ, ಅದನ್ನು ದಯಮಾಡಿ ಕಳೆಯಬೇಡಿ.

ಶ್ರೀ ಕೆ. ಹೆಚ್. ಹನುಮೇಗೌಡ.—೧೦೦ಕ್ಕೆ ೧ ಪರ್ಸೆಂಟ್ ಇದ್ದರೂ ಅದು ಸತ್ಯ ತಾನೆ? ೧೦೦ಕ್ಕೆ ೧೦೦ ಪರ್ಸೆಂಟ್ ಸರಿಯಾಗಿದ್ದರೆ ಆಗ ಅದು ಪೂರ್ಣವಾಗುತ್ತದೆ...

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ಗೌರವಾನ್ವಿತ ಸದನವನ್ನು ವ್ಯಕ್ತಿಗತ ದೋಷಾರೋಪಣೆ ಮಾಡಲಿಕ್ಕೆ ಬಳಸಿಕೊಳ್ಳುವುದು ಬೇಡ. ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಹಿರಿಯ ಸದಸ್ಯರಿದ್ದೀರಿ. ಯಾವುದಾದರೂ ನಿರ್ದಿಷ್ಟವಾದ ಪ್ರಕರಣಗಳಿದ್ದರೆ ದಯಮಾಡಿ ೧-೨-೩ ಅಂತ ಹೇಳಿ. ಅದಕ್ಕೆ ಇಲ್ಲೇ ಈ ಸದನದಲ್ಲೇ ಮಾನ್ಯ ಸಚಿವರು ಉತ್ತರ ಕೊಡಲಿ. ಅದು ನಮಗೂ ಅನ್ವಯಿಸುವುದಿಲ್ಲ ಏಕೆಂದರೆ, ನಾನೂ ಒಬ್ಬ ಶಾಸಕ. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೇಳಿದ್ದನ್ನೆಲ್ಲಾ ೪-೫ ಆಗದಿದ್ದರೂ ಕೆಲವಕ್ಕೆ ನಿಜವಾಗಿಯೂ ಸಹಾಯ ಮಾಡಿದ್ದಾರೆ, ಬಹಳ ಖದೀಮರಿದ್ದವರನ್ನು ನಾವೇ ಹೇಳಿದ್ದೇವೆ. ಇಂತಿಂತಹವರು ಇದ್ದಾರೆ, ಅವರನ್ನು ಯು.ಕೆ.ಪಿ.ಗೆ ಹಾಕಿ ಅಂತ ಹೇಳಿದ್ದೇವೆ. ಹಾಗಿರುವಾಗ...

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಸದಸ್ಯರ ಉಪದೇಶ ನನಗೆ ಬೇಕಾಗಿಲ್ಲ. ನಿವೃತ್ತಿ ಆಗುವುದಕ್ಕೆ ೬ ತಿಂಗಳು, ೮ ತಿಂಗಳು ಇರುವುದನ್ನು ವರ್ಗ ಮಾಡಿರುವವರ ಏಕೆ? ಇದು ಒಂದು ಬಿ.ಡಿ.ಎ. ಮತ್ತು ಕಾರ್ಪೊರೇಷನ್‌ಗಳಲ್ಲಿ ೧೦-೧೫ ವರ್ಷಗಳಿಂದ ಇರುವವರನ್ನು ಅಲ್ಲೇ ಇಟ್ಟಿರುವುದು

ಏಕೆ ? ಇವೆಲ್ಲ ಇರತಕ್ಕಂಥ ವಿಚಾರಗಳು. ಇದನ್ನು ಹೇಳತಕ್ಕ ಹಕ್ಕು ನನಗೆ ಇದೆ. ಅದರ ಬಗ್ಗೆ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ —ನಾನು ಈಲ್ಡ್ ಆಗುವುದಿಲ್ಲ. ನಾನು ಮಾತನಾಡುತ್ತಿರಬೇಕಾದರೆ ಇವರು ಏಕೆ ಮಧ್ಯದಲ್ಲಿ ಇಂಟರ್‌ಫಿಯರ್ ಆಗುತ್ತಾರೆ. ಮಾನ್ಯ ಉಪಾಧ್ಯಕ್ಷರೆ, ಇವರನ್ನು ಕೂಡಿಸುತ್ತೀರೋ ಅಥವಾ ಇಲ್ಲವೋ.

ಉಪಾಧ್ಯಕ್ಷರು.—ಮಾನ್ಯ ಶಿವರಾಮೇಗೌಡರೇ ದಯಮಾಡಿ ಕುಳಿತುಕೊಳ್ಳಿ. ಅವರು ಈಲ್ಡ್ ಆಗಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರು ಏನು ಬೇಕಾದರು ಹೇಳಿಕೊಳ್ಳಲಿ. ಅದು ನನಗೆ ಬೇಕಾಗಿಲ್ಲ. ನನಗೆ ಏನು ತೋಚುತ್ತದೋ ಅದನ್ನು ನಾನು ಹೇಳುತ್ತೇನೆ. ಆ ರೀತಿ ಹೇಳುವ ಹಕ್ಕು ಹಾಗೂ ಅಧಿಕಾರ ನನಗೆ ಇದೆ. ನಾನು ಅವರಿಗೆ ಈಲ್ಡ್ ಆಗಿಲ್ಲ. ನನಗೆ ತೋಚಿದ್ದನ್ನು ನಾನು ಹೇಳಬೇಕು. ಆ ರೀತಿ ಹೇಳುವ ಹಕ್ಕು ನನಗೆ ಇದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ...

ಉಪಾಧ್ಯಕ್ಷರು.—ಅವರು ಈಲ್ಡ್ ಆಗಿಲ್ಲ. ನೀವು ನಿಂತು ಮಾತನಾಡುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ಗೌರವಾನ್ವಿತ ಸದನವನ್ನು ವೈಯಕ್ತಿಕ ದೋಷಾರೋಪಣೆ ಮಾಡುವುದಕ್ಕೆ ಬಳಸಿಕೊಳ್ಳುವುದು ಬೇಡ.

ಶ್ರೀ ಕೆ. ಎಚ್. ಹನುಮೇಗೌಡ.—ವೈಯಕ್ತಿಕ ದೋಷಾರೋಪಣೆ ಮಾಡಿಲ್ಲ. ಅವರು ಮಾಡಿರುವ ಕೆಲಸಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಮಂತ್ರಿಗಳ ಮೇಲೆ ಬಂದಿರುವ ದೂರುಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಅವರ ಬಗ್ಗೆ ಪೇಪರ್‌ನಲ್ಲಿ ಬಂದಿರುವ ದೂರುಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಜನರಲ್ಲಾಗಿ ನಾನು ಹೇಳುವುದು, ಈ ಇಲಾಖೆಯನ್ನು ಹೇಗೆ ಇಂಪ್ರೂವ್‌ಮೆಂಟ್ ಮಾಡಬೇಕು ? ಜನರಿಗೆ ಯಾವ ರೀತಿಯಲ್ಲಿ ಒಳ್ಳೆಯ ಕೆಲಸಗಳು ಆಗಬೇಕು ಎಂಬುದರ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಹಾಸನದ ಗದ್ದಲವನ್ನು ಈ ಸದನಕ್ಕೆ ತರುವುದು ಬೇಡ. ಹಾಸನದ ಗದ್ದಲ ಅಲ್ಲೇ ಮಾಡಿಕೊಳ್ಳೋಣ. ದಯಮಾಡಿ ನಿಮ್ಮ ಸಲಹೆಯನ್ನು ಹೇಳಿ. ನಿಮ್ಮ ಸಲಹೆಯನ್ನು ನಾವು ಕಿವಿಯಾರೆ ಕೇಳಬೇಕು. ತಮಗೆ ಬಹಳ ಅನುಭವವಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ನಿವೃತ್ತಿಯಾಗುವುದಕ್ಕೆ ಇನ್ನು ೬ ತಿಂಗಳು ಉಳಿದಿದೆ; ಅಂತಹವರನ್ನು ವರ್ಗ ಮಾಡುವುದು ಸುಳ್ಳಾ ? ೮ ತಿಂಗಳಲ್ಲಿ ನಿವೃತ್ತಿಯಾಗುವವರನ್ನು ವರ್ಗ ಮಾಡಿರುವುದು ಸುಳ್ಳಾ ? ಇದು ನ್ಯಾಯಬದ್ಧವಾಗಿ ಆಗಬೇಕಾದ ಕೆಲಸ. ನಾನು ವ್ಯಕ್ತಿಗತ ದ್ವೇಷದ ಬಗ್ಗೆ ಹೇಳುತ್ತಾ ಇಲ್ಲ. ದ್ವೇಷ ಮಾಡಬೇಕಾದ ಅವಶ್ಯಕತೆಯೂ ಇಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ಇದಕ್ಕೆ ನನಗೆ ರೇಗುವುದು. ಏಕೆ ಎಂದರೆ, ಅವರು ನನ್ನ ಹಾಗೆ ಗೌರವಾನ್ವಿತ ಸದಸ್ಯರಾಗಿದ್ದಾರೆ. ಆಗಿರತಕ್ಕ ಡಿಬೇಟನ್ನು ಸರಿಪಡಿಸಿಕೊಳ್ಳದೇ ಹೋದರೆ ನಾವು ಜನರ ಮುಂದೆ ಕತ್ತು ಎತ್ತಿ ಮರ್ಯಾದೆಯಿಂದ ತಿರುಗಾಡುವುದಕ್ಕೆ ಆಗುತ್ತದೆಯೇ ? ನಿಮ್ಮ ವಿಷಯ ಏನು ಬೇಕಾದರೂ ಮಾಡಿಕೊಳ್ಳಿ. ನನಗೆ ಏನು ಹೇಳುವುದು ? ನನಗೆ ತೋಚಿದ್ದು ನಾನು ಹೇಳುತ್ತೇನೆ,

ಶ್ರೀ ಎಲ್. ಆರ್. ಶಿವರಾಮೇಗೌಡ.—ನಿಮ್ಮ ಬಗ್ಗೆ ನಮಗೆ ಗೌರವ ಇದೆ. ಅದನ್ನೇ ತಾವು ಸಮಾಧಾನದಿಂದ ಹೇಳಿ. ಏಕೆ ಕೋಪ ?

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ.—ಇದು ಸಿಟ್ಟಿನ ಮಾತಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ಅವರು ಮಧ್ಯದಲ್ಲಿ ನನ್ನ ಟೈಮನ್ನು ಹಾಳು ಮಾಡುವುದು ಬೇಡ. ನಾನು ಯಾರ ಬಗ್ಗೆಯೂ

ದ್ವೇಷದಿಂದ ಹೇಳುತ್ತಾ ಇಲ್ಲ. ಹಾಗಾದರೆ ಇಲಾಖೆಯಲ್ಲಿ ಭ್ರಷ್ಟಾಚಾರ ಇಲ್ಲವೇ ? ದುರಾಡಳಿತ ಇಲ್ಲವೇ ? ಇದನ್ನೆಲ್ಲಾ ಸರಿಮಾಡಬೇಕೆಂದು ಶಾಸನ ಸಭೆಯಲ್ಲಿ ಹೇಳಬೇಕೇ ವಿನಃ ಇರುವುದೆಲ್ಲಾ ಚೆನ್ನಾಗಿದೆ ಎಂದರೆ ೫ ಕೋಟಿ ಒಯ್ದೋರು, ೧೦ ಕೋಟಿ ಒಯ್ದೋರು ನಾಳೆ ೧೦೦ ಕೋಟಿ ಒಯ್ತಾರೆ. ಇನ್ನೇನು ಹೇಳುವುದು ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಸರಿಪಡಿಸಬೇಕೆಂದು ಹೇಳಿ. ಅದು ಬಿಟ್ಟು...

ಉಪಾಧ್ಯಕ್ಷರು.—ದಯವಿಟ್ಟು ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ, ಹೆಚ್. ಹನುಮೇಗೌಡ.—ಯು.ಕೆ.ಪಿ.ಗೆ ಖದೀಮರು ಹೋಗೇ ಇಲ್ಲ. ಆ ಖದೀಮರೆಲ್ಲ ದುಡ್ಡು ಕೊಟ್ಟು ಬಿಡಿಎ ನಲ್ಲಿ, ಕಾರ್ಪೊರೇಷನ್‌ನಲ್ಲಿ ಸೇರಿಕೊಂಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು.—ಹನುಮೇಗೌಡರೇ, ತಾವು ಈ ಕಡೆ ತಿರುಗಿ ಚರ್ಚೆ ಮುಂದುವರಿಸಿ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ಈ ವಿಚಾರದಲ್ಲಿ ತೀರ್ಪು ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರು ಯಾಗು ನನಗೆ ಹೇಳುವುದಕ್ಕೆ ?

(ಗೊಂದಲ)

ಉಪಾಧ್ಯಕ್ಷರು.—ಈಗ ಮುಖ್ಯ ಸಚೇತಕರು ಏನೋ ಮಾತನಾಡುವವರಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಭೆಯಲ್ಲಿ ಸದಸ್ಯರು ಮಾತನಾಡುವುದಕ್ಕೆ ಸಂಪೂರ್ಣ ಅಧಿಕಾರ ಇದೆ. ಮಾನ್ಯ ಸದಸ್ಯರು ಮಾಡಿದ ಚರ್ಚೆಗೆ ಉತ್ತರ ಕೊಡುವುದಕ್ಕೆ ಸಂಬಂಧಪಟ್ಟ ಸಮರ್ಥ ಮಂತ್ರಿಗಳು ಇದ್ದಾರೆ. ಅವರ ಮನಸ್ಸಿನಲ್ಲಿ ಯಾವ ಭಾವನೆಗಳು ಇವೆ ಅವನ್ನು ವ್ಯಕ್ತ ಮಾಡುವ ಮಾರ್ಗದಲ್ಲಿ ಅವರಿದ್ದಾರೆ. ಅದಕ್ಕೆ ಮಂತ್ರಿಗಳು ಸಮರ್ಪಕವಾಗಿ ಉತ್ತರಕೊಡುತ್ತಾರೆ ಯಾದ್ದರಿಂದ ದಯಮಾಡಿ ಯಾರೂ ಅವರಿಗೆ ಇಂಟರ್‌ಫಿಯರ್ ಮಾಡಬಾರದೆಂದು ನಾನು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ವೈಯುಕ್ತಿಕವಾಗಿ ಮಾತನಾಡಬಾರದೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಂತಹದ್ದು ಏನಾದರೂ ಮಾಡಿದರೆ ಮಂತ್ರಿಗಳು ಆ ಬಗ್ಗೆ ಗಮನ ಹರಿಸುತ್ತಾರೆ.

(ಗೊಂದಲ)

ಉಪಾಧ್ಯಕ್ಷರು.—ಶಿವರಾಮೇಗೌಡರೇ ತಾವು ಕುಳಿತುಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಏನು ಬೇಕಾದರೂ ಹೇಳಬಹುದೆಂದು ಹೇಳಿದರೆ ಹೇಗೆ? ಅದಕ್ಕೂ ಒಂದು ಚೌಕಟ್ಟು ಇದೆ. ಎಲ್ಲವೂ ಚೌಕಟ್ಟಿನ ಒಳಗೆ ಇರಬೇಕೇ ಹೊರತು ಚೌಕಟ್ಟು ಬಿಟ್ಟು ಹೋಗುವುದಲ್ಲ.

ಉಪಾಧ್ಯಕ್ಷರು.—ತಾವೆಲ್ಲಾ ಹಿರಿಯ ಸದಸ್ಯರಿದ್ದೀರಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಚೌಕಟ್ಟು, ಗೆರೆ, ರೇಖೆ ಎಲ್ಲಾ ಇವರ ಹತ್ತಿರ ಕೇಳಿ ತಿಳಿದು ಕೊಂಡೇಮಾಡಬೇಕಲ್ಲವೇ ? ನಿಮ್ಮ ಚೌಕಟ್ಟು ನನಗೆ ಗೊತ್ತು ಸುಮ್ನಿರ್ರೀ. ಚೌಕಟ್ಟಿನ ಬಗ್ಗೆ ನನಗೆ ಏಕೆ ಹೇಳುವುದಕ್ಕೆ ಬರುತ್ತೀರಿ ? ನನಗೆ ಹೇಳುವುದಕ್ಕೆ ಅವರು ಯಾರು ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ನಿಮ್ಮ ಬಗ್ಗೆ ನನಗೆ ಗೌರವ ಇದೆ. ಈ ರೀತಿ ತಾವು ಮಾತನಾಡುವುದು ಅಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ .— ನಾನು ಮಾತನಾಡುವಾಗ ಪದೇ ಪದೇ ತಾವು ಏಕೆ ಮಾತನಾಡುತ್ತೀರಿ ?

(ಗೊಂದಲ)

ಶ್ರೀ ಜಿ. ಪುಟ್ಟಸ್ವಾಮಿಗೌಡ .— ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು, ನಾನು ಯು.ಕೆ.ಪಿ. ಗೆ ಕೆಲವು ಅಧಿಕಾರಿಗಳನ್ನು ವರ್ಗ ಮಾಡಿದ್ದೇನೆಂಬ ಒಂದು ಆಪಾದನೆಯನ್ನು ಮಾಡುತ್ತಿದ್ದಾರೆ. ಇವತ್ತು ಯು.ಕೆ.ಪಿ. ಗೆ ವರ್ಗ ಮಾಡಿದರೆ ಅದು ಅಧಿಕಾರಿಗಳಿಗೆ ಶಿಕ್ಷೆ ಎಂದು ನಾವು ಯಾರೂ ಪರಿಗಣಿಸಿಲ್ಲ. ಯು.ಕೆ.ಪಿ. ನಮ್ಮ ದೇಶದಿಂದ ಹೊರಗೆ ಇದೆ ಎನ್ನುವಂತಹ ಭಾವನೆ ಇಲ್ಲ.

ಒಬ್ಬ ಮಾನ್ಯ ಸದಸ್ಯರು .— ಬರೀ ಯು.ಕೆ.ಪಿ. ಬಗ್ಗೆ ಇಲ್ಲಿ ಪ್ರಸ್ತಾಪ ನಡೆಯುತ್ತಿದೆ. ಯು.ಕೆ.ಪಿ. ಪ್ರಾಜೆಕ್ಟೋ ಅಥವಾ ಕರ್ಮಕಾಂಡವೋ ಗೊತ್ತಾಗುತ್ತಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ .— ಯು.ಕೆ.ಪಿ. ನಮ್ಮ ರಾಜ್ಯದ ಪ್ರತಿಷ್ಠಿತ ನೀರಾವರಿ ಯೋಜನೆ. ಇದಕ್ಕೆ ಜಾಗತಿಕ ಬ್ಯಾಂಕಿನ ನೆರವು ಸಿಕ್ಕಿ ಈ ಕೆಲಸವನ್ನು ನಾವು 2000ನೇ ಇಸವಿಯ ಹೊತ್ತಿಗೆ ಮುಗಿಸಬೇಕೆಂದು ಒಂದು ಪ್ರಮುಖ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದಕ್ಕೆ ಜಾಗತಿಕ ಬ್ಯಾಂಕಿನವರು ಸುಮಾರು ೪೮೦ ಇಂಜಿನಿಯರ್‌ಗಳ ಕೊರತೆಯಿಂದೆ, ನಾವು ಕೊಟ್ಟಂತಹ ಟಾರ್ಗೆಟ್ ರೀಚ್ ಆಗುವುದಕ್ಕೆ ರಾಜ್ಯಸರ್ಕಾರವು ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ, ಅಲ್ಲಿ ಸಿಬ್ಬಂದಿಯನ್ನು ಹಾಕಿಲ್ಲ, ಇಂಜಿನಿಯರ್‌ಗಳನ್ನು ಹಾಕಿಲ್ಲವೆಂಬ ಒತ್ತಾಯವನ್ನು ಮೇಲಿಂದ ಮೇಲೆ ಹಾಕಿದ್ದಾರೆ. ಕಳೆದ ೮-೧೦ ವರ್ಷಗಳಿಂದ ಯು.ಕೆ.ಪಿ.ಗೆ ಸುಮಾರು ೪೮೦ ಇಂಜಿನಿಯರ್‌ಗಳ ಕೊರತೆ ಇದೆ. ಅಷ್ಟೆ ಅಲ್ಲ, ನಮ್ಮ ದಕ್ಷಿಣ ಭಾಗದ ಯೋಜನೆಗಳೆಲ್ಲ ಮುಗಿಯುತ್ತಾ ಬಂದಿವೆ. ಕಬಿನಿ, ಹಾರಂಗಿ ಹೇಮಾವತಿ, ಈ ಮೂರೂ ಅಣೆಕಟ್ಟುಗಳ ಕೆಲಸ ಮುಗಿದಿದ್ದು ಅಲ್ಲಿರತಕ್ಕ ಇಂಜಿನಿಯರ್‌ಗಳಿಗೆ ಸಾಕಷ್ಟು ಕೆಲಸವಿಲ್ಲ. ಮೇಂಟೆನೆನ್ಸ್ ಬಿಟ್ಟರೆ ಉಳಿದ ಕೆಲಸ ಯಾವುದೂ ಇಲ್ಲ. ಡಿಸ್ಟ್ರಿಬ್ಯೂಷನ್ ವರ್ಕ್ ಮಾತ್ರ ಉಳಿದಿದೆಯೇ ಹೊರತು ಪ್ರಾಜೆಕ್ಟ್ ಕೆಲಸಗಳು ಇಲ್ಲ. ಆದ್ದರಿಂದ ಅಲ್ಲಿರತಕ್ಕ ಇಂಜಿನಿಯರ್‌ಗಳು ಪರಿಣಿತರಿದ್ದಾರೆ. ಬಹಳ ಅನುಭವಸ್ಥರು ಇದ್ದಾರೆ, ಪ್ರಾಮಾಣಿಕರು ಇದ್ದಾರೆ. ಇವರುಗಳನ್ನೂ ಕೂಡ ಆ ಯು.ಕೆ.ಪಿ. ಪ್ರಾಜೆಕ್ಟ್‌ಗೆ ವರ್ಗಾವಣೆ ಮಾಡಿ ಅವರ ಮೇಧಾಶಕ್ತಿಯನ್ನು ಬಳಸಿಕೊಂಡು ಆ ಪ್ರಾಜೆಕ್ಟನ್ನು ನಿಗದಿತ ವೇಳೆಯಲ್ಲಿ ಪೂರ್ತಿಮಾಡಿ ಈ ರಾಜ್ಯಕ್ಕೆ ಅದನ್ನು ಉಪಯೋಗಿಸಿಕೊಳ್ಳತಕ್ಕಂಥ ಹಿನ್ನೆಲೆಯಲ್ಲಿ ಯಲ್ಲಿ ನಾವು ಈ ಕೆಲಸವನ್ನು ಮಾಡಿದ್ದೇವೆಯೇ ಹೊರತು ಇಂಜಿನಿಯರ್‌ಗಳಿಗೆ ಶಿಕ್ಷೆ ಕೊಡಬೇಕೆಂಬ ದೃಷ್ಟಿಯಿಂದ ನಾವು ಅವರನ್ನು ಅಲ್ಲಿಗೆ ಹಾಕಲಿಲ್ಲ ಅಥವಾ ರಿಟೈರ್ಡ್ ಆಗತಕ್ಕವರನ್ನು, ಪ್ರಮೋಷನ್ ಬರತಕ್ಕವರನ್ನು ಅಲ್ಲಿಗೆ ಬೇಕೆಂದು ವರ್ಗಾವಣೆಮಾಡಿಲ್ಲ. ಅದರಲ್ಲಿ ಯಾವುದೇ ರೀತಿಯ ಹಣದ ಭ್ರಷ್ಟಾಚಾರ ಕೂಡ ನಡೆದಿಲ್ಲ. ಈ ಒಂದು ತತ್ವದ ಆಧಾರದ ಮೇಲೆ ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದ್ದೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ .— ಮಾನ್ಯ ಉಪಾಧ್ಯಕ್ಷಿಣಿಯವರೆ ಯು.ಕೆ.ಪಿ. ಪ್ರಾಜೆಕ್ಟ್‌ಗೆ ಇಂಜಿನಿಯರ್‌ಗಳನ್ನು ಹಾಕಬಾರದೆಂದು ನಾನು ಹೇಳಲಿಲ್ಲ ಅಥವಾ ಯು.ಕೆ.ಪಿ. ಪ್ರಾಜೆಕ್ಟ್ ನಮ್ಮ ರಾಜ್ಯದಲ್ಲಿಲ್ಲವೆಂದು ನಾನು ಹೇಳಲಿಲ್ಲ. ಅದು ನಮ್ಮ ರಾಜ್ಯದಲ್ಲಿದೆ, ಅದು ಮುಗಿಯಬೇಕಾಗಿದೆ. ನಾನು ಹೇಳಿದ ಮಾತು ಏನೆಂದರೆ, ರಿಟೈರ್ ಆಗುವುದಕ್ಕೆ ೬ ತಿಂಗಳು ಇರುವವರನ್ನು, ೪ ತಿಂಗಳು ಇರುವವರನ್ನು ರೂಲ್ಸ್ ಮೀರಿ ಅಷ್ಟು ದೂರ ಹಾಕುವ ಅವಶ್ಯಕತೆ ಇರಲಿಲ್ಲ. ಎರಡನೆಯದು, ಇವರಿಗೆ ಬೇಕಾದ ಸಂಬಂಧಿಕರು ಎಷ್ಟು ಜನ ಯು.ಕೆ.ಪಿ.ಗೆ ಹೋಗಿದ್ದಾರೆಎನ್ನುವುದು ನನ್ನ ಪ್ರಶ್ನೆ. ಯಾರಾದ್ರೂ ಇವರಿಗೆ ಬೇಕಾದವರು ಇದ್ದರು ಅವರು ಬಿಡಿಎ ನಲ್ಲಿ, ಟ್ರಸ್ಟ್‌ಬೋರ್ಡ್‌ನಲ್ಲಿ ಇದ್ದಾರೆ. ಪಾಪದವರು ಅಲ್ಲಿಗೆ ಹೋಗಿದ್ದಾರೆ. ಇದನ್ನು ನಾನು ಹೇಳುತ್ತಿದ್ದೇನೆ. ಇವರು ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡಿದ್ದರೆ ನಾನು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೆ. ಆದರೆ ನಿಷ್ಠೆ, ಪ್ರಾಮಾಣಿಕತೆಗೆ ಅಭಾವವಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ .— ನನಗೆ ಯಾವ ಇಂಜಿನಿಯರ್‌ಗಳೂ ಸಂಬಂಧಿಕರು ಇಲ್ಲ. ಅದನ್ನೂ ಕೂಡ ಸ್ಪಷ್ಟಪಡಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ .— ಮಾನ್ಯ ಉಪಾಧ್ಯಕ್ಷಿಣಿಯವರೆ, ಇವರ ಅಣ್ಣನ ಅಳಿಯ ಹಾಸನದಲ್ಲಿ ನ್ಯಾಷನಲ್ ಹೈವೇನಲ್ಲಿ ಸುಮಾರು ೪ ವರ್ಷಗಳಿಂದ ಇದ್ದಾರೆ. ನನ್ನ ಸಂಬಂಧಿಕರೊಬ್ಬರು ಎಂಟು ತಿಂಗಳುಗಳಿಂದ ಇದ್ದರು. ಅವರನ್ನು ವರ್ಗಾವಣೆ ಮಾಡಿದ್ದಾರೆ. ಆದರೆ ಇವರು ಅಲ್ಲೇ ಇದ್ದಾರೆ. ನಾನು ಅದನ್ನು ಕೇಳಿದ್ದೇನೆ, ಅದಕ್ಕೆ ಅವರು ಉತ್ತರ ಹೇಳಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ .—ನನ್ನ ಸಂಬಂಧಿಕರು ಯಾರು ಇಲ್ಲ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ .—ವೈಯಕ್ತಿಕ ದ್ವೇಷ ವ್ಯಕ್ತಮಾಡತಕ್ಕದ್ದು ಇಲ್ಲಿ ಅಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ .—ವೈಯುಕ್ತಿಕ ದ್ವೇಷಕ್ಕೆ ನಾನು ಹೋಗಿಲ್ಲ. ಅದು ಬಂದಾಗ ನನ್ನ ಹತ್ತಿರ ಬಹಳಷ್ಟು ಇವೆ, ಆಗ ನಾನು ಹೇಳುತ್ತೇನೆ. ಇವರು ಏತಕ್ಕೆ ಮಧ್ಯೆ ಮಧ್ಯೆ ಮಾತನಾಡುತ್ತಾರೆ ?

ಶ್ರೀ ಎಲ್. ಆರ್. ಶಿವರಾಮೇಗೌಡ .—ನನ್ನದೊಂದು ಕ್ರಿಯಾಲೋಪವಿದೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ಇದು ಒಂದು ಪಕ್ಷದ ವೇದಿಕೆಯಲ್ಲ. ಅದು ಅಲ್ಲದೆ ಸದನದಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಸಲಹೆ-ಸೂಚನೆಗಳನ್ನು ಕೊಡಬಹುದು. ಏನಾದರೂ ತಪ್ಪಾಗಿದ್ದರೆ ಸ್ಪಷ್ಟವಾದ ನಿದರ್ಶನಗಳನ್ನು ಕೊಡಲಿ ವಿರೋಧಿಸಲಿ ಆದರೆ ವೈಯಕ್ತಿಕವಾಗಿರತಕ್ಕ ವಿಚಾರವನ್ನು, ದ್ವೇಷವನ್ನು ಚರ್ಚೆ ಮಾಡುವುದಕ್ಕೆ ಈ ಸದನ ವೇದಿಕೆಯಲ್ಲ. ಇದಕ್ಕೆ ಒಂದು ಗಂಟೆಗೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತದೆ. ಇಂತಹ ವೇದಿಕೆಯನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ತಾವು ಅಧ್ಯಕ್ಷರಾಗಿರತಕ್ಕವರು ಅವಕಾಶ ಕೊಡಬಾರದು. ತಾವು ಇದಕ್ಕೆ ಕಡಿವಾಣ ಹಾಕಬೇಕು.

ಶ್ರೀ ಹರ್ಷಕುಮಾರಗೌಡ .—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಬೇಡಿಕೆಗಳ ಪರವಾಗಿ ಮಾತನಾಡುತ್ತಿದ್ದಾರೋ ಅಥವಾ ವಿರೋಧವಾಗಿ ಮಾತನಾಡುತ್ತಿದ್ದಾರೋ ಎಂದು ನಮಗೆ ಗೊತ್ತಾಗಬೇಕು.

೧೨-೨೦ ಪಿ. ಎಂ.

ಶ್ರೀ ಕೆ. ಹೆಚ್. ಹನುಮೇಗೌಡ.—ಮೊನ್ನೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಹೇಳಿದರು. ಹೊಳೆನರಸೀಪುರಕ್ಕೆ ಹೋಗುತ್ತಾರೆ. ಹಾಸನಕ್ಕೆ ಹೋಗುತ್ತಾರೆ ಅಲ್ಲಿ ಬೇಕಾದಷ್ಟು ಆಗಿದೆ ಎಂಬ ಅರ್ಥ ಬರುವ ರೀತಿಯಲ್ಲಿ ಹೇಳಿದರು, ಹಾಸನದಲ್ಲಿ ಏನಾಗಿದೆ ಎಂದರೆ, ನಾನು ಕೆಲವು ಉದಾಹರಣೆಗಳನ್ನು ಹೇಳುತ್ತಿದ್ದೇನೆ, ಏನೇನು ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಯಗಚಿನದಿ ದಡದಲ್ಲಿ ಶಂಕರನಹಳ್ಳಿ ಎಂಬ ಒಂದು ಊರು ಇದೆ. ಅಲ್ಲಿ ೩೫೦ ಎಕರೆ ನೀರಾವರಿ ಮಾಡಬೇಕೆಂದು ಹೇಳಿ ಮೂರು ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಂಜೂರಾಗಿ ಅದು ೧೯೭೮ರಲ್ಲಿ ಬಜೆಟ್‌ನಲ್ಲಿ ಸೇರಿತ್ತು. ನಂತರ ಅದು ೧೯೮೦-೮೧ಕ್ಕೂ ಕಂಟಿನ್ಯೂ ಆಯಿತು. ಎಂಟು ವರ್ಷಗಳಾಯಿತು, ಇನ್ನೂ ಆಗಿಲ್ಲ. ಈ ಮಧ್ಯೆ ನಾನು ಎಂ.ಎಲ್.ಎ. ಆದಮೇಲೆ ಇದರ ಬಗ್ಗೆ ಏನಾಯಿತು ಎಂದು ಪ್ರಸ್ತಾಪ ಮಾಡಿದಾಗ, ೧೫ ಲಕ್ಷಕ್ಕೆ ಎಸ್ಟಿಮೇಟ್ ಆಗಿ, ಪುನಃ ಟೆಂಡರ್ ಕರೆದರು. ಅದಕ್ಕೆ ನಬಾರ್ಡ್‌ನಿಂದ ರಿಫೈನಾನ್ಸ್ ಕೂಡ ಆಯಿತು. ಇನ್ನೇನು ಕೆಲಸ ಶುರು ಮಾಡಬೇಕು ಎನ್ನುವುದರೊಳಗೆ ಅದನ್ನು ನಿಲ್ಲಿಸಿದರು ; ಏಕೆ ? ಹಾಗಾದರೆ ಹಾಸನ ತಾಲ್ಲೂಕು ಆ ಜಿಲ್ಲೆಯಲ್ಲಿ ಇಲ್ಲವೆ ? ಅದು ಕರ್ನಾಟಕಕ್ಕೆ ಸೇರಿದ್ದು ಅಲ್ಲವೇನು ? ಹಾಸನ ತಾಲ್ಲೂಕಿನ ಜನರು ಟ್ಯಾಕ್ಸ್ ಕೊಡುತ್ತಿವೇನು ? ಹತ್ತು ವರ್ಷಗಳಿಂದ ನಿಂತಿದ್ದಂಥ ಏತ ನೀರಾವರಿ ಕೆಲಸ ಈ ವರ್ಷ ಶುರುವಾಗಿ, ರಿಫೈನಾನ್ಸ್ ಕೂಡ ಆಗಿ ಟೆಂಡರ್ ಕರೆದರೂ ಕೂಡ ಇಮ್ಮಿಡಿಯೇಟಾಗಿ ಸ್ಟಾಪ್ ಮಾಡಿ ಎಂದು ಹೇಳುವುದಕ್ಕೆ ಕಾರಣ ಏನು ? ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅವರು ಅನ್ಯಾಯವಾಗಿದೆ, ಇದನ್ನು ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ, ಸಂಬಂಧಪಟ್ಟ ಇಂಜನಿಯರುಗಳೊಡನೆ ನಾನು ಮಾತನಾಡಿದ್ದೇನೆ. ಇದು ಒಂದು. ಎರಡನೇ ಉದಾಹರಣೆಯನ್ನು ಹೇಳುತ್ತೇನೆ. ಹೊಳೆನರಸೀಪುರ ತಾಲ್ಲೂಕಿನ ಕಾಮಸಮುದ್ರದಲ್ಲಿ ಏಳೆಂಟು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಲಿಫ್ಟ್ ಇರಿಗೇಷನ್ ಇರಿಗೇಷನ್ ಆಗುತ್ತಿದೆ. ಇದು ಹಾಸನ ತಾಲ್ಲೂಕು ಮತ್ತು ಹೊಳೆನರಸೀಪುರ ತಾಲ್ಲೂಕಿನ ಬಾರ್ಡರ್ ಭಾಗವಾಗಿದೆ. ಆ ಕಾಂಟೂರು ಹಾಸನ ತಾಲ್ಲೂಕಿಗೆ ಬಂದತಕ್ಷಣ ಅಲ್ಲಿ ನೀರನ್ನು ನಿಲ್ಲಿಸಿ, ಹೊಳೇನರಸೀಪುರಕ್ಕೆ ಪುನಃ ಲಿಫ್ಟ್ ಮಾಡಿ ಎಂದು ನಿರ್ಧಾರ ಮಾಡಿದ್ದಾರೆ. ಇದೇ ಲಿಫ್ಟನ್ನು ಕಂಟಿನ್ಯೂ ಮಾಡಿದ್ದರೆ ಹಾಸನ ತಾಲ್ಲೂಕಿನ ಆರೇಳು ಸಾವಿರ ಎಕರೆಗೆ ನೀರು ಸಿಗುತ್ತದೆ. ಇದನ್ನು ಏಕೆ ಮಾಡಲಿಲ್ಲ ಎನ್ನುವುದು ನನ್ನ ಪ್ರಶ್ನೆ. ಒಂದೇ ಲಿಫ್ಟ್ ಇರಿಗೇಷನ್‌ನಿಂದ ಹೊಳೇನರಸೀಪುರ ತಾಲ್ಲೂಕಿನಲ್ಲಿ ಎರಡು-ಮೂರು ಸಾವಿರ ಎಕರೆಗಳ ನೀರಾವರಿಯಾಗುತ್ತದೆ, ಹಾಸನ ತಾಲ್ಲೂಕಿನಲ್ಲಿ ನಾಲ್ಕು-ಐದು ಸಾವಿರ ಎಕರೆಗಳಿಗೆ ನೀರಾವರಿ ಆಗುತ್ತದೆ. ಅದೇ ಕಾಂಟೂರ್ ಕಂಟಿನ್ಯೂ ಇದೆ, ಆದರೆ ಅದು ಹಾಸನ ತಾಲ್ಲೂಕಿಗೆ ಬಂದತಕ್ಷಣ ಆ ನೀರನ್ನು ನಿಲ್ಲಿಸಿ ಪುನಃ ಇನ್ನೊಂದು ಲಿಫ್ಟ್ ಕೊಟ್ಟು ಹಿಂದಕ್ಕೆ ಕಳಿಸಿದ್ದಾರೆ. ಅದು

ಒಟ್ಟು ೫೯ ಕಿಲೋಮೀಟರ್ ರನ್ ಆಗುತ್ತದೆ. ಅಲ್ಲಿ ಮೂರು ಸಾವಿರ ಎಕರೆಗೆ ನೀರಾವರಿ ಮಾಡಿದ್ದಾರೆ. ನಾನು ಈ ಸದನದ ಮುಖಾಂತರ ಕೇಳುತ್ತೇನೆ, ನಿಮಗೆ ಈ ಅಧಿಕಾರವನ್ನು ಯಾರು ಕೊಟ್ಟರು ? ಹಾಸನ ಜನತೆಗೆ ದ್ರೋಹ ಮಾಡಿದ್ದೀರಲ್ಲ, ಇದನ್ನು ನಾನು ಹೇಳಕೂಡದೇನು ? ನನಗೆ ಹೊಟ್ಟೆ ಉರಿಯುವುದಿಲ್ಲವೇನು ? ಆ ಜನ ನನಗೆ ಓಟು ಕೊಟ್ಟಿಲ್ಲವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಸದಸ್ಯರು ದ್ರೋಹ ಮಾಡಿದ್ದಾರೆ, ಎನ್ನುವ ಮಾತನ್ನು ಹೇಳಿದ್ದಾರೆ. ಅವರ ಭಾವನೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ತಮಗೆ ದ್ರೋಹ ಮಾಡಬೇಕೆಂದು ನನ್ನ ಮನಸ್ಸಿನಲ್ಲಿ ಇಲ್ಲ, ನಾನು ದ್ರೋಹ ಮಾಡಿಲ್ಲ. ಅವರು ಕಲರ್‌ಗ್ಲಾಸ್ ಹಾಕಿಕೊಂಡು ನೋಡುತ್ತಿದ್ದಾರೆ ಎಂದು ಕಾಣುತ್ತದೆ. ನಾನು ಹಾಸನ, ಹೊಳೆನರಸೀಪುರ, ಚನ್ನರಾಯಪಟ್ಟಣ, ಅರಸೀಕೆರೆ ಅಂತ ಭಾವನೆ ಮಾಡಿಲ್ಲ. ನಾನು ಕರ್ನಾಟಕ ರಾಜ್ಯದ ಮಂತ್ರಿ ಎಂದು ತಿಳಿದುಕೊಂಡಿದ್ದೇನೆ. ಅದರಲ್ಲೂ ನಾನು ಹಾಸನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿದ್ದೇನೆ. ಎಲ್ಲ ಜಿಲ್ಲೆಗಳು ಒಂದೇ ಎನ್ನುವ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಈ ಕಾಮಸಮುದ್ರ ಏತ ನೀರಾವರಿ ಯೋಜನೆ ನನ್ನ ಕಾಲದಲ್ಲಿ ಪ್ರಾರಂಭವಾದದ್ದು ಅಲ್ಲ. ನನ್ನ ಕಾಲದಲ್ಲಿ ಆ ಯೋಜನೆ ತಯಾರಾದದ್ದೂ ಅಲ್ಲ. ನನ್ನ ಕಾಲದಲ್ಲಿ ಆ ಕೆಲಸ ಪ್ರಾರಂಭವಾದದ್ದೂ ಕೂಡ ಅಲ್ಲ. ನಾನು ಬಂದಮೇಲೆ ಅದನ್ನು ಪರಿಷ್ಕೃತ ಮಾಡುವುದಕ್ಕೆ ನಾನು ಯಾವುದೇ ವಿಧವಾದ ಆಜ್ಞೆಯನ್ನು ಮಾಡಿಲ್ಲ: ಅಥವಾ ಅದನ್ನು ಹೆಚ್ಚು ಮಾಡಿಲ್ಲ, ಕಡಿಮೆಯೂ ಮಾಡಿಲ್ಲ. ಒರಿಜಿನಲ್ ಪ್ಲಾನ್ ಏನಿದೆಯೋ ಅದರಂತೆ ಅವರು ಕೆಲಸ ಮಾಡುತ್ತಿದ್ದಾರೆ. ಈ ಮಧ್ಯೆ ಹಾಸನಕ್ಕೆ ನೀರು ಹೋಗುವುದಕ್ಕೆ ಅವಕಾಶ ಇದ್ದರೆ. ಅದನ್ನು ಕೂಡ ಅಳತೆ ಮಾಡುತ್ತಿದ್ದಾರೆ. ಆ ನೀರಿಗೆ ಆ ಈ ಭಾಗವನ್ನು ಕೂಡ ಅಳವಡಿಸುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ, ಇರತಕ್ಕಂಥ ನೀರನ್ನು ಪ್ರತಿಯೊಂದು ಹನಿಯನ್ನೂ ಉಪಯೋಗಿಸಕೊಳ್ಳಬೇಕೆನ್ನುವುದೇ ನಮ್ಮ ಸರ್ಕಾರದ ಗುರಿ, ಇದು ನನ್ನ ಗುರಿಯೂ ಹೌದು. ಬಹುಶಃ ಹಾಸನದ ಕೆಲಸವಾದರೂ ಅದು ನನಗೆ ಕ್ರೆಡಿಟ್ ಬರತಕ್ಕದು, ಹೊಳೆನರಸೀಪುರದ ಕೆಲಸ ಆದರೂ ನನಗೇ ಕ್ರೆಡಿಟ್ ಬರುತ್ತದೆ. ಈ ವಿಶಾಲ ದೃಷ್ಟಿಯನ್ನು ನಾನು ಇಟ್ಟುಕೊಂಡಿದ್ದೇನೆಯೇ ಹೊರತು ಕೇವಲ ಹಾಸನದ ಜನತೆಗೆ ದ್ರೋಹ ಮಾಡಬೇಕು ಎನತಕ್ಕ ಭಾವನೆ ನನ್ನಲ್ಲಿ ಇಲ್ಲ. ಈ ಮಾತನ್ನು ಹೇಳಿ ಆದರೇನಾದರೂ ರಾಜಕೀಯ ಲಾಭ ಪಡೆಯಬೇಕು ಎನ್ನುವುದಾದರೆ ಬಹುಶಃ ಅದಕ್ಕಿಂತ ಅವಿವೇಕದ ಪರಮಾವಧಿ ಮತ್ತೊಂದಿಲ್ಲ ಎಂದು ನಾನು ನಿರ್ದಾಕ್ಷಣ್ಯವಾಗಿ ಹೇಳಬಯಸುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಮೇಲೆ ನ್ಯಾಯದ ತಕ್ಕಡಿ ಇದೆ ನೋಡಿ. ಆದರ ಮೇಲೆ ಪ್ರಮಾಣ ಮಾಡಿ ಅವರು ಹೇಳಲಿ ಇದನ್ನು ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಈ ರೀತಿ ಅನ್ಯಾಯವಾಗಿದೆ ಎಂದು ಅವರ ಗಮನಕ್ಕೆ ತಂದಾಗ ಅವರು ಕೂಡಲೆ ಸಂಬಂಧಪಟ್ಟ ಸೆಕ್ರೆಟರಿಯವರನ್ನು ಕರೆದು ನೋಡಿ ವೆರಿಫೈಮಾಡಿಸಿ ಎಂದು ಹೇಳಿದರು. ಅವರು ಸರ್ವೆ ಮಾಡುತ್ತಿದ್ದಾರೆ: ಒಬ್ಬರು ಇಂಜಿನಿಯರ್ ಸರ್ವೆ ಮಾಡಿದ್ದರಲ್ಲ, ಅವರನ್ನು ಯಾರೂ ಹೇಳಲಾಗದ, ಕೇಳಲಾಗದ ಜಾಗಕ್ಕೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಅಲ್ಲಿಗೆ ಒಂದು ೮ ತಿಂಗಳಾಗಿದೆ, ಅವರನ್ನು ಏಕೆ ವರ್ಗಾವಣೆ ಮಾಡಬೇಕಿತ್ತು ? ೨-೩ ವರ್ಷಕ್ಕಿಂತ ಕಡಿಮೆ ವರ್ಗಾವಣೆ ಮಾಡಬಾರದು ಎಂದು ಸರ್ಕಾರದ ಕಾನೂನು ಇದೆ. ಆ ಇಂಜಿನಿಯರನ್ನು ವರ್ಗಾವಣೆ ಮಾಡಿದ್ದು ಏಕೆ ? ಅವರ ಮೇಲೆ ಏನಾದರೂ ಆಲಿಗೇಷನ್ ಇತ್ತೆ. One of the honest and sincere Executive Engineer I have seen..... ಇವರ ವರ್ಗಾವಣೆಯಾಯಿತು. ಅಸಿಸ್ಟೇಟ್ ಇಂಜನಿಯರ್ ವರ್ಗಾವಣೆ ಆಯಿತು. ಆ ಮೇಲೆ ಟೆಕ್ನಿಕಲ್ ಅಸಿಸ್ಟೆಂಟ್ ಇಂಜನಿಯರ್ ಕೂಡ ಒಬ್ಬ ಪ್ರಾಮಾಣಿಕ ಅಧಿಕಾರಿ ಇವರುಗಳ ಏಕೆ ಆಯಿತು, ಎನ್ನುವುದು ನನ್ನ ಪ್ರಶ್ನೆ. ನಾನು ಮೊದಲೇ ದೇವರನ್ನು ನಂಬಬೇಕು, ಅಂತರಾತ್ಮ ನಂಬಬೇಕು ಎಂದು ಹೇಳಿದ್ದು ಈ ಕಾರಣಕ್ಕೋಸ್ಕರವೇ. ಹೇಳುವುದು ಒಂದು ಪ್ರಿಟೆಂಟ್ ಮಾಡುವುದು ಒಂದು ಇದೆಯೆಲ್ಲ ಇದು ಬಹಳ ದಿನ ನಡೆಯುವುದಿಲ್ಲ. ಇದರ ಲಾಭ ನಾನು ಪಡೆಯಬೇಕಾಗಿಲ್ಲ. ಅವರು ಅವಿವೇಕ ಎಂಬ ಪದ ಬಳಸಿದ್ದಾರಲ್ಲ, ಅದು ನನಗೆ ಅಪ್ಲೈ ಆಗುವುದಿಲ್ಲ ನಾನು ನ್ಯಾಯವಾಗಿ ಬಾಳಿ ಬದುಕಿದವನು. ಇಂತಹ ಕ್ಷುಲ್ಲಕ ವಿಚಾರಕ್ಕೆ, ಇಂತಹ ಅಯೋಗ್ಯತನಕ್ಕೆ ನಾನಂತೂ ಹೋಗುವವನಲ್ಲ ಮತ್ತು ಹೋಗುವುದೂ ಇಲ್ಲ. ಆದ್ದರಿಂದ ಯಾರಿಂದಲೂ ನಾನು ಪಾಠ ಕಲಿಯಬೇಕಾಗಿಲ್ಲ, ಹಾಸನ ತಾಲ್ಲೂಕಿಗೆ ದ್ರೋಹವಾಗಿದೆ, ಹಾಸನ ಜನತೆಯ ಪರವಾಗಿ ಮಾನ್ಯ ಮುಖ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿದ್ದೇನೆ, ಅವರು ಆದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಅವರು ಅಯೋಗ್ಯತನ ಎಂಬ ಪದ ಬಳಸಿದ್ದಾರೆ. ಅದು ಪಾರ್ಲಿಮೆಂಟರಿ ಪದವೇ ಎಂಬುದನ್ನು ತಾವು ನೋಡಬೇಕು ಮತ್ತು ಇದರ ಬಗ್ಗೆ ತಾವು ತೀರ್ಪು ಕೊಡಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ.—ಅವರು ಹೇಗೆ ಹೇಳಿದರು, ಅವರು ಹೇಳಿದಾಗ ಏನೂ ಆಗಲಿಲ್ಲ ಅಧಿಕಾರ ಶಾಶ್ವತ ಅಲ್ಲ ಇದ್ದಾಗ ಹೊಗಳುವುದು, ಇಲ್ಲದಾಗ ಒಂದುರೀತಿ ಮಾತನಾಡುವುದು ಸರಿಯಲ್ಲ. ಅವರು ಅವಿವೇಕದ ಪರಮಾವಧಿ ಎಂದು ಹೇಳಿದರು. ನಾನು ಅವಿವೇಕ ಮಾಡುತ್ತಾ ಇಲ್ಲ. ಅದು ಅವಿವೇಕ ಮಾಡಿರುವವರಿಗೆ ಅಪ್ಲೈ ಆಗುತ್ತದೆ......

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಉಪಾಧ್ಯಕ್ಷಿಣಿಯವರೇ, ತಾವು ಅಧ್ಯಕ್ಷಸ್ಥಾನದಲ್ಲಿ ಕುಳಿತಿದ್ದೀರಿ, ತಮ್ಮ ಬಗ್ಗೆ ನನಗೆ ಗೌರವ ಇದೆ. ನಾನು ಕ್ರಿಯಾಲೋಪ ಎತ್ತಿ ಹೇಳಿದ್ದೇನೆ. ವೈಯಕ್ತಿಕ ದೋಷಾರೋಪಣೆಗಾಗಿ ಈ ಸದನವನ್ನು ಬಳಸಿಕೊಳ್ಳುವುದು ಬೇಡ. ಏನಾದರೂ ಸಲಹೆಗಳಿದ್ದರೆ, ತಮ್ಮ ಅನುಭವದ ಸಲಹೆಗಳನ್ನು ಕೊಡಲಿ. ಇದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಅವರು ಮತ್ತೆ ವೈಯಕ್ತಿಕ ದೋಷಾರೋಪಣೆಗಳನ್ನು ಮಾಡುತ್ತಾ ಹೋದರೆ, ಅದನ್ನು ನಾವು ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ......

ಶ್ರೀ ಕೆ. ಹೆಚ್ ಹನುಮೇಗೌಡ.—ಅವರು ಮಾತ್ರ ಗಂಡಸರು, ನನ್ನ ಮಾತು ಮುಗಿದ ಮೇಲೆ ಅವರು ಮಾತನಾಡಲಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರು ಯಾರದೋ ಪರ ವಹಿಸುತ್ತಿದ್ದಾರೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ, ಏನೋ ಒಂದು ಏಜೆನ್ಸಿ ತೆಗೆದುಕೊಂಡಿರುವ ಹಾಗೆ ಕಾಣುತ್ತದೆ. ಅವರು ದೇವೇಗೌಡರ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆಂದು ಅನ್ನಿಸಬೇಕಾಗುತ್ತೆ.

(ಗೊಂದಲ)

ಶ್ರೀ ಕೆ ಹೆಚ್. ಹನುಮೇಗೌಡ.—ನಿಮಗೆ ನಾಚಿಕೆ ಆಗುವುದಿಲ್ಲವೇ ? ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ನೀವು ಏಜೆಂಟ್ ಆಗಿ ಕೆಲಸ ಮಾಡಬಾರದು. ನಾನು ಯಾರ ಏಜೆಂಟ್ ಆಗಿ ಕೆಲಸ ಮಾಡುತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು, ಹನುಮೇಗೌಡರೇ, ನೀವೂ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಈ ಬಗ್ಗೆ ಒಂದು ರೂಲಿಂಗ್ ಕೊಡಬೇಕು. ಮಾನ್ಯ ಸದಸ್ಯರು ಸ್ವಲ್ಪ ಇತಿಮಿತಿಯಲ್ಲಿ ಮಾತನಾಡಬೇಕು.

ಉಪಾಧ್ಯಕ್ಷಿಣಿಯವರು.—ಸದಸ್ಯರು ಮಾತನಾಡಬೇಕಾದರೆ ತಮ್ಮ ಭಾಷೆ ಬಗ್ಗೆ ಸ್ವಲ್ಪ ಗಮನವಿಟ್ಟು ಯಾರಿಗೂ ನೋವಾಗದಂತೆ, ನಿಮ್ಮ ಅನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶ ಇದೆ. ಆದರೆ ಭಾಷೆಯ ಕಡೆ ಗಮನವಿಟ್ಟು ಮಾತನಾಡುವುದು ಸೂಕ್ತವೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ನನಗೆ ಯಾವ ವಿಧವಾದ ಆಶೋತ್ತರವೂ ಇಲ್ಲ. ಯಾವ ವಿಧವಾದ ಪುರುಷಾರ್ಥವೂ ಇಲ್ಲ. ಪುರುಷಾರ್ಥ ಇರುವವರು ಏಜೆಂಟ್ ಇಟ್ಟುಕೊಂಡು ಆ ರೀತಿ ಮಾಡಬಹುದು. ನನಗೆ ಮಾತ್ರ ದೇವರು ಒಬ್ಬನೇ ಸಾಕ್ಷಿ, ಯಾವ ಏಜೆಂಟೂ ಬೇಕಾಗಿಲ್ಲ, ಯಾರೂ ಬೇಕಾಗಿಲ್ಲ. ಅವರು ಹಾಗೆ ಹೇಳುವುದಕ್ಕೆ ತಾವು ಅವಕಾಶ ಕೊಡಬೇಡಿ.

ಉಪಾಧ್ಯಕ್ಷಿಣಿಯವರು.—ತಾವು ಮುಂದುವರಿಸಿ, ಇನ್ನು ೫-೧೦ ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ.—ಇದು ನಡೆದಿರತಕ್ಕ ವಿಚಾರ, ಇನ್‌ವೆಸ್ಟಿಗೇಷನ್ ಮಾಡಿದ ಇಬ್ಬರು ಆಫೀಸರ್ಸೂ ಹೋದರು. ಇಲ್ಲಿ ಇನ್ನೂ ಏನೇನು ನಡೆದಿದೆ ಎಂದು ಎಲ್ಲವನ್ನೂ ಹೇಳುವುದು ಬೇಡ, ಅದನ್ನೆಲ್ಲಾ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ, ಸಂದರ್ಭ ಬಂದಾಗ ಹೇಳುತ್ತೇನೆ. ಮೂರನೆಯದು ಹೇಮಾವತಿ ನದಿ ಹರಿಯುವುದು ಹಾಸನ ತಾಲ್ಲೂಕಿನಲ್ಲಿ ಬರುತ್ತದೆ. ಡ್ಯಾಮ್ ಕಟ್ಟಿರುವುದು ಹಾಸನ ತಾಲ್ಲೂಕಿನಲ್ಲಿ, ಮುಳುಗಡೆಯಾಗಿರುವ ಜಾಸ್ತಿ ಜಮೀನು ಇದ್ದದ್ದು ಹಾಸನ ತಾಲ್ಲೂಕಿನಲ್ಲಿ. ನಮ್ಮದು ಬಂಗಾಲ ಪ್ರದೇಶ. ಹಾಸನ ತಾಲ್ಲೂಕಿನಲ್ಲಿ ಮಳೆ ಹೆಚ್ಚು ಬರುವುದಿಲ್ಲ. ಹಿಂದೆ ೨೦-೩೦-೪೦ ಇಂಚು ಮಳೆಯಾಗುತ್ತಿತ್ತು. ಈಗ ಬಹಳ ಕಡಿಮೆಯಾಗಿದೆ. ಈಗ ೧೦-೧೫ ಇಂಚು ಮಳೆಯೂ ಆಗುತ್ತಿಲ್ಲ. ಸುಮಾರು ೭-೮ ವರ್ಷಗಳಿಂದ ಮಳೆ ಬರದೇ, ಬರ ಆಗುತ್ತಾ ಇದೆ, ಬೆಳೆಯಲ್ಲಾ

ಹೋಗಿದೆ. ಹಿಂದೆ ಇದ್ದ ಮುಖ್ಯಮಂತ್ರಿಗಳಿಗೆ ಜನತೆಯ ಪರವಾಗಿ ಒಂದು ರೆಪ್ರಸೆಂಟೇಷನ್ ಕೊಟ್ಟು, ನೋಡಿ, ನಮ್ಮ ತಾಲ್ಲೂಕಿನಲ್ಲಿ ಹೇಮಾವತಿ ನದಿ ಹರಿಯುತ್ತೆ, ನಮ್ಮ ತಾಲ್ಲೂಕಿನಲ್ಲಿ ಡ್ಯಾಮ್ ಕಟ್ಟಿದೆ, ನಮ್ಮ ತಾಲ್ಲೂಕಿನಲ್ಲಿ ಜಮೀನು ಮುಳುಗಡೆಯಾಗಿದೆ. ಮನೆ ಮಠ ಮುಳುಗಡೆಯಾಗಿ ಜಮೀನನ್ನೆಲ್ಲಾ ಕಳೆದುಕೊಂಡು ಜನ ನಿರ್ಗತಿಕರಾಗಿ ಹಾಳಾಗಿ ಹೋದರು. ಕೊನೇಪಕ್ಷ ಅವರಿಗಾಗಿ ಒಂದು ಏತ ನೀರಾವರಿ ಮಾಡಿಕೊಡಬೇಕೆಂದು ರೆಪ್ರಸೆಂಟೇಷನ್ ಕೊಟ್ಟೆವು. ಐದು ಸಾವಿರ ಎಕರೆಗೆ ನೀರಾವರಿ ಯಾಗುವ ಮೂರು ಕೋಟಿ ರೂಪಾಯಿಗಳ ಒಂದು ಯೋಜನೆಗೆ ಎಸ್ಟಿಮೇಟ್ ಆಯಿತು. ಎಸ್ಟಿಮೇಟ್ ಆದಮೇಲೆ ಏನಾಯಿತು, ಎಂತಾಯಿತು ಒಂದೂ ಗೊತ್ತಿಲ್ಲ, ಅದು ಹಾಗೇ ಮುಳುಗೀ ಹೋಯಿತು ಎಂದು ಇಟ್ಟುಕೊಳ್ಳಿ. ಈಗ ಪುನಃ ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ, ಇದರ ಬಗ್ಗೆ ಸರ್ವೆ ಮಾಡಿಸಬೇಕು ಎಸ್ಟಿಮೇಟ್ ಮಾಡಿಸಬೇಕು ಎಂದಾಗ, ಅವರು ಹನುಮೇಗೌಡರೇ, ತೀರಾ ಅನ್ಯಾಯವಾಗಿದ್ದು ಅದನ್ನು ನೋಡಿ ಮಾಡಿಸಿಕೊಡುತ್ತೇನೆ ಎಂದು ಹೇಳಿದರು. ಒಳ್ಳೆಯ ಕೆಲಸ ಕಾರ್ಯಗಳು ಆಗಬೇಕಾದರೆ ಹೆಜ್ಜೆ ಹೆಜ್ಜೆಗೂ ತೊಂದರೆಯಾಗುತ್ತಿದೆ, ಈ ರೀತಿಯ ಅಡಚಣೆಗಳು ಆಗುತ್ತಿವೆ. ಎರಡನೆಯದಾಗಿ, ಏನಾದರೂ ಸ್ವಲ್ಪ ಒಳ್ಳೆಯ ದೃಷ್ಟಿ ಇಟ್ಟುಕೊಂಡು, ಉತ್ತಮವಾದ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಇದ್ದರೆ ಅವರನ್ನು ತಕ್ಷಣ ಟ್ರಾನ್ಸ್‌ಫರ್ ಮಾಡುವ ಕೆಲಸ ನಡೆದಿದೆ. ಮಿನಿಟ್ ಇಷ್ಟೂ ಮಾಡುವುದು, ಅವರು ಬೇಡ. ಇವರನ್ನು ಹಾಕು ಎನ್ನುವುದು ನಡೆದಿದೆ. ಇನ್ನೂ ಅನೇಕ ವಿಚಾರಗಳು ಇವೆ. ಅದನ್ನೆಲ್ಲಾ ನಾನು ಪಾರ್ಟಿ ಮೀಟಿಂಗ್‌ನಲ್ಲಿ ಹೇಳಿಕೊಳ್ಳುತ್ತೇನೆ. ಇಲ್ಲಿ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹೊಳೆನರಸೀಪುರದ ರಾಜಕೀಯ ದಿಂದ ಹಾಸನ ತಾಲ್ಲೂಕಿಗೆ ಬಹಳ ಅನ್ಯಾಯವಾಗಿದೆ, ತುಂಬಾ ತೊಂದರೆ ಯಾಗಿದೆ. ಈ ಮಧ್ಯೆ ಏನಾಗಿದೆ ಎಂದರೆ, ಕೇಳ್ ಕೇಳಿದವರಿಗೆ, ಅವರಿಗೆ ಬೇಕಾದ ಅಧಿಕಾರಿಗಳನ್ನು ಹಾಕಿಕೊಟ್ಟು ಬಿಡುವುದು, ಅವರಿಂದ ಶಹಭಾಸ್ ಎನಿಸಿಕೊಳ್ಳುವುದು ನಿಮ್ಮ ಸಮಾನ ಇಲ್ಲ ಎನಿಸಿಕೊಳ್ಳುವುದು. ಈ ರೀತಿಯಾಗಿ ತೊಂದರೆಯಾಗುತ್ತಿದೆಯೇ ವಿನಃ ನಿಜಾಂಶ ತಿಳಿಯುವುದಕ್ಕೆ ಆಗುತ್ತಿಲ್ಲ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಇದರಲ್ಲಿ ದೇಶದ ಅಭಿವೃದ್ಧಿ ದೃಷ್ಟಿ ಇರಬೇಕು. ಹಿಂದೆ ಒಂದು ಸಾರಿ ಮದ್ರಾಸಿ ರಾಜಕಾರಣಿಗಳೊಬ್ಬರು P.W.D. is the enemy number one of the country, ಎಂದು ಹೇಳಿದ್ದರು ಎಂದು ನನಗೆ ಓದಿದ ನೆನಪು. ಈ ಮಾತನ್ನು ಹಿಂದೆ ಯಾವತ್ತು ಹೇಳಿದ್ದರೋ ಏನೋ, ಈಗ ನಡೆಯುತ್ತಿರತಕ್ಕಂಥ ಪರಿಸ್ಥಿತಿ ನೋಡಿದರೆ, ಆಗತಕ್ಕಂಥ ವ್ಯವಸ್ಥೆ ನೋಡಿದರೆ, ಈ ಜನಗಳ ದುಡ್ಡು ಯಾವರೀತಿ ಪೋಲಾಗಿ ಅನ್ಯಾಯವಾಗುತ್ತಿದೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂಕಟವಾಗುತ್ತದೆ. ಇದು ಹೋಗಬೇಕು, ಹೋಗಿ ನ್ಯಾಯವಾದ ರೀತಿಯಲ್ಲಿ ಜನಗಳಿಗೆ ಕೆಲಸ ಕಾರ್ಯಗಳು ಆಗಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಭ್ರಷ್ಟಾಚಾರದ ಬಗ್ಗೆ ಕೆಲವರು ಹೇಳಿದರು. ಭ್ರಷ್ಟಾಚಾರ ಇರುವುದು ನಿಜ ಅಲ್ಲವೇ ? ಭ್ರಷ್ಟಾಚಾರ ಎಲ್ಲಿಂದ ಎಲ್ಲಿವರೆಗೆ ಯಾವ ಮಟ್ಟದಲ್ಲಿ ಇದೆ, ಏತಕ್ಕೆ ಇದೆ ಎಂಬುದನ್ನು ನೋಡಬೇಕು. ನಾವು ಚುನಾವಣೆಯಲ್ಲಿ ಗೆದ್ದು ಇಲ್ಲಿಗೆ ಬಂದಮೇಲೆ ಒಂದು ದಿವಸ ದೇವರ ಮೇಲೆ ಆಣೆ ಇಟ್ಟು ಪ್ರಮಾಣ ಮಾಡಿಸಿದರು. ಇದಾದ ಮೇಲೆ ಜನ ನಮ್ಮನ್ನು ಕೇಳೇ ಕೇಳುತ್ತಾರೆ. ಏನ್ರಿ ನಿಮಗೆಲ್ಲ ಓಟು ಕೊಟ್ಟೆವು ಇಷ್ಟೆಲ್ಲಾ ಆಯಿತು, ಯಾವ ಆಫೀಸಿಗೆ ಹೋದರೂ ದುಡ್ಡಿಲ್ಲದೆ ಕೆಲಸ ಆಗುವುದಿಲ್ಲ, ಅರ್ಜಿ ಕೊಡುವುದಕ್ಕೆ ದುಡ್ಡು. ಎಸ್ಟಿಮೇಟ್ ಮಾಡುವುದಕ್ಕೆ ದುಡ್ಡು. ವರ್ಕ್ ಕೊಡುವುದಕ್ಕೆ ದುಡ್ಡು, ಬಿಲ್ ಮಾಡುವುದಕ್ಕೆ ದುಡ್ಡು, ಬಿಲ್ ಆದಮೇಲೆ ಇಂತಹವರಿಗೆ ಕೊಡಿ ಎಂದು ಹೇಳುತ್ತಾರೆ. ಇದೊಂದು ದೊಡ್ಡ ಕರ್ಮಕಾಂಡ. ಒಂದು ಆಫೀಸ್‌ನಲ್ಲಿ ಹತ್ತು ಜನ ಕೆಲಸ ಮಾಡುತ್ತಾರೆ ಎಂದು ಇಟ್ಟುಕೊಳ್ಳಿ. ಎಲ್ಲರಿಗೂ ದುಡ್ಡು ಹೋಗುತ್ತದೆ. ಇಷ್ಟಿಷ್ಟು ಎಂದು ಕಳುಹಿಸಿ ಕೊಡುತ್ತಾರೆ. ಅಲ್ಲಿ ಇವರು ಹೇಳಿದವರಿಗೆಲ್ಲಾ ದುಡ್ಡು ಕೊಡಬೇಕು. ಏತಕ್ಕೋ ಏನೋ ಒಂದೇ ಎರಡೇ, ಇದು ದೊಡ್ಡ ಕರ್ಮ. ಯಾರಾದರೂ ನಿಷ್ಠೆಯಿಂದ, ನಿಸ್ಪೃಹತೆಯಿಂದ ಕೆಲಸ ಮಾಡಬೇಕೆಂದರೆ, ಆ ಕಂಟ್ರಾಕ್ಟರ್ ಉಳಿಯುವುದಿಲ್ಲ, ಆ ಎಂಜಿನಿಯರೂ ಉಳಿಯುವುದಿಲ್ಲ. ಎಲ್ಲಿಯವರೆಗೆ ಈ ಭ್ರಷ್ಟ ವ್ಯವಸ್ಥೆ ? ಇದನ್ನು ತಡೆಯದೇ ಹೋದರೆ ದೇಶ ಉಳಿಯುತ್ತದೆಯೇ ? ಇರುವುದನ್ನು ಹೇಳಬಾರದೇ ? ಇರುವುದನ್ನು ಹೇಳುವ ಉದ್ದೇಶ ಏನೆಂದರೆ, ಎಲ್ಲಾ ಸರಿಯಾಗಬೇಕೆಂದು. ಎಲ್ಲಾ ಸರಿಯಾಗಲಿ ಎಂದು ಹೇಳುವುದೇ ವಿನ. ತೀರಾ ಅಧೋಗತಿಗೆ ಹೋಗಬಾರದು, ಹೋಗುವುದಕ್ಕೆ ಬಿಟ್ಟರೆ ದೇಶಕ್ಕೆ ಕೆಡಕಾಗುತ್ತದೆ ಎಂದು ಹೇಳುತ್ತಿದ್ದೇನೆಯೇ ವಿನಃ ದ್ವೇಷಾಸೂಯೆಯಿಂದ ಹೇಳುವುದಿಲ್ಲ. ದ್ವೇಷಾಸೂಯೆಯಿಂದ ಹೇಳುವುದಾದರೆ, ಬೇಕಾದಷ್ಟು ವಿಚಾರಗಳು ಇವೆ, ಬೇಕಾದಷ್ಟು ಪೇಪರ್‌ನಲ್ಲಿ ಬಂದಿದೆ. ಈಗ ಅದನ್ನು ಎತ್ತುವುದಕ್ಕೆ ಹೋಗುವುದಿಲ್ಲ. ಅದು ನನಗೆ ಸಂಬಂಧಪಟ್ಟ ವಿಚಾರವಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ನಿಮ್ಮವೂ ಸಾಕಷ್ಟು ಬಂದಿವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಹಾಗಾದರೆ ಒಂದು ಕೆಲಸ ಮಾಡೋಣ. ನಾನು ಈಗ ರಾಜೀನಾಮೆ ಕೊಡುತ್ತೇನೆ. ಅವರೂ ರಾಜೀನಾಮೆ ಕೊಡಲಿ. ಎನ್‌ಕ್ವೈರಿ ಮಾಡಲಿ, ನನ್ನದೇನಾದರೂ ತಪ್ಪು ರುಜುವಾದರೆ ನನ್ನ ಮೆಂಬರ್‌ಷಿಪ್ ಹೊರಟು ಹೋಗಲಿ, ನಾನು ಇವತ್ತೇ ಬಿಟ್ಟು ಬಿಡುತ್ತೇನೆ. ಅವರು ತಮ್ಮ ಸ್ಥಾನ ಬಿಡುತ್ತಾರಾ ಕೇಳಿರಿ. ನಾವು ಜನಗಳಿಂದ ಎಲೆಕ್ಟ್ ಆಗಿ ಬಂದವರು. ನಾನು ಬಿಟ್ಟು ಹೋಗುತ್ತೇನೆ, ಅವರು ಬಿಟ್ಟು ಹೋಗುತ್ತಾರಾ ಕೇಳಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಪಾಯಿಂಟ್ ಆಪ್ ಆರ್ಡರ್.

ಶ್ರೀ ಕೆ.ಹೆಚ್. ಹನುಮೇಗೌಡ.—ಒಂದು ತಿಂಗಳಿಂದ ಎಲ್ಲಾ ಪೇಪರ್‌ನಲ್ಲಿ ಬಂದಿದೆ.

ಉದಾಧ್ಯಕ್ಷಣಿಯವರು.—ಅವರೇನೋ ಪಾಯಿಂಟ್ ಆಪ್ ಆರ್ಡರ್ ಎತ್ತಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಅದೇನಾದರೂ ಸುಳ್ಳಾದರೆ ನಾನು ರಾಜೀನಾಮೆ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟೇ. ಯಾರೇ ಸದಸ್ಯರು ಮಾತನಾಡಬೇಕಾದರೂ ರೂಲ್ಸ್ ಆಫ್ ಪ್ರೊಸೀಜರ್ ಅಂಡ್ ಕಂಡಕ್ಟ್ ಆಫ್ ಬಿಸಿನೆಸ್ ಪ್ರಕಾರ ಮಾತನಾಡಬೇಕೆಂದು ಇದೆ. ಮಂತ್ರಿಗಳಾಗಲೀ ಅಥವಾ ಸದಸ್ಯರಾಗಲೀ ಸದನದ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಏನು ಮಾಡಿದ್ದಾರೆ, ಅದರ ಇತಿಮಿತಿಯೊಳಗೆ ಮಾತನಾಡಬೇಕು. ಅದೇ ರೀತಿ ಮಂತ್ರಿಗಳೂ ಉತ್ತರ ಹೇಳಬೇಕು, ಅಥವಾ ಸದಸ್ಯರು ಕೂಡ ಮಾತನಾಡಬೇಕು. Sir, rule 310 of our Rules of Procedure and conduct of business is very clear. It states :

310. A member while speaking shall not......

(i) refer to any matter of fact on which a judicial decision is pending. ಇದು ಆಗುವುದಿಲ್ಲ.

(ii) make personal changes against a member ;

(iii) use offensive expressions about the conduct or proceedings of Parlement or any State Legislature ; ಇದರಲ್ಲಿ ಎರಡು ಮತ್ತು ಮೂರರಲ್ಲಿ ಇರುವಂತೆ ಒಬ್ಬರ ವಿರುದ್ಧ ಮತ್ತೊಬ್ಬರು ಚಾರ್ಜಸ್ ಮಾಡುವುದು ಮತ್ತು ಆಫೆನ್ಸೀವ್ ಲಾಂಗ್‌ವೇಜ್ ಯೂಸ್ ಮಾಡುವುದು This is against Parliamentary procedure..... ಇದಕ್ಕೆ ತಾವು ರೂಲಿಂಗ್ ಕೊಡಬೇಕು. ಈ ರೂಲ್ಸ್ ಪ್ರಕಾರ, ಒಂದು ರೂಲ್ಸ್ ಆಫ್ ಪ್ರೊಸೀಜರ್ ಇತಿಮಿತಿಯಲ್ಲಿ ಸದಸ್ಯರು ಮಾತನಾಡತಕ್ಕಂಥಾದ್ದು ಅವಶ್ಯಕ ಇದೆ. ಏಕೆಂದರೆ, ಸದನದ ಘನತೆ ಮತ್ತು ಗೌರವವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮತ್ತು ಈ ರೂಲ್ಸ್‌ನ್ನು ಕೂಡ ನಾವೇ ಮಾಡಿಕೊಟ್ಟಿದ್ದು. ದಯಮಾಡಿ ಮಾನ್ಯ ಸದಸ್ಯರು ಮತ್ತು ಮಾನ್ಯ ಮಂತ್ರಿಗಳು ಸ್ವಲ್ಪ ರಿಸ್ಟ್ರಿಕ್ಟಾಗಿ ಈ ರೂಲ್ಸ್ ಫಾಲೋ ಮಾಡಿದರೆ ಒಳ್ಳೆಯದು. ತಾವು ಅದಕ್ಕೆ ರೂಲಿಂಗ್ ಕೊಡಬೇಕು ಮತ್ತು ಕಂಟ್ರೋಲ್ ಮಾಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು.—ಮಾನ್ಯ ಸದಸ್ಯರಾದ ಶ್ರೀ ಹನುಮೇಗೌಡರೆ, ಮಾತನಾಡುವಾಗ ತಾವು ಬಳಸತಕ್ಕಂಥ ಭಾಷೆ ಆದಷ್ಟು ಒಳ್ಳೆಯ ರೀತಿಯಲ್ಲಿರಬೇಕು. ಅದರಿಂದ ಯಾರಿಗೂ ನೋವಾಗಬಾರದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷಣಿಯವರೆ, ನಿನ್ನೆ ೬ ಗಂಟೆಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರು ಚರ್ಚೆಗೆ ಸಮಾನವಾದ ಅವಕಾಶ ಸಿಕ್ಕಿಲ್ಲವೆಂಬ ಕಾರಣ ಒಡ್ಡಿ ಸಭಾತ್ಯಾಗ ಮಾಡಿದರು. ನಾವು ಇಂದು ನಿರೀಕ್ಷೆ ಮಾಡಿದ್ದೆವು, ಇವತ್ತು ಬೆಳಿಗ್ಗೆ ಅವರು ನಿಮ್ಮೊಟ್ಟಿಗೆ ಮಾತನಾಡುತ್ತಾರೆ ಅವರ ಒಂದು ವಾದ ಏನಿದೆ ಅದರ ಬಗ್ಗೆ ಮಾತನಾಡೋಣ ಎಂದು. ಏಕೆಂದರೆ, ನಮ್ಮ ಕಡೆಯಿಂದ ಯಾವಾಗಲೂ ಕೂಡ ತೊಂದರೆಯನ್ನು ಕೊಡತಕ್ಕಂಥಾದ್ದು ನಮ್ಮ ಉದ್ದೇಶ ಅಲ್ಲ. ಆದ್ದರಿಂದ ಏನಾದರೂ ಹೆಚ್ಚು ಅವಕಾಶ ಇದ್ದಾಗ ಸಾಕಷ್ಟು ಅವಕಾಶ ಅವರಿಗೆ

ಮಾಡಿಕೊಡಬಹುದು. ತಾವು ಆ ರೀತಿ ಅವಕಾಶ ಕೊಡುವುದಕ್ಕೆ ನಾವು ಯಾವಾಗಲೂ ಅಡ್ಡಿ ಬರುವುದಿಲ್ಲ. ಬೆಳಿಗ್ಗೆ ನಾನು ಸ್ವಲ್ಪ ಮಾತನಾಡಿದ್ದೇನೆ. ಈಗೆಲ್ಲ ಮತ್ತೊಂದು ಘಳಿಗೆಯಲ್ಲಿ ಸರಿಯಾದಂಥ ಮಾತುಕತೆಯಾಗಿ ಅವರು ಬರಬಹುದು ಎಂದು ನಾವು ನೆನೆಸಿಕೊಂಡೆವು. ಪ್ರತಿಷ್ಠೆಯ ಮೇಲೆ ನಾವು ನಿಲ್ಲುವುದಕ್ಕೆ ತಯಾರಿಲ್ಲ. ಅವರೂ ಕೂಡ ಪ್ರತಿಷ್ಠೆಯ ಮೇಲೆ ನಿಲ್ಲುವುದಿಲ್ಲ ಎಂಬ ವಿಶ್ವಾಸದಿಂದ್ದೇವೆ. ಆದ್ದರಿಂದ ಈ ಸಭೆಯನ್ನು ಅವರು ಗೈರು ಹಾಜರಿಯಲ್ಲಿ ಮುಂದುವರಿಸಿಕೊಂಡು ಹೋಗುವುದು ಅಷ್ಟು ಸಮಂಜಸವಲ್ಲ ಎನ್ನುವುದು ನನ್ನ ಸೂಚನೆ. ಆದ್ದರಿಂದ ತಮ್ಮ ಅನುಮತಿ ಇದ್ದರೆ ಈಗ ಈ ಸಭೆಯನ್ನು ೧೦–೧೫ ನಿಮಿಷ ಮುಂದಕ್ಕೆ ಹಾಕಿ, ಸನ್ಮಾನ್ಯ ಸಭಾಧ್ಯಕ್ಷರು ಅವರ ಜೊತೆಯಲ್ಲಿ ಮಾತುಕತೆ ನಡೆಸಿ ನಂತರ ಸದನ ಸೇರುವುದು ಒಳ್ಳೆಯದು. ಸದನ ಅನೇಕ ದಿವಸಗಳಿಂದ ಸರಿಯಾಗಿ ನಡೆಯುತ್ತಿದೆ. ಇನ್ನು ಮುಂದೆಯೂ ಕೂಡ ಈ ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳು ಮಾನ್ಯ ವಿರೋಧಪಕ್ಷದ ನಾಯಕರ ಮತ್ತು ವಿರೋಧಪಕ್ಷದ ಸದಸ್ಯರ ಸಮಕ್ಷಮದಲ್ಲಿ ಚರ್ಚೆಯಾದರೆ ಈ ಸದನಕ್ಕೆ ಒಂದು ಶೋಭೆ ಬರುತ್ತದೆ. ಆದ್ದರಿಂದ ಸಭೆಯನ್ನು ೧೦–೧೫ ನಿಮಿಷಗಳ ಕಾಲ ಮುಂದಕ್ಕೆ ಹಾಕಿ ತಾವು ಅವರ ಜೊತೆ ಸಮಾಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಬೆಳಿಗ್ಗೆ ಮಾನ್ಯ ಅಧ್ಯಕ್ಷರು ಇದ್ದಾಗ ಇದೇ ಪ್ರಸ್ತಾಪವನ್ನು ಮಾಡಿದೆ. ದಯಮಾಡಿ ತಾವು ಸಭೆಯನ್ನು ಮುಂದೂಡಿ ಅವರನ್ನು ಕರೆದು ಚರ್ಚೆ ಮಾಡಿ ಎಂದು ಹೇಳಿದ್ದೆ. ಈಗಲೂ ಸಮಯ ಮಿಂಚಿಲ್ಲ. ದಯಮಾಡಿ ತಾವು ಅವರನ್ನು ಕರೆಸಿ ಮನವೊಲಿಸಿ ಅವರೂ ಕೂಡ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಮಾಡಬೇಕೆಂದು ಎಲ್ಲರ ಪರವಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು.—ಈಗ ಸಭೆಯನ್ನು ಮುಂದೂಡಿ ಅರ್ಧ ಗಂಟೆಯ ನಂತರ ಮತ್ತೆ ಸೇರುವುದು.

(ಸದನವು ಮಧ್ಯಾಹ್ನ ೩–೨೦ ಗಂಟೆಗೆ ಮತ್ತೆ ಸಮಾವೇಶಗೊಂಡಿತು.
ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು).

† ಶ್ರೀ ಎಂ. ವೀರಪ್ಪಮೊಯ್ಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಮಾನ್ಯ ಸದಸ್ಯರು ಏನು ಸಭಾತ್ಯಾಗ ಮಾಡಿದ್ದರು ಅದರ ವಿಚಾರ ನಮಗೆ ಇನ್ನೂ ನಿಗೂಢವಾಗಿಯೇ ಇದೆ. ಏಕೆಂದರೆ, ಇಲ್ಲಿ ಮಾನ್ಯ ವಿರೋಧಪಕ್ಷದವರಿಗೆ ಸರಿಯಾದ ಸಮಯಾವಕಾಶ ಸಿಕ್ಕಲಿಲ್ಲವೆಂದು ಸಭಾತ್ಯಾಗ ಮಾಡಿದ್ದರು. ಇದನ್ನು ನಾವು ಪತ್ರಿಕೆಯಲ್ಲಿ ನೋಡಿದ್ದೇವೆ. ಇವತ್ತೂ ಕೂಡ ಈ ಬಗ್ಗೆ ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ನಾವು ನೋಡಿದ್ದೇವೆ. ಆದರೆ ನಿನ್ನೆಯ ದಿವಸ ನಡೆದಂಥ ಒಂದು ಚರ್ಚೆಯನ್ನು ನೋಡಿದಾಗ ಯಾವ ಕಾರಣಕ್ಕಾಗಿ ನಿಂತು ಹೋಯಿತು, ಯಾವ ಕಾರಣದಿಂದ ಮಾನ್ಯ ವಿರೋಧಪಕ್ಷದದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರೆಂಬುದನ್ನು ಪರಿಶೀಲಿಸಲು ತಾವು ದಯಮಾಡಿ ಸದನದ ದಾಖಲೆಗಳನ್ನು ನೋಡಬೇಕು. ಏಕೆಂದರೆ ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರು ಮಾತನಾಡುತ್ತಿದ್ದರು.

ಅವರು ಮಾತನಾಡುತ್ತಿದ್ದಾಗ, ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಅವರು ಹೇಳಿದ್ದನ್ನು ನಾನು ಕೋಟ್ ಮಾಡುತ್ತೇನೆ. ''ಶ್ರೀ ಡಿ. ಬಿ. ಚಂದ್ರೇಗೌಡ ಎಷ್ಟು ಹೊತ್ತು ಕೂಡಬೇಕೆಂಬುದು ತೀರ್ಮಾನವಾಗಬೇಕು.'' ಪ್ರಶ್ನೆ ಅಲ್ಲಿ ಉದ್ಭವವಾದದ್ದು. ಅದಕ್ಕೆ ಮಾನ್ಯ ಉಪಾಧ್ಯಕ್ಷರು, ಈ ಇನ್ನೂ ೬ ಗಂಟೆ ಆಗಲಿಲ್ಲವಲ್ಲ ಎಂದು ಹೇಳಿದರು. ಆಮೇಲೆ ಆ ಬಗ್ಗೆ ಚರ್ಚೆ ನಡೆಯಿತು. ಆಮೇಲೆ ಮಾನ್ಯ ವಿರೋಧಪಕ್ಷದ ಉಪನಾಯಕರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ''ಈ ಸರ್ಕಾರಕ್ಕೆ ನಾವು ಮಾತನಾಡುವುದು ಬೇಕಾಗಿಲ್ಲ, ನಾವು ಹೋಗುತ್ತೇವೆ'' ಎಂದು ಹೇಳಿದರು. ಅದಕ್ಕೆ ಉಪಾಧ್ಯಕ್ಷರು ಎಲ್ಲರಿಗೂ ಅವಕಾಶವನ್ನು ಕೊಡುತ್ತಿದ್ದೇವೆಂದು ಹೇಳಿದರು. It was not denied. ಮಾನ್ಯ ಶಿವರಾಮೇಗೌಡರು ಮಾತನಾಡುತ್ತಿದ್ದರು. ಒಂದು ವೇಳೆ ನಮ್ಮ ಪಕ್ಷದಲ್ಲಿ ಯಾರಿಗಾದರೂ ಹೆಚ್ಚು ಅವಕಾಶವನ್ನು ಕೊಟ್ಟು, ಅವರನ್ನು ಕರೆದು ಇಲ್ಲಿ ಚರ್ಚೆಯನ್ನು ಮಾಡುತ್ತಿದ್ದು, ವಿರೋಧಪಕ್ಷದ ಸದಸ್ಯರಿಗೆ ಏನಾದರೂ ಮಾನ್ಯ ಉಪಾಧ್ಯಕ್ಷರು ನಿಮಗೆ ಅವಕಾಶ ಇಲ್ಲವೆಂದು ಹೇಳಿದ್ದರೆ ಆಗ ಈ ಪ್ರಶ್ನೆ ಉದ್ಭವವಾಗುತ್ತಿತ್ತು. ನಾನು ಈ ಎಲ್ಲ ಪ್ರೊಸಿಡಿಂಗ್ಸ್‌ನನ್ನು

ನೋಡಿದಾಗ, ಎಷ್ಟು ಗಂಟೆಗೆ ಇವತ್ತಿನ ಸಭೆಯನ್ನು ಮುಗಿಸುತ್ತೀರಿ ಎನ್ನುವ ಪ್ರಶ್ನೆಯಿಂದ ಉದ್ಭವವಾದಂಥ ವಿಚಾರದ ಬಗ್ಗೆ ಕೆಲವು ಚರ್ಚೆ ನಡೆದು ಕೆಲವು ಮಾತಿನಲ್ಲಿ ಅಂತ್ಯವಾಗಿ, ಇವತ್ತು ಸನ್ಮಾನ್ಯ ವಿರೋಧಪಕ್ಷದ ನಾಯಕರು ಕೊನೆಗೆ ಹೊರಗೆ ಹೋಗತಕ್ಕಂಥ ಸಂದರ್ಭದಲ್ಲಿ ಹೇಳಿದಂಥ ಇಲ್ಲಿ ಒಂದೆರಡು ಮಾತುಗಳನ್ನು ನಾನು ಉಲ್ಲೇಖಿಸಿ ಹೇಳುತ್ತೇನೆ. ಅದೆಲ್ಲ ಪ್ರೊಸಿಡಿಂಗ್ಸ್‌ನ್ನು ನಾನು ಓದಲಿಕ್ಕೆ ಹೋಗುವುದಿಲ್ಲ. ಇಲ್ಲಿ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಮಧ್ಯದಲ್ಲಿ ಎದ್ದುನಿಂತು ''ನಾವು ಏನು ಇವರಿಗೆ ತಕರಾರು ಮಾಡುವ ಮಟ್ಟಕ್ಕೆ ಹೋಗುವುದಿಲ್ಲ. ಯಾರು ಬೇಕಾದರೂ ನಿಮ್ಮ ಪರವಾನಿಗೆ ಯನ್ನು ಪಡೆದು ಮಾತನಾಡಲಿ, ಆದರೆ ಅವರು ಹೇಳತಕ್ಕಂಥದ್ದನ್ನು ಕೇಳಿಕೊಂಡು ಹೋಗುವುದಕ್ಕೆ ನಮಗೇನೂ ಶಕ್ತಿ ಇಲ್ಲದೆ ಬಂದಿಲ್ಲ ; ನಾವು ಶಾಸಕರಾಗಿ ಗೆದ್ದು ಇಲ್ಲಿ ಬಂದಿರತಕ್ಕಂಥಾದ್ದು ನಮಗೂ ನೂರಾರು ಸಮಸ್ಯೆಗಳು ಇವೆ, ನಮ್ಮದೂ ಒಂದು ಪಕ್ಷ ಇದೆ. ನಮ್ಮದೂ ಒಂದು ವಿರೋಧಪಕ್ಷವೆಂದು ಗುರುತು ಮಾಡಿದ್ದೀರಿ, ಅದನ್ನು ಇಲ್ಲವೆಂದು ಹೇಳಿ ನಾವು ಹೋಗುತ್ತೇವೆಂದು ಹೇಳಿದರು. ಅದಕ್ಕೆ ಮಾನ್ಯ ಎಂ. ಎಸ್. ಪಾಟೀಲ್‌ರವರು ಮಾತನಾಡಿದರು ಅದಕ್ಕೆ ಪಿ.ಜಿ.ಆರ್. ಸಿಂಧ್ಯರವರು ಕೂಡ ಮಾತನಾಡಿ ನಿಮ್ಮ ಸಹಾನುಭೂತಿ ನಮಗೆ ಬೇಕಾಗಿಲ್ಲ we do not want to beg for time here.'' ಎಂದು ಹೇಳಿದರು. ಆ ಸಂದರ್ಭದಲ್ಲಿ ಅವಕಾಶವನ್ನು ಕೇಳಿ ನಿರಾಕರಣೆ ಈ ಕಡೆಯವರು ಮಾಡಲಿಲ್ಲ, ಅಥವಾ ಸನ್ಮಾನ್ಯ ಉಪಾಧ್ಯಕ್ಷಿಣಿಯವರೂ ಕೂಡ ಮಾಡಲಿಲ್ಲ. ಹೀಗಿರುವಾಗ ಕೊನೆಗೆ ಶ್ರೀ ವಾಟಾಳ್ ನಾಗರಾಜ್‌ರವರು ''ನೀವು ಕೂಡಿ ಎಂದು ಹೇಳಿದರೆ ಕೂಡುತ್ತೇವೆ, ಇಲ್ಲವೆಂದರೆ ಬೇಡವೆಂದು ಹೇಳಿ ನಾವು ನಮ್ಮ ಕಡತಗಳನ್ನು ತೆಗೆದುಕೊಂಡು ಹೊರಗಡೆ ಹೋಗುತ್ತೇವೆ, ಬನ್ನಿಸ್ವಾಮಿ ಹೋಗೋಣ'' ಎಂದು ಹೇಳಿದರು. ಅನಂತರ ಅದಕ್ಕೆ ಸನ್ಮಾನ್ಯ ಎಂ. ಎಸ್. ಪಾಟೀಲ್ ರವರು, "ತಮ್ಮ ಪರವಾಗಿ ವಿನಂತಿಸಿ ಕೊಳ್ಳುತ್ತಿದ್ದೇನೆ. ಈ ರೀತಿ ವಾಕ್‌ಔಟ್ ಮಾಡುವುದು ಸರಿಯಲ್ಲ, ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ವಾಕ್‌ಔಟ್ ಮಾಡುತ್ತಿದ್ದಾರೆಂಬ ಭಾವನೆ ನಮಗೆ ಬರುತ್ತದೆ'' ಎಂದು ಹೇಳಿದರು, ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಸಮಯ ಕೊಟ್ಟಿಲ್ಲ, ಅಥವಾ ಈ ಕಡೆಯಲ್ಲಿ ೧೮೮ ಜನ ಸದಸ್ಯರ ಬೆಂಬಲವಿದೆ. ಏನೋ ಒಂದು ದಮನ ನೀತಿಯನ್ನು ಅನುಸರಿಸುತ್ತಿದ್ದೇವೆ, ಅಥವಾ ನಮಗೆ ಬಹುಮತ ಇದೆ ಎಂದು ಅವರ ಅವಕಾಶವನ್ನು ಅಪಹರಣ ಮಾಡಬೇಕೆನ್ನುವ ರೀತಿಯಲ್ಲಿ ವಾದ ನಡೆದಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಿನ್ನೆ ಏನು ಒಂದು ಘಟನೆ ನಡೆಯಿತು that was not the cause, ಪತ್ರಿಕೆಯಲ್ಲೂ ಕೂಡ ಬೆಳಿಗ್ಗೆ ನೋಡಿದ್ದೇವೆ.

ಇವತ್ತು 'ಈ ಸದನವನ್ನು ವಿರೋಧ ಪಕ್ಷದವರು ಬಹಿಷ್ಕಾರ ಮಾಡುವುದಕ್ಕೆ ಯಾವ ಕಾರಣವೂ ಇಲ್ಲ. ಯಾವುದಾದರೂ ಒಂದು ರಾಜ್ಯದ ಬಹಳ ಗಹನವಾದ, ಗಂಭೀರವಾದಂಥ, ರಾಜ್ಯದ ಅಥವಾ ಜನರಿಗೆ ಸಂಬಂಧಪಟ್ಟ ವಿಚಾರದಲ್ಲಿ ಬಂದಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ನಾವು ಇಲ್ಲಿ ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದೇವೆ. ತಾವು ಕೂಡ ವಿರೋಧ ಪಕ್ಷದಲ್ಲಿ ಕೆಲಸಮಾಡಿ ಅನುಭವ ಪಡೆದಿರುತ್ತೀರಿ. ನಾವು ನೋಡಿದ್ದೇವೆ ಅಂಥ ವಿಚಾರಗಳು ಬಂದಾಗ ಬಹಿಷ್ಕಾರ ಮಾಡತಕ್ಕಂಥದ್ದು ಅಥವಾ ವಾಕ್‌ಔಟ್ ಮಾಡತಕ್ಕಂಥದ್ದನ್ನು ನಾವು ಕೇಳಿದ್ದೇವೆ. ಆದರೆ ಇಲ್ಲಿ ಪ್ರಶ್ನೆ ಇಷ್ಟೆ. ಕಾರಣ ಇಷ್ಟಕ್ಕೆ ಸೀಮಿತವಾಗಿದೆ. ಸದನ ಎಷ್ಟು ಗಂಟೆಯವರೆಗೆ ನಡೆಯುತ್ತದೆ ಎಂದು ಕೇಳಿದ್ದಕ್ಕೆ ೬ ಗಂಟೆಗಳವರೆಗೆ ಅಂತ ಹೇಳಿದ್ದು ಇದೆ. ಬಹುಶಃ ತಮಗೂ ಗೊತ್ತಿದೆ, ೬ ಗಂಟೆಯಲ್ಲ ೧೧ ಗಂಟೆ, ೧೨ ಗಂಟೆವರೆಗೆ ಕುಳಿತು ಈ ಸದನದ ಕಾರ್ಯಕಲಾಪಗಳನ್ನು ಮಾಡಿದ್ದು ಇದೆ, ಇದೇನು ಹೊಸದಲ್ಲ. ಒಂದುವೇಳೆ ವಿರೋಧಪಕ್ಷದ ನಾಯಕರಾಗಲಿ ಅಥವಾ ವಿರೋಧಪಕ್ಷದ ಸದಸ್ಯರಾಗಲಿ ೬ ಗಂಟೆಗಳ ಮೇಲೆ ಕುಳಿತುಕೊಳ್ಳುವುದಕ್ಕೆ ತಮಗೆ ಆಗುವುದಿಲ್ಲ, ನಮಗೆ ಸಹನೆ ಇಲ್ಲ, ಪಕ್ಷದ ಸಭೆಗಳು ಇರುತ್ತವೆ ಎಂದು ಹೇಳಿದ್ದರೆ ಅಂಥದ್ದೇನಾದರೂ ಕಾರಣವಿದ್ದರೆ ಅದಕ್ಕೆ ನಾವು ಆಕ್ಷೇಪಣೆ ಮಾಡುತ್ತಾ ಇರುತ್ತಿರಲಿಲ್ಲ. ಮತ್ತು ಆ ದಿವಸ ಕೂಡ ೬ ಗಂಟೆಗೆ ಸಭೆಯನ್ನು ಮುಗಿಸಿ ಎಂದು ಹೇಳಿದ್ದರೆ ಅಥವಾ ಬಹುಶಃ ಸದನದಲ್ಲಿ ಆ ಮಾತುಕತೆ ಬಂದಿದ್ದರೆ, ಅದಕ್ಕೆ ನಮ್ಮ ಆಕ್ಷೇಪಣೆ ಇರುತ್ತಿರಲಿಲ್ಲ, ಒಂದು ವೇಳೆ ಆರು ಗಂಟೆ ಮೇಲೆ ಕುಳಿತುಕೊಳ್ಳಲೇಬೇಕು, ೯ ಗಂಟೆಯವರೆಗೆ ಸದನ ನಡೆಯಬೇಕು ಎಂದು ನಾವು ಹೇಳಿದಿದ್ದರೆ ಅದಾದರೂ ಆಕ್ಷೇಪಣೆಗೆ ಒಂದು ಕಾರಣ ಇತ್ತು. ಆ ಯಾವ ಆಕ್ಷೇಪಣೆಯೂ ಇಲ್ಲ. ಆದ್ದರಿಂದ ಅವರು ಯಾವ ಕಾರಣದಿಂದ ಸಭಾತ್ಯಾಗ ಮಾಡಿದರು ಎಂಬುದು ಸದನದ ಎಲ್ಲಾ ಸದಸ್ಯರಿಗೆ ನಿಗೂಢವಾದ ಒಂದು ವಿಚಾರವಾಗಿದೆ. ಆ ರೀತಿ ನಿನ್ನೆಯ ದಿವಸ ಆಕಸ್ಮಿಕವಾದ ಪರಿಸ್ಥಿತಿ ಉಂಟಾಗಿ ವಿರೋಧ ಪಕ್ಷದವರ ಮೂಡ್ ತಪ್ಪಿಹೋಯಿತು ಎನ್ನುವುದು ನಮಗೆ ಗೊತ್ತಾಗಿಲ್ಲ, ಪ್ರಚೋದನೆ ನಮ್ಮ ಕಡೆಯಿಂದ ಬರಬೇಕಾಗುತ್ತದೆ ಅಥವಾ ಉಪಾಧ್ಯಕ್ಷಿಣಿಯವರಿಂದ ಬರಬೇಕಾಗುತ್ತದೆ. ಅದು ಯಾವುದೂ ಇಲ್ಲ. ಬಿಜೆಪಿಯವರು ಆಗಾಗ ಯಾವುದಾದರೂ ಒತ್ತಾಯ ಮಾಡಿ ನಾವು ಹೊರ ಹೋಗುತ್ತೇವೆಂದು ಹೇಳುತ್ತಿರುತ್ತಾರೆ. ವಿರೋದ ಪಕ್ಷದವರು ಹೊರಗೆ ಹೋದಮೇಲೆ ಈಶ್ವರಪ್ಪ

ನವರು, ಈ ಚರ್ಚೆ ಪ್ರಾರಂಭವಾದಾಗಿನಿಂದ ನಾವು ಬಿಜೆಪಿ. ವತಿಯಿಂದ ಪತ್ರ ಕಳುಹಿಸುತ್ತಿದ್ದೇವೆ' ಎಂದು ಹೇಳಿದರು. ಅದಕ್ಕೆ ಉಪಾಧ್ಯಕ್ಷಿಣಿಯವರು ನಿಮ್ಮ ಚಾನ್ಸ್ ಇದೆ ಎಂದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಹುಶಃ ಅವರು ಕುಲದೀಪಸಿಂಗ್ ರಿಪೋರ್ಟ್ ನಾಳೆ ಚರ್ಚೆಗೆ ಬರಬಹುದೆಂದು ಅದನ್ನು ವಿವರವಾಗಿ ಓದುತ್ತಿರಬಹುದು. ಅದಕ್ಕೋಸ್ಕರ ವಿರೋಧ ಪಕ್ಷದವರು ಬಾಯ್‌ಕಾಟ್ ಮಾಡಿ ಹೋಗಿರಬಹುದೆಂದು ನನಗನ್ನಿಸುತ್ತದೆ ಅದು ಸುಮಾರು ೩೦೩ ಪುಟ ಇದೆ. ಅದನ್ನು ಓದಬೇಕಾದರೆ ಸ್ವಾಭಾವಿಕವಾಗಿ ೨-೩ ದಿವಸ ಬೇಕಾಗುತ್ತದೆ. ಅಲ್ಲಿಯವರೆಗೆ ಕಾಲಾವಕಾಶ ತೆಗೆದುಕೊಳ್ಳುತ್ತಿರಬಹುದೆಂದು ನನಗನ್ನಿಸುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೊಸರಿನಲ್ಲಿ ಕಲ್ಲು ಹುಡುಕುವುದು ಅಂದಹಾಗೆ ಆಗಿದೆ ನಮ್ಮ ಪರಿಸ್ಥಿತಿ. ಯಾವ ಪ್ರಚೋದನೆ ಕೂಡ ನಮ್ಮಿಂದ ಇಲ್ಲ. ಉಪಾಧ್ಯಕ್ಷಿಣಿಯವರಿಂದಲೂ ಇಲ್ಲ. ಅವರು ನಿಮ್ಮ ಚಾನ್ಸ್ ಇದೆ ಎಂದು ಹೇಳುತ್ತಿದ್ದಾರೆ. ಇವತ್ತೂ ಕೂಡ ಇದರ ಬಗ್ಗೆ ಚರ್ಚೆ ಮಾಡ ಬೇಕೆಂದು ತೀರ್ಮಾನ ಮಾಡಿದ್ದೆವು. ಮಾನ್ಯ ಉಪಾಧ್ಯಕ್ಷಿಣಿಯವರು ಚರ್ಚೆ ಇಲ್ಲಿಗೆ ಮುಗಿಯಿತು, ಅಂತ್ಯ ಮಾಡುತ್ತೇನೆ, ನಾಳೆ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳಿದ್ದರೆ ಒಪ್ಪಬಹುದಿತ್ತು. ಅಥವಾ ಇಲ್ಲಿಗೆ ಚರ್ಚೆ ಮುಗಿಯಿತು ಎಂದು ಹೇಳಿದ್ದರೆ ಆಕ್ಷೇಪಣೆಗೆ ಕಾರಣ ಇದೆ ಎಂದು ಹೇಳಬಹುದಿತ್ತು. ಇವತ್ತೂ ಚರ್ಚೆ ನಡೆಯಲಿ, ಕೊನೆಗೆ ಸಚಿವರು ಉತ್ತರ ಕೊಡಲಿ ಎಂದು ಹೇಳಿದ್ದೇವೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿನ್ನೆ ಮತ್ತು ಇವತ್ತು ಈ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕೆಂದು ನಿರ್ಣಯವಾಗಿದೆ ಎಂದು ಹೇಳಿದ್ದೇವೆ. ಹಾಗಿರುವಾಗ ಯಾವುದೇ ಕಾರಣ ಇಲ್ಲದೆ ಅಥವಾ ಪತ್ರಿಕೆಯಲ್ಲಿ ಅವರು ಬಹಿಷ್ಕಾರ ಮಾಡುತ್ತಾರೆಂದು ಇದ್ದರೆ ಸಹಜವಾಗಿ we are interested in business. ವಿರೋಧ ಪಕ್ಷದವರು ಇದ್ದು ಸದನದ ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂಬ ಸಂಪೂರ್ಣ ವಿಶ್ವಾಸ, ಪರಂಪರೆ ನಮಗೆ ಇದೆ. ಒಂದು ವೇಳೆ ಬಹಿಷ್ಕಾರ ಮಾಡುತ್ತಾರೆ ಅದಕ್ಕೆ ಬೇರೆ ಕಾರಣ ಇದೆ ಎಂದು ಇದ್ದಿದ್ದರೆ ಪ್ರಶ್ನೋತ್ತರ ವೇಳೆಗೆ ಮೊದಲೇ ನಾವೇ ಅವರನ್ನು ಚರ್ಚೆಗೆ ಆಹ್ವಾನಿಸುತ್ತಿದ್ದೆವು, ನಾವು ಇನಿಷಿಯೇಟೀವ್ ತೆಗೆದು ಕೊಳ್ಳುತ್ತಿದ್ದೆವು. ತಾವು ಅವರನ್ನು ಕರೆದು ಕೇಳುತ್ತಿದ್ದೀರಿ, ಏನೂ ವಿಚಾರ ಇಲ್ಲದೇ ಇದ್ದಾಗ ಮಾತನಾಡುವುದು ಏನಿದೆ? ಇವತ್ತು ಮಾಮೂಲಾಗಿ ಬೆಳಿಗ್ಗೆ ೯ ಗಂಟೆಗೆ ಪ್ರಶ್ನೋತ್ತರ ವೇಳೆ ಪ್ರಾರಂಭವಾಗುತ್ತದೆಂದು ನಾವು ಇಲ್ಲಿ ಎಲ್ಲರೂ ಬಂದು ಸೇರಿದಾಗ, ವಿರೋಧ ಪಕ್ಷದವರು ಸದನದಲ್ಲಿ ಎಲ್ಲೂ ಇಲ್ಲವೆಂದು ತಿಳಿಯಿತು ೯ ಗಂಟೆ ೨೦ ನಿಮಿಷದವರೆಗೆ ಬೆಲ್ ಬಾರಿಸುತ್ತಿತ್ತು. ಸುಮಾರು ೨೦ ನಿಮಿಷ ಟೈಂ ಇತ್ತು. ೯-೦೫ ಆದರೂ ಅವರು ಏಕೆ ಬರಲಿಲ್ಲವೆಂದು ತಿಳಿಯಲಿಲ್ಲ. 20 minutes time was given. I took the initiative to talk to the Leader of the Opposition. When I asked them whether there was any grievance, they said there was no grievance. I think there are some accumulated grievances. ನಮ್ಮಿಂದ ಯಾವ ಪ್ರಚೋದನೆಯೂ ಬರಲಿಲ್ಲ. ಕೆಲವುಸಾರಿ ಜಗಳ ಆಗುವುದಿದ್ದರೆ ಯಾವಾಗಲೊ, ಯಾರೋ ಮಾಡಿದ್ದಾರೆಂದೂ. ನೀನು ಮಾಡದಿದ್ದರೆ ನಿಮ್ಮ ಅಪ್ಪ ಮಾಡಿದ, ನಿಮ್ಮ ಅಜ್ಜ ಮಾಡಿದ ಎಂದು ತೋಳ ಕುರಿಮರಿ ಕಥೆಯ ರೀತಿ ಕೆಲವು ಸಾರಿ ಮಾತು ಕತೆಯಲ್ಲಿ ಬರುತ್ತದೆ ಅಂಥದ್ದು ಏನಾದರೂ ಇದ್ದರೆ ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೆವು. ಟೈಂ ಕೊಡುವುದರಲ್ಲಿ ಏನು ತಿದ್ದುಪಡಿ ಮಾಡಬೇಕೋ ಮಾಡಿ, ಟೈಂ ಕೊಡುವುದಕ್ಕೆ ನಾವು ಸಂಪೂರ್ಣವಾಗಿ ತಯಾರಿದ್ದೇವೆ. I do not think that the Hon. Speaker will be averse to such accommodation. He has been accommodative. We have also been quite liberal. None of our Members are finding fault with it.

ಅವರು, ಇಲ್ಲ ನಮ್ಮ ಸದಸ್ಯರ ಹತ್ತಿರ ಸ್ವಲ್ಪ ಮಾತನಾಡಬೇಕು ಎಂದು ಹೇಳಿದ್ದರೆ, perhaps in the press statement to-day which I happened to go through ಅಲ್ಲಿ ಏನು ಹೇಳುತ್ತಾರೆ? ೯-೨೦ಕ್ಕೆ ನಾವು ಸಭಾಪತಿಗಳ ಛೇಂಬರ್ ಹತ್ತಿರ ಬಂದೆವು, ಆಗಾಗಲೇ ಸಭಾಪತಿಗಳು ಬಂದು ಬಿಟ್ಟರು ಎಂದು ಹೇಳಿದ್ದಾರೆ: ಸನ್ಮಾನ್ಯ ಅಧ್ಯಕ್ಷರೇ ಒಂದು ವೇಳೆ ಈ ಸದನಕ್ಕೆ ಇವತ್ತು ಬೆಳಿಗ್ಗೆ ಬರಲಿಕ್ಕೆ ಅವರದು ಏನಾದರೂ ರಿಸರ್ವೇಷನ್ ಇದ್ದಿದ್ದರೆ perhaps we could have called. ಆದರೂ ಕೂಡ we never had an inkling of their boycotting, which may not be their intention, we did take initiative to invite them so that we can have them in this House during the Question

Hour. ಕ್ವೆಶ್ಚನ್ ಅವರ್ ಆದ ಮೇಲೂ ಕೂಡ we were expecting them. ಸಭಾಪತಿಗಳು ಸದನಕ್ಕೆ ಬಂದುಬಿಟ್ಟರು ಎಂದು ಹೇಳಿ because after all ಬೆಲ್ ಕೊಟ್ಟ ಮೇಲೆ ೨೦ ನಿಮಿಷದ ಮೇಲೆ that means you had given them 20 mininutes time. I think it is the maximum time which could have been given by the Hon. Speaker for them to come and discuss with you any problem. ಹಿಂದೆ ನಾವೂ ವಿರೋಧ ಪಕ್ಷದಲ್ಲಿದ್ದೆವು. ಶ್ರೀಮತಿ ನಾಗರತ್ನಮ್ಮನವರೂ ವಿರೋಧ ಪಕ್ಷದಲ್ಲಿದ್ದರು. ಏನಾದರೂ ಗ್ರಿವೆನ್ಸಸ್ ಇದ್ದರೆ we could have spoken to the Speaker. After all we have been very objective and we are highly honoured to have your kind-self as the Speaker of this House. ಹಾಗಿರುವಾಗ ಇಲ್ಲಿ ಯಾವುದೇ ಪ್ರಚೋದನೆ ಇಲ್ಲದೆ, ಯಾವುದೇ ಕಾರಣ ಇಲ್ಲದೆ, ಈ ರೀತಿ ಆಗಿದೆ. ಒಂದು ವೇಳೆ ಕಾರಣ ಇದ್ದಿದ್ದರೆ ನಮ್ಮ ಹತ್ತಿರ ಹೇಳುವುದು ಬೇಡ, ತಮ್ಮ ಹತ್ತಿರ ಹೇಳಬಹುದಾಗಿತ್ತು. ಆದ್ದರಿಂದ ಪುನಃ ಹನ್ನೆರಡೂವರೆ ಘಂಟೆಗೆ ನಾನೇ ಎದ್ದು ಸನ್ಮಾನ್ಯ ಉಪಾಧ್ಯಕ್ಷರ ಹತ್ತಿರ ವಿನಂತಿ ಮಾಡಿಕೊಂಡೆ. ಬೇಕಾದರೆ ಹನ್ನೆರಡೂವರೆಗೆ ಸದನವನ್ನು ಅಡ್ಜರ್ನ್ ಮಾಡೋಣ, ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರನ್ನು ಕರೆದು ಸಮಾಲೋಚನೆ ಮಾಡಿ, ಈ ಸದನಕ್ಕೆ ಅವರು ಬರಬೇಕು, ತಮ್ಮ ಸಮಕ್ಷಮದಲ್ಲೇ ಚರ್ಚೆ ನಡೆಯಬೇಕೆಂದು ವಿನಂತಿ ಮಾಡಿಕೊಂಡಾಗ ಹನ್ನೆರಡೂವರೆಗೆ ಸದನದ ಅಡ್ಜರ್ನ್ ಆಯಿತು. ತಾವು ಅವರನ್ನು ಕರೆದು ಸುಮಾರು ಒಂದು ಘಂಟೆ ಕಾಲ ವಿಚಾರ ಮಾಡಿದಿರಿ. ಅದಕ್ಕೆ ಅವರು ಹೇಳಿದರು, ಇಲ್ಲ, ೫ ಘಂಟೆಗೆ ಸಭೆ ಕರೆದಿದ್ದೇವೆ. ನಿರ್ಣಯ ಮಾಡಿಕೊಂಡು ಆಮೇಲೆ ಬರುತ್ತೇವೆ ಎಂಬ ಒಂದು ನಿಲುವನ್ನು ಇವತ್ತು ತೆಗೆದುಕೊಂಡಿದ್ದಾರೆ. ನಾವು ವಿರೋಧ ಪಕ್ಷದಲ್ಲಿದ್ದಾಗ ಸದನದಲ್ಲಿ ಎಂತಹ ಸಂಘರ್ಷಣೆ ನಡೆದರೂ ಕೂಡ ಸನ್ಮಾನ್ಯ ಸಭಾಪತಿಗಳು ಕರೆದಾಗ ಮಾತುಕತೆ ಮಾಡಿದಾಗ ಅದೇ ದಿವಸ ನಮ್ಮ ನಿಲುವನ್ನು ಬದಲು ಮಾಡಿರುವಂಥಾದ್ದು ಇದೆ. ಏಕೆಂದರೆ, ನಾವು ಆ ಪೀಠಕ್ಕೆ ಮನ್ನಣೆ, ಗೌರವ ಕೊಡಬೇಕಾಗುತ್ತದೆ. ಸದನದ ಒಂದು ಪರಂಪರೆಯನ್ನು ಎತ್ತಿಹಿಡಿಯತಕ್ಕ ಘನವಾದ ಕೆಲಸ ಮಾಡತಕ್ಕ ಪವಿತ್ರವಾದ ಪೀಠದಲ್ಲಿ ತಾವಿದ್ದಾಗ ತಾವು ಸಮಾಲೋಚನೆಗೆ ಬಂದ ಮೇಲೂ ಕೂಡ, ಇಲ್ಲ. ೫ ಘಂಟೆಗೆ ಬರುತ್ತೇವೆ ಎಂದು ಹೇಳಿದರೆ ಬಹುಶಃ ಅವರಿಗೆ ಇನ್ನೂ ಕಾಲಾವಕಾಶ ಬೇಕಾಗಿರಬಹುದು. ಮಾನ್ಯ ಅಧ್ಯಕ್ಷರೇ, ಇವತ್ತು ಏನು ಈ ಸದನದಲ್ಲಿ ಚರ್ಚೆಯ ವಿಷಯದಲ್ಲಿ, ಕಾಲಾವಕಾಶದ ವಿಚಾರದಲ್ಲಿ, ನಮ್ಮ ಸರ್ಕಾರ ಬಂದ ಮೇಲೆ ತಾವು ಅವಕಾಶ ಒದಗಿಸಿದ್ದೀರಿ ಅಥವಾ ಅಥವಾ ನಾವೂ ಒಪ್ಪಿದ್ದೇವೆ. ಹಿಂದೆ ಯಾವ ರೀತಿಯಲ್ಲಿ ನಡೆಯುತ್ತಿತ್ತು ಎನ್ನುವುದನ್ನು ತಮ್ಮ ಸಮಕ್ಷಮಕ್ಕೆ ತರಲಿಕ್ಕೆ ಬಯಸುತ್ತೇನೆ. ಏಕೆಂದರೆ, ನಾವು ಇವತ್ತು ಮೆಜಾರಿಟಿ ಇದ್ದೇವೆ ಎಂದು ಯಾವುದೇ ಚರ್ಚೆಯನ್ನು ಕುಂಠಿತಗೊಳಿಸುವ ಪ್ರವೃತ್ತಿ ನಮ್ಮ ಕಡೆಯಿಂದ ನಡೆದಿಲ್ಲ. ೧೯೮೮ರಲ್ಲಿ ಗೌರ್ನರ್ಸ್ ಅಡ್ರೆಸ್ ಮೇಲೆ ಬರೀ ೪ ದಿವಸ ಚರ್ಚೆ ಆಗಿದೆ. ೧೯೮೭ರಲ್ಲಿ ಬರೀ ೩ ದಿವಸ ಚರ್ಚೆ ನಡೆದಿದೆ. ೧೯೮೦ರಲ್ಲಿ ೬ ದಿವಸ ಚರ್ಚೆ ನಡೆದಿದೆ. ಜನರಲ್ ಡಿಸ್ಕಷನ್ ಆನ್ ಬಜೆಟ್ ಕೂಡ ನಾಲ್ಕೈದು ದಿವಸ ನಡೆದಿದೆ. ಅದೇ ಪ್ರಕಾರ ಹಿಂದೆ ಕೂಡ ನಡೆದಿದೆ. ಡಿಮ್ಯಾಂಡ್ ಫಾರ್ ಗ್ರ್ಯಾಂಟ್ಸ್‌ಗಾಗಿ ಈಗಾಗಲೇ ೧೯ ದಿವಸ ಕಳೆದಿದೆ. ಇನ್ನೂ ನಾಲ್ಕು ದಿವಸ ಅಂದರೆ ೨೩ ದಿವಸಗಳ ಕಾಲ ಚರ್ಚೆ ಮಾಡುವುದಕ್ಕೆ ಇಲ್ಲಿ ಅವಕಾಶ ಇದೆ. Whereas in 1987-88 only 9 days on discussion on Demands, in 1986-87 only 13 days, in 1985-86 21 days and in 1984-85 only 10 days. ಇದರ ಸರಾಸರಿ ನೋಡಿದರೆ ಬಹಳ ಕಡಿಮೆ ಸಮಯ ಆಗಿದೆ. ಹಾಗಾದರೆ ನಾವೂ ಆಪಾದನೆ ಮಾಡಬೇಕಾಗುತ್ತದೆ. ಹಿಂದೆ ಇವರೂ ಮೆಜಾರಿಟಿ ಇಟ್ಟುಕೊಂಡು ಪ್ರಜಾಪ್ರಭುತ್ವದಮನ ಕಾರ್ಯವನ್ನು ಮಾಡಿದರು ಅಂತ ನಾವೂ ಮಾಡಬಹುದಿತ್ತು. ಆದರೆ ಆ ಕೆಲಸವನ್ನು ಆವತ್ತೂ ಮಾಡಲಿಕ್ಕೆ ನಾವೂ ಖಂಡಿತವಾಗಿ ಹೋಗಲಿಲ್ಲ ? ಎಂಬುದು ಅಂಕಿ ಅಂಶಗಳನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಮಯವನ್ನು ನಿಗಧಿಗೊಳಿಸತಕ್ಕ ಒಂದು ಪರಂಪರೆ ಇಲ್ಲಿದೆ. ಏಕೆಂದರೆ, ಒಂದು ಬೇಡಿಕೆಗೆ ಎಷ್ಟು ಸಮಯವನ್ನು ಕಳೆಯಬೇಕೆಂಬುದನ್ನು ಸಭಾ ಸಲಹಾ ಸಮಿತಿ ನಿಷ್ಕರ್ಷೆ ಮಾಡುತ್ತದೆ. ಅದು ನಿಷ್ಕರ್ಷೆ ಮಾಡಿದ ಮೇಲೆ ಕಾರ್ಯಕ್ರಮವಾಗಿ ಕ್ರಮಪತ್ರಾಗಿ ಹೆಚ್ಚಾಗಿ ಎಷ್ಟು ಸದಸ್ಯರು ಯಾವ ಪಕ್ಷದಲ್ಲಿದ್ದಾರೆ, ಅವರ ನ್ಯೂಮರಿಕಲ್ ಸ್ಟ್ರೆಂಗ್ತ್‌ನ ಮೇಲೆ ಟೋಟಲ್ ಟೈಮನ್ನು ಡಿವೈಡ್ ಮಾಡಿಕೊಂಡು ಸಮಯವನ್ನು ನಿಗದಿ ಮಾಡತಕ್ಕ ಕಾರ್ಯಕ್ರಮ ಇದ್ದರೂ ಕೂಡ ಸಭಾಧ್ಯಕ್ಷರಾದ ತಮ್ಮ ವಿವೇಚನೆಗೆ ಒಳಪಟ್ಟಿದೆ. ವಿರೋಧ ಪಕ್ಷದವರು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಕೂಡ ಅವರಿಗೆ ನಿಗದಿತ ಸಮಯಕ್ಕಿಂತಲೂ ಹೆಚ್ಚು ಅವಕಾಶವನ್ನು

ಕೊಟ್ಟುಕೊಂಡು ಬರತಕ್ಕಂತಹ ಒಂದು ಸತ್ಪ್ರಂಪರೆ ಏನು ಇದೆ, ಅದಕ್ಕೆ ನಾವು ಯಾರೂ ಯಾವ ಸಂದರ್ಭದಲ್ಲೂ ಅಡ್ಡಿ ಬರುವುದಿಲ್ಲ. ಈಗ ತಾವು ಯಾವ ರೀತಿ ಸಮಯವನ್ನು ಕೊಟ್ಟಿದ್ದೀರಿ ಎಂಬುದಕ್ಕೆ ಟೋಟಲ್ ಟೈಮ್ಸ್ ಆನ್ ಹೆಲ್ತ್. ಆರೋಗ್ಯ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಯಾದಾಗ ೬-೧೫ ನಿಮಿಷಗಳ ಅವಕಾಶ ಇದ್ದರೂ ನಮ್ಮ ಪಕ್ಷಕ್ಕೆ ನಿಜವಾಗಿ ೪-೫೫ ಗಂಟೆಗೆ ಅರ್ಹತೆ ಇದ್ದರೂ ಕೂಡ we have taken 4 hours. ಅದೇ ರೀತಿ ಜನತಾ ದಳಕ್ಕೆ ೩೯ ನಿಮಿಷಕ್ಕೆ ಅರ್ಹತೆ ಇದ್ದರೂ ಕೂಡ ೧ ಗಂಟೆಗೆ ೩೦ ನಿಮಿಷ ಅವಕಾಶ ಕೊಟ್ಟಿದ್ದು ಇದೆ. ಅದೇ ಪ್ರಕಾರ ಶಿಕ್ಷಣ ಇಲಾಖೆಯ ಬೇಡಿಕೆ ಬಂದಾಗಲೂ ಕೂಡ ನಮ್ಮ ಪಕ್ಷ ೬ ಗಂಟೆ ಟೈಮಿಗೆ ಎನ್‌ಟೈಟಲ್ ಇದ್ದರೂ ಕೂಡ ೫ ಗಂಟೆ ೬ ನಿಮಿಷ ನಾವು ತೆಗೆದುಕೊಂಡಿದ್ದೇವೆ. ಜನತಾ-ದಳ ಪಕ್ಷಕ್ಕೆ ೪೮ ನಿಮಿಷಕ್ಕೆ ಅರ್ಹತೆ ಇದ್ದರೂ ಕೂಡ ೧ ಗಂಟೆ ೨೫ ನಿಮಿಷ ಅವರು ತೆಗೆದುಕೊಂಡಿದ್ದಾರೆ, ಬೇರೆ ಪಕ್ಷದವರಿಗೂ ಕೂಡ ಅದೇ ತರಹ ಹೆಚ್ಚು ಸಮಯವನ್ನು ಕೊಡಲಾಗಿದೆ. ರೆವಿನ್ಯೂ ಹಾಗೂ ಲೇಬರ್ ಡಿಪಾರ್ಟ್‌ಮೆಂಟ್‌ಗಳ ಡಿಮ್ಯಾಂಡ್ ಬಗ್ಗೆಯೂ ಕೂಡ, ಕಾಂಗ್ರೆಸ್ ಪಕ್ಷಕ್ಕೆ ೭ ಗಂಟೆ ೧೮ ನಿಮಿಷ ಅರ್ಹತೆ ಇದ್ದರೂ ಕೂಡ ೫ ಗಂಟೆ ಮಾತ್ರ ನಾವು ತೆಗೆದುಕೊಂಡಿದ್ದೇವೆ. ಜನತಾ ದಳಕ್ಕೆ ೫೬ ನಿಮಿಷಕ್ಕೆ ಮಾತ್ರ ಅರ್ಹತೆ ಇದ್ದರೂ ಕೂಡ ೨ ಗಂಟೆ ೫೦ ನಿಮಿಷಗಳ ಕಾಲ ಅವಕಾಶವನ್ನು ತಾವು ಅವರಿಗೆ ಕೊಟ್ಟಿದ್ದೀರಿ. ಇದೇ ಪ್ರಕಾರ With regard to Public Works and Irrigation Department ಇವತ್ತು ಚರ್ಚೆಯಾಗತಕ್ಕ ಒಂದು ಇಲಾಖೆ ಏನು ಇದೆ, ಅದಕ್ಕೆ ಕಾಂಗ್ರೆಸ್ ಪಕ್ಷಕ್ಕೆ ೪ ಗಂಟೆ ೧೫ ನಿಮಿಷ ಅರ್ಹತೆ ಇದ್ದರೂ ನಾವು ಇಲ್ಲಿಯವರೆಗ ತೆಗೆದುಕೊಂಡದ್ದು ೩ ಗಂಟೆ ೧೫ ನಿಮಿಷ ಮಾತ್ರ. ಜನತಾ ದಳಕ್ಕೆ ೩೨ ನಿಮಿಷ ಮಾತ್ರ ಅರ್ಹತೆ ಇದ್ದರೂ ಕೂಡ ೧ ಗಂಟೆ ೨೦ ನಿಮಿಷ ಈಗಾಗಲೇ ಕಳೆದಿದ್ದಾರೆ. ಜನತಾ ಪಕ್ಷ ೧೦ ನಿಮಿಷ ತೆಗೆದುಕೊಂಡಿದೆ. ಉಳಿದವರೂ ಕೂಡ ೪೫ ನಿಮಿಷ ತೆಗೆದುಕೊಂಡಿದ್ದಾರೆ, ಆದ್ದರಿಂದ ಟೈಮ್ ಅಲಾಟ್‌ಮೆಂಟ್‌ನಲ್ಲೂ ಏನಾದರೂ ಲೋಪ ದೋಷವಾಗಿದೆಯೇ, ಅಥವಾ ಸಮಯವನ್ನು ಕೊಟ್ಟಿಲ್ಲ ಎಂಬ ವಾದ ಏನು ಇದೆ. ಬಹುಶಃ ಅದು ಆಧಾರರಹಿತವಾದ ಒಂದು ಆರೋಪವಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಸಹಕಾರ ಇಲಾಖೆಯ ಬೇಡಿಕೆ ಬಂದಾಗ ೫೮ ನಿಮಿಷ ಮಾತ್ರ ವಿರೋಧಪಕ್ಷದವರಿಗೆ ಅವಕಾಶ ಇದ್ದರೂ ಕೂಡ ಜನತಾ ದಳ ಒಂದೇ ೨ ಗಂಟೆ ೪೦ ನಿಮಿಷ ತೆಗೆದುಕೊಂಡಿದೆ. ಇದೇ ಪ್ರಕಾರ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಬಂದಾಗ ಅವರಿಗೆ ೩೨ ನಿಮಿಷ ಮಾತ್ರ ಅವಕಾಶ ಇದ್ದರೂ ಕೂಡ ೧ ಗಂಟೆ ೫೦ ನಿಮಿಷ ತೆಗೆದುಕೊಂಡಿದ್ದಾರೆ. ಬಾಕಿ ಉಳಿದವರು ೪೨ ನಿಮಿಷಗಳ ಕಾಲ ತೆಗೆದು ಕೊಂಡಿದ್ದಾರೆ. ಆದ್ದರಿಂದ ನಮ್ಮಲ್ಲಿ ಸಂಖ್ಯೆ ಜಾಸ್ತಿ ಇದೆ ಅಂತ ಹೇಳಿ. ನಾವು ಸಂಖ್ಯಾ ಬಲದಿಂದ ಈ ಸದನದಲ್ಲಿ ಒಂದು ರೀತಿಯ ದಬ್ಬಾಳಿಕೆ ಮಾಡತಕ್ಕ, ಸಂಖ್ಯೆಯ ಆಧಾರವನ್ನು ಅಥವಾ ಅಧಿ ಕಾರವನ್ನು ದುರುಪಯೋಗ ಮಾಡತಕ್ಕ ಒಂದು ವಿಚಾರಕ್ಕೆ ನಾವು ಹೋಗಲಿಲ್ಲ. ಬಹುಶಃ ವಿರೋಧ ಪಕ್ಷದ ಬಗ್ಗೆ ನಿಷ್ಪಕ್ಷಪಾತವಾಗಿ ಮತ್ತು ಈ ಸದನದಲ್ಲಿ ಏನೊಂದು ಸತ್ಪರಂಪರೆ ಬೆಳೆದು ಕೊಂಡು ಬಂದಿದೆ, ಅದನ್ನು ಎತ್ತಿ ಹಿಡಿಯತಕ್ಕ ಎಲ್ಲ ಪ್ರಯತ್ನಗಳನ್ನೂ ಕೂಡ ತಾವು ಮಾಡಿದ್ದೀರಿ ಎಂಬುದು ಇಲ್ಲಿನ ರೆಕಾರ್ಡುಗಳಿಂದ ಇವತ್ತು ಖಂಡಿತವಾಗಿ ತಿಳಿದು ಬಂದಿದೆ.

ಇವತ್ತು ವಿರೋಧ ಪಕ್ಷದವರು ಆಕ್ಷೇಪಣೆಯನ್ನು ಎತ್ತಿದ್ದಾರೆ. Taking advantage of the brute majority... ಇವರ ಆಟಿಟ್ಯೂಡೇ ಇಲ್ಲ. ಏಕೆಂದರೆ, ruling party attitude what is that attitude-we would like to know-perhaps ಇಲ್ಲಿ ಬಂದು ಏನಾದರೂ ಹೇಳಿದ್ದರೆ ನಡೆಯುತ್ತಾ ಇತ್ತು ಸನ್ಮಾನ್ಯ ಅಧ್ಯಕ್ಷರೇ, ಈಗ ತಾವು ಸಮಾಲೋಚನೆ ಮಾಡಿದ್ದೀರಿ, ಇಲ್ಲಿ ಬಂದು ಭಾಗವಹಿಸಬೇಕೆಂದೂ ತಮ್ಮ ಸಮಕ್ಷಮದಲ್ಲಿ ಚರ್ಚೆ ಆಗಬೇಕೆಂದೂ ಹೇಳಿದ್ದೀರಿ. ನಾವೂ ಕೂಡಾ ಅಪೀಲ್ ಮಾಡಿದ್ದೇವೆ, ನಮ್ಮ ಅಪೀಲ್‌ಗೆ ಸರಿಯಾಗಿ ತಾವೂ ಕೂಡಾ ಭಾಗವಹಿಸಬೇಕೆಂದು ಕೇಳಿ ಕೊಂಡಾಗ ವಿರೋಧಪಕ್ಷದವರು, ಇಲ್ಲ ನಾವು ಈಗಾಗಲೇ ನಿರ್ಣಯ ಮಾಡಿದ್ದೇವೆ. We stick to our decision to meet at 50 clock. ಎಂದು ಹೇಳಿದ್ದಾರೆ. ಈ ಸದನದ ಸತ್ಪರಂಪರೆಗಳನ್ನು ಎತ್ತಿ ಹಿಡಿಯುತಕ್ಕಂಥಾದ್ದೂ ಕೂಡಾ ನಮ್ಮ ಕರ್ತವ್ಯ. ನಮಗೆ ಇಲ್ಲಿ ಎಷ್ಟೇ ಬಹುಮತ ಇರಲಿ, ನಮ್ಮ ಚರ್ಚೆ ವಿರೋಧಪಕ್ಷದವರ ಸಮಕ್ಷಮದಲ್ಲಿ ಆದಾಗ ಮಾತ್ರ ಆ ಚರ್ಚೆ ಅರ್ಥಪೂರ್ಣವಾಗುತ್ತದೆ. ಈ ಒಂದು ಪ್ರಜಾಪ್ರಭುತ್ವದ ಸೂತ್ರದಲ್ಲಿ ನಮಗೆ ಸಂಪೂರ್ಣವಾದ ವಿಶ್ವಾಸ ಇದೆ. ಒಂದೊಂದು ನಿಮಿಷಕ್ಕೆ ಇಲ್ಲಿ ಎಷ್ಟು ಖರ್ಚು ಆಗುತ್ತದೆ ಎಂಬುದು ತಮಗೂ ಕೂಡಾ ಗೊತ್ತಿದೆ, ಅದರಲ್ಲೂ ಇವತ್ತು ಅತ್ಯಂತ ಪ್ರಮುಖವಾದ ಬೇಡಿಕೆ ಚರ್ಚೆಯಾಗುತ್ತಿದೆ. ಈ ಚರ್ಚೆಗೆ ನಮ್ಮ ವಿರೋಧ ಪಕ್ಷದ ನಾಯಕರ, ವಿರೋಧ ಪಕ್ಷದ ಸದಸ್ಯರ ಸಂಪೂರ್ಣವಾದ ಸಲಹೆಗಳು ಬೇಕು, ಸರ್ಕಾರಕ್ಕೆ ಅವರ ಸಹಾಯ ಬೇಕು. ಈ ಒಂದು ಸದನದ ವೇದಿಕೆಯನ್ನು ಉಪಯೋಗ ಮಾಡಿಕೊಂಡು ಅಂತಹ ಒಂದು

ಸಲಹೆ ಸೂಚನೆಗಳನ್ನು ಅವರು ನಮ್ಮ ಸರ್ಕಾರಕ್ಕೆ ಕೊಟ್ಟಾಗ ನಾವು ಅದನ್ನು ಸ್ವೀಕಾರ ಮಾಡುವುದಕ್ಕೆ ಸಿದ್ಧರಿದ್ದೇವೆ. ಆದುದರಿಂದ ಸನ್ಮಾನ್ಯ ಅಧ್ಯಕ್ಷರೇ, ನನ್ನ ಸೂಚನೆ ಏನೆಂದರೆ, ತಮ್ಮ ಆದೇಶಕ್ಕೆ ನಾವು ಬಿಟ್ಟುಕೊಟ್ಟಿದ್ದೇವೆ. ತಾವು ಆದೇಶವನ್ನು ನೀಡಬೇಕು. ತಮ್ಮ ಕೊನೆಯ ತೀರ್ಪಿಗೆ ನಾವು ಯಾವಾಗಲೂ ತಲೆಬಾಗುತ್ತೇವೆ. ಆದುದರಿಂದ ನಾವು ನಮ್ಮ ಸರ್ಕಾರದ ಮಟ್ಟಿಗೆ ಅಥವಾ ನಮ್ಮ ಕಡೆಯಿಂದ ಚರ್ಚೆಗೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ. ನಮ್ಮ ಉದ್ದೇಶ ಏನೆಂದರೆ, ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಈ ಸದನದಲ್ಲಿ ಇದ್ದಾಗ ಅವರ ಸಮಕ್ಷಮದಲ್ಲಿ ಚರ್ಚೆ ಮಾಡಬೇಕೆಂದಿದೆ. ನಿಜವಾಗಿ ಇಲ್ಲಿನ ಪ್ರತಿ ನಿಮಿಷ ಕೂಡ ಅಮೂಲ್ಯ. ಈ ಸದನ ಕಳೆದ ಮೇಲೆ ನಮ್ಮ ಸರ್ಕಾರದ ಮೇಲೆ ಅಥವಾ ನಮ್ಮ ರಾಜ್ಯದ ಜನರ ಮೇಲೆ ಏನು ಭಾರ ಬೀಳುತ್ತದೆ ಆ ವಿಚಾರವನ್ನು ಮನಗಂಡು ನಾವು ಎಲ್ಲಾ ಸದಸ್ಯರು ಕೆಲಸ ಮಾಡಬೇಕಾಗಿದೆ. ಆದುದರಿಂದ ಇವತ್ತು ಈ ಸದನದ ಚರ್ಚೆ ಪರಿಪೂರ್ಣವಾಗಿ ನಡೆಯುವ ರೀತಿಯಲ್ಲಿ ತಾವು ಪುನಃ ಐದು ಅಥವಾ ಐದೂವರೆ ಗಂಟೆಗೆ ಪುನಃ ಸಭೆ ಸೇರಿ ಅವರು ಬಂದರೆ ಅವರ ಸಮಕ್ಷಮದಲ್ಲೇ ಚರ್ಚೆ ಮಾಡುವುದಕ್ಕೆ ಅನುವು ಮಾಡಿಕೊಡುವುದಾದರೆ ಅದೇ ಅಪೇಕ್ಷೆ ಕೂಡಾ ನಮ್ಮದೂ ಇದೆ. ಇದು ಆಗುತ್ತದೆ. ಅವರು ಇದರಲ್ಲಿ ಎಷ್ಟೇ ಪ್ರತಿಷ್ಠೆಯ ಪ್ರಶ್ನೆ ಇಟ್ಟುಕೊಳ್ಳಲಿ ಅಥವಾ ಯಾವುದೇ ಕಾರಣ ಇಲ್ಲದೇ ಇದ್ದರೂ, ಪ್ರಚೋದನೆ ಇಲ್ಲದೇ ಇದ್ದರೂ ಕೂಡಾ ನಾವು ಹಿಡಿದ ಪಟ್ಟನ್ನು ಬಿಡುವುದಿಲ್ಲ ಎಂದು ಹೇಳಿ, ಕಾರಣ ರಹಿತವಾಗಿ, ಆಧಾರ ರಹಿತವಾಗಿ ಅವರು ಇದ್ದರೂ ಕೂಡಾ ನಾವು ಬಹುಮತದ ಆಡಳಿತದಲ್ಲಿ ಇರುವುದರಿಂದ We would like to be more graceful–that doesn't mean they are not graceful. They are very graceful ಇಷ್ಟರವರೆಗೆ ಸದನದ ಕಾರ್ಯಕಲಾಪ ಬಹಳ ನೆಮ್ಮದಿಯಿಂದ ನಡೆದುಕೊಂಡು ಬಂದಿದೆ. ನಿನ್ನೆ ಅಕಸ್ಮಾತಾಗಿ ಅವರು ಏಕೆ ತಿರುಗಿಬಿದ್ದಿದ್ದಾರೂ ನಮಗಂತೂ ಗೊತ್ತಿಲ್ಲ ಪುನಃ ಐದೂವರೆ ಗಂಟೆಗೆ ಸಮಾಲೋಚನೆಗೆ ತಾವು ಅವರನ್ನು ಕರೆಸಿ; ನಾವೂ ಕೂಡಾ ಸಿದ್ಧರಿದ್ದೇವೆ, ಚರ್ಚೆ ಮಾಡೋಣ. ಆದರೆ ಏನಾಗಿದೆ ಎಂದರೆ, they have kept their secret for boycotting very close to their chest...ಅದು ಕಾರಣ. That mystery is still unravelled, Why they have done it ? ಅದಕ್ಕೆ ಮಾನ್ಯ ಖರ್ಗೆಯವರು ಬೇರೆ ಬೇರೆ ಕಾರಣ ಹೇಳಬಹುದು. That mystery is still there which they have not unravelled... ಆದರೆ ಇವತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಅತ್ಯಂತ ಪ್ರಮುಖವಾದ ಒಂದು ಇಲಾಖೆಯ ಬೇಡಿಕೆ ಮೇಲಿನ ಚರ್ಚೆಯಲ್ಲಿ ಅವರು ಭಾಗವಹಿಸಬೇಕೆಂಬ ಸದಿಚ್ಛೆಯಿಂದ ಐದು–ಐದೂವರೆ ಗಂಟೆಯವರೆಗೆ ಸದನವನ್ನು ಮುಂದುವರಿಸಿ ಅವರನ್ನು ಕರೆದು ಈ ಸದನದಲ್ಲಿ ಮುಂದೆ ನಡೆಯತಕ್ಕ ಈ ಇಲಾಖೆಯ ಬೇಡಿಕೆಯ ಚರ್ಚೆಯಲ್ಲಿ ಅವರು ಭಾಗವಹಿಸುವುದಕ್ಕೆ ಅನುವು ಮಾಡಿಕೊಡುವುದಿದ್ದರೆ ನಮಗೆ ಬಹಳ ಸಂತೋಷ. ನಾವು ಸ್ವಾಗತ ಮಾಡುತ್ತೇವೆ. ಇನ್ನು ಮುಂದೆ ಇದರ ಅಂತಿಮ ತೀರ್ಪಿಗೆ ತಮ್ಮ ವಿವೇಚನೆಗೆ ನಾವು ಬಿಟ್ಟಿದ್ದೇವೆ. ಆದರೆ ಯಾವುದೇ ಪ್ರಚೋದನೆ ಇಲ್ಲದೇ, ಕಾರಣ ಇಲ್ಲದೇ, ಆಧಾರ ಇಲ್ಲದೇ ನಾನು ಈಗಾಗಲೇ ಡಿಬೇಟನ್ನು—ಓದಿ ಹೇಳಿದಂತೆ, ಯಾವುದೇ ರೀತಿಯಾದ ಕಾರಣವನ್ನು ನಿನ್ನೆ ಕೊಡದೆ ಇವತ್ತು ಹೊಸ ಕಾರಣವನ್ನು ಹುಡುಕಿ ಅದಕ್ಕೆ ಪ್ರಚಾರ ಕೊಟ್ಟು ಆಗಿದೆ. ಬಹುಶಃ ಮಾನ್ಯ ವಿರೋಧಪಕ್ಷದ ನಾಯಕರು ಈ ಸದನದಲ್ಲಿ ಹಿಂದೆ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನನಗನಿಸುತ್ತದೆ ಇದಕ್ಕೆ ಹೊರತಾದಂತಹ reasons which are extraneous–subjects raised to-day and yesterday would not have been used by the Leader of Opposition for political reason...ಈ ಹೇಳಿಕೆಯನ್ನು ರಾಜಕೀಯವಾಗಿ ಉಪಯೋಗ ಮಾಡದೆ ಸದನದಲ್ಲಿ ಚರ್ಚೆ ಮಾಡಲಿಕ್ಕೆ ಅನುವು ಮಾಡಿಕೊಡಿ ; ಪುನಃ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ. ಈ ಘಟನೆ ನಡೆದಾಗ ನಾನು ಈ ಸದನದಲ್ಲಿದ್ದೆ. ಇಂತಹ ಘಟನೆ ನಡೆದಂತಹ ಕಾಲದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದಂತಹ ಉಪಾಧ್ಯಕ್ಷಿಣಿಯವರು ವಿರೋಧಪಕ್ಷದ ನಾಯಕರಲ್ಲಿ, ವಿರೋಧಪಕ್ಷದ ಉಪನಾಯಕರಲ್ಲಿ ಮತ್ತು ವಿರೋಧಪಕ್ಷದ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಂಡರು. ತಮಗೆ ಮಾತನಾಡಲಿಕ್ಕೆ ನಾನು ಕಾಲವನ್ನು ಕೊಡುತ್ತೇನೆ. ತಾವು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಅವರಲ್ಲಿ ಕೇಳಿಕೊಂಡರು. ಅಷ್ಟೆ ಅಲ್ಲ, ಈಗತಾನೇ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದನ್ನೆಲ್ಲ ನಾನೂ ಸಹ ಪ್ರತಿಪಾದನೆ ಮಾಡುತ್ತಾ, ಇಡೀ ಕರ್ನಾಟಕ ಜನತೆಗೆ ನಿಮ್ಮ ಮೇಲೆ ಅಪಾರವಾದಂತಹ ನಂಬಿಕೆ ಇದೆ. ನೀವು ಈ ವಿಧಾನಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಮೇಲೆ ವಿರೋಧಪಕ್ಷ ಆಳುವ ಪಕ್ಷ ಮತ್ತು ಸ್ವತಂತ್ರರಾಗಿ ಆರಿಸಿ ಬಂದಿರತಕ್ಕ ಎಲ್ಲ ರಾಜಕೀಯ ಪಕ್ಷಗಳ ಸದಸ್ಯರು ತಮ್ಮ ಮೇಲೆ ಅಪಾರವಾದ ಗೌರವವನ್ನು ಪ್ರೀತಿಯನ್ನು ಇಟ್ಟು

ಕೊಂಡಿದ್ದಾರೆ ; ಅಷ್ಟೇ ಅಲ್ಲ, ಅದನ್ನು ವ್ಯಕ್ತಪಡಿಸಿದ್ದಾರೆ. ಆಳುವಪಕ್ಷ ವಿರೋಧ ಪಕ್ಷವೆಂದು ತಾವು ಎಂದೂ ನೋಡಿಲ್ಲ. ಅನೇಕ ಬಾರಿ ಚರ್ಚೆ ನಡೆಯತಕ್ಕ ಕಾಲದಲ್ಲಿ, ಪ್ರಶ್ನೋತ್ತರ ವೇಳೆಯಲ್ಲಿ, ಗಮನ ಸೆಳೆಯುವ ಸೂಚನೆಯ ಕಾಲದಲ್ಲಿ ಇವರಿಗೆ ಸಾಕಷ್ಟು ಅವಕಾಶವನ್ನು ಕೊಟ್ಟಿರುವುದನ್ನು ನಾನು ನೋಡಿದ್ದೇನೆ, ಆಳುವ ಪಕ್ಷಕ್ಕಿಂತ ವಿರೋಧ ಪಕ್ಷದವರಿಗೆ ಹೆಚ್ಚಿನ ಕಾಲವನ್ನು ತಾವು ಕೊಟ್ಟಿದ್ದೀರಿ. ನನಗಾದರೂ ಆ ಬಗ್ಗೆ ಅಪಾರವಾದ ನಂಬಿಕೆಯಿದೆ. ತಮ್ಮ ಅಧ್ಯಕ್ಷಗಿರಿಯಲ್ಲಿ ಕಾಲವ್ಯಯವನ್ನು ಮಾಡದೆ ವಿಧಾನಸಭೆ ನಡೆಯಬೇಕಾದರೆ ಜನಸಾಮಾನ್ಯರ ಹಣ ಏನು ಪೋಲಾಗುತ್ತದೆ, ಆ ಹಣ ಪೋಲಾಗುವುದಕ್ಕೆ ಅವಕಾಶ ಕೊಡದೆ ತಮ್ಮ ಮಾತಿಗೆ ಅವರು ಗೌರವ ಕೊಡುತ್ತಾರೆಂಬ ಭಾವನೆ ನನಗಿದೆ. ತಾವು ಅವರನ್ನು ಕರೆಸಿ ಮತ್ತೊಮ್ಮೆ ಈ ಸದನದಲ್ಲಿ ಸರಿಯಾದ ರೀತಿಯಲ್ಲಿ ಚರ್ಚೆಗೆ ಅವಕಾಶ ಕೊಡತಕ್ಕಂಥ ವ್ಯವಸ್ಥೆ ತಾವು ಮಾಡುತ್ತೀರಿ ಎನ್ನುವ ಪೂರ್ಣ ನಂಬಿಕೆ ನಿಮ್ಮ ಮೇಲಿದೆ, ಅದನ್ನು ಮುಂದುವರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಏನು ಸಲಹೆ ಮಾಡಿದ್ದಾರೆ ಆ ಸಲಹೆಯನ್ನು ನಾನು ಒಪ್ಪುತ್ತೇನೆ. ಈಗ ಸಭೆಯನ್ನು ಮುಂದೂಡಿ ಮತ್ತೆ ೫–೩೦ ಗಂಟೆಗೆ ಸಮಾವೇಶವಾಗೋಣ.

(ಸದನವನ್ನು ೩ ಗಂಟೆ ೪೯ ನಿಮಿಷಗಳಿಗೆ ಮುಂದೂಡಲಾಯಿತು)

(ಸದನವು ೬–೦೦ ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷ ಶ್ರೀ ಎಸ್‌, ಎಂ. ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

MR. SPEAKER.—Hon'ble Minister for Law and Parliamentary Affairs.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಅಪೇಕ್ಷೆಯನ್ನು ತಮಗೆ ತಿಳಿಸಿದ್ದೇವೆ. ವಿರೋಧ ಪಕ್ಷದ ಸದಸ್ಯರುಗಳನ್ನು ಬಿಟ್ಟು ನಾವು ಸದನದಲ್ಲಿ ಚರ್ಚೆ ಮಾಡಬೇಕೆಂಬ ಅಪೇಕ್ಷೆಯನ್ನು ಹೊಂದಿಲ್ಲ. ಆದರೂ ಕೂಡ ಅವರಿಗೆ ಪುನಃ ಚಿಂತನೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ. ತಮ್ಮ ಪೀಠದಿಂದಲೂ ಕೂಡ ಪ್ರಚೋದನೆ ಯಾವುದೂ ಇಲ್ಲದೆ, ತಾವುಗಳು ಇವೊತ್ತು ಅಪೀಲ್ ಮಾಡಿದ್ದೀರಿ. ನಾವೂ ಕೂಡ ಹೇಳಿದ್ದೇವೆ. ಅವರುಗಳು ಪ್ರತಿಷ್ಠೆಯ ಪಟ್ಟು ಹಿಡಿದು ಇವೊತ್ತು ಹೊರಗೆ ಉಳಿದಿದ್ದಾರೆ. ಈ ರೀತಿಯಾಗಿ ಕಾರಣ ಇಲ್ಲದೆ ಸದನಕ್ಕೆ ಬಾರದೆ ಬಹಿಷ್ಕಾರ ಹಾಕುವಂಥಾದ್ದರ ಬಗ್ಗೆ ಅವರು ಪುನಃ ಚಿಂತನೆ ಮಾಡಬೇಕಾಗುತ್ತದೆ. ತಾವು ಇವೊತ್ತು ೫–೩೦ ಗಂಟೆಗೆ ಸಮಾಲೋಚನೆ ಮಾಡಬೇಕೆಂದು ಹೇಳಿದ್ದೀರಿ. ವಿರೋಧ ಪಕ್ಷದ ನಾಯಕರು ಬಂದು ಮಾತನಾಡಿದ್ದಾರೆ. ಆದರೂ ಕೂಡ ಇವೊತ್ತು ಅವರು ಬಹಿಷ್ಕಾರ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿರುವ ಹಾಗೆ ಕಾಣುತ್ತದೆ. ಆದುದರಿಂದ ನಾಳೆಯವರೆಗೆ ಅವರಿಗೆ ಅವಕಾಶ ಕೊಡುವುದು ಒಳ್ಳೆಯದು. ಏಕೆಂದರೆ ಈಗಾಗಲೇ ೬–೦೦ ಗಂಟೆ ಆಯಿತು. We would like to be quite graceful in this. ಈ ಬಗ್ಗೆ ಬಹಳ ಅವಸರ ಮಾಡಿ ಚರ್ಚೆಯನ್ನು ಮುಂದುವರಿಸಬೇಕು, ಬೇಡಿಕೆಯನ್ನು ಪಾಸ್ ಮಾಡಿಸಿಕೊಳ್ಳಬೇಕು ಎಂಬ ಆತುರವು ನಮ್ಮಲ್ಲಿ ಇಲ್ಲ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ಚರ್ಚೆಯಲ್ಲಿ ಭಾಗ ವಹಿಸುವುದು ಅವರ ಕರ್ತವ್ಯವಾಗಿದೆ, ಆ ಒಂದು ಪರಿಜ್ಞಾನದ ಮೂಲಕ ಅವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕು. ಅಂತೆಯೇ ನಾವು ಕೂಡ ಅದೇ ರೀತಿಯಲ್ಲಿ ಜನತೆಯ ಹಿತದೃಷ್ಟಿಯಿಂದ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಉಳಿದಂತೆ ತಮ್ಮ ವಿವೇಚನೆಗೆ ಬಿಟ್ಟಿದ್ದೇವೆ. ನಮ್ಮ ಅಂಬೋಣದಂತೆ ನಾಳೆಯಾದರೂ ಅವರು ಸದನಕ್ಕೆ ಬರಬೇಕು ಮತ್ತು ಅವರು ಬರುತ್ತಾರೆ ಎಂದು ಅಪೇಕ್ಷೆ ಮಾಡುತ್ತೇನೆ.

ಅಧ್ಯಕ್ಷರು.—ಸಭೆಯು ದಿನದ ಕಾರ್ಯಕಲಾಪಗಳನ್ನು ಇಲ್ಲಿಗೆ ಮುಗಿಸಿ ಮತ್ತೆ ನಾಳೆ ಬೆಳಿಗ್ಗೆ ೧೧–೦೦ ಗಂಟೆಗೆ ಪುನಃ ಸಮಾವೇಶಗೊಳ್ಳುತ್ತದೆ.

ಸದನವು ೬ ಗಂಟೆ ೪ ನಿಮಿಷಕ್ಕೆ ಮುಕ್ತಾಯವಾಗಿ, ಪುನ: ದಿನಾಂಕ ೭ನೇ ಜುಲೈ ಮಾಹೆ ೧೯೮೦ರ ಶನಿವಾರದಂದು ಬೆಳಿಗ್ಗೆ ೧೧.೦೦ ಗಂಟೆಗೆ ಸೇರಲು ನಿಶ್ಚಯಿಸಿತು.